# ಕರ್ಮ

ನೀವು ಕೊಟ್ಟದ್ದನ್ನು ಹಿಂತಿರುಗಿ ಪಡೆಯುತ್ತೀರಿ: ಇದು ಕರ್ಮದ ನಿಯಮ



ಲೇಖಕರು
**ಎಐಆರ್**
ಆತ್ಮ ಇನ್ ರವಿ

# ಕರ್ಮ

## ನೀವು ಕೊಟ್ಟದ್ದನ್ನು ಮರಳಿ ಪಡೆಯುತ್ತೀರಿ: ಇದು ಕರ್ಮದ ನಿಯಮ

ಲೇಖಕರು

**ಎಐಆರ್**

ಆತ್ಮ ಇನ್ ರವಿ

# ಕರ್ಮ

ನೀವು ಕೊಟ್ಟದ್ದನ್ನು ಮರಳಿ ಪಡೆಯುತ್ತೀರಿ: ಇದು ಕರ್ಮದ ನಿಯಮ

ಲೇಖಕರು

**ಎಐಆರ್**

ಕೃತಿಸ್ವಾಮ್ಯ: © ಎಐಆರ್ ಇನ್ಸ್ಟಿಟ್ಯೂಟ್ ಆಫ್ ರಿಯಲೈಸೇಷನ್ 2018
ಎಐಆರ್ ರವರು ಈ ಪುಸ್ತಕದ ಲೇಖಕರಾಗಿದ್ದು, ಇದರ ಹಕ್ಕನ್ನು ಹೊಂದಿರುತ್ತಾರೆ.

ISBN 978-93-5346-245-1

ಎಲ್ಲಾ ಹಕ್ಕುಗಳನ್ನೂ ಕಾಯ್ದಿರಿಸಲಾಗಿದೆ.

ಈ ಪುಸ್ತಕದ ಯಾವುದೇ ಭಾಗವನ್ನು (ಚಿತ್ರಗಳನ್ನು ಹೊರತುಪಡಿಸಿ) ಪುನರ್ ಮುದ್ರಿಸುವುದು, ಯಾವುದೇ ರೂಪ ಮತ್ತು ಮಾಧ್ಯಮಗಳಲ್ಲಿ ಶೇಖರಿಸುವುದು ಅಥವಾ ಎಲೆಕ್ಟ್ರಾನಿಕ್, ಮುದ್ರಣ ಅಥವಾ ಫೋಟೋಕಾಪಿಯಿಂಗ್ ಮೂಲಕ ಪ್ರತಿಗಳನ್ನು ಮಾಡುವುದು ಅಥವಾ ಅವುಗಳ ಧ್ವನಿಮುದ್ರಣ ಅಥವಾ ಚಿತ್ರೀಕರಣ ಇತ್ಯಾದಿಗಳನ್ನು ಲೇಖಕರ ಮತ್ತು ಪ್ರಕಾಶಕರ ಅನುಮತಿಯಿಲ್ಲದೆ ಮಾಡುವುದನ್ನು ನಿಷೇಧಿಸಿದೆ.

ಮುದ್ರಕರು: **ನವ್ಯಾ ಗ್ರಾಫಿಕ್ಸ್**
ನಂ. 8, 12ನೇ ಮುಖ್ಯ ರಸ್ತೆ, 14ನೇ ಅಡ್ಡರಸ್ತೆ, ಲಕ್ಕಸಂದ್ರ ಎಕ್ಸ್‌ಟೆನ್ಶನ್, ವಿಲ್ಸನ್ ಗಾರ್ಡನ್, ಬೆಂಗಳೂರು- 560030

ಪ್ರಕಾಶಕರು: **ಎಐಆರ್**
ಕೆಂಪ್ ಫೋರ್ಟ್ ಮಾಲ್, ನಂ 97, ಹಳೇ ಏರ್‌ಪೋರ್ಟ್ ರಸ್ತೆ, ಬೆಂಗಳೂರು- 560017

# ಪರಿವಿಡಿ


| | |
|---|---|
| ಕರ್ಮ ಎಂದರೇನು? | 1 |
| ಕರ್ಮದ ನಿಯಮಗಳು ಹೇಗೆ ಕೆಲಸ ಮಾಡುತ್ತವೆ? | 11 |
| ಕರ್ಮವೆಂಬುದು ನಿಜವಾಗಿಯೂ ಅಸ್ತಿತ್ವದಲ್ಲಿದೆಯೇ? | 22 |
| ಕರ್ಮದ ಮೂರು ಖಾತೆಗಳು | 35 |
| ನಮ್ಮ ಬದುಕಿನಲ್ಲಿ ಕರ್ಮ | 47 |
| ಕರ್ಮ, ಸಾವು ಮತ್ತು ಪುನರ್ಜನ್ಮ | 55 |
| ಕರ್ಮದಿಂದ ಬಿಡುಗಡೆ | 61 |
| ಕರ್ಮದ ನಿಯಮಗಳನ್ನು ನಿರ್ವಹಿಸುವವರು ಯಾರು? | 72 |
| ಅರಿವಿನಿಂದ ಕರ್ಮವನ್ನು ಮೀರಬಹುದು | 81 |
| ಅರಿವಿನ ವಿಧಾನಗಳು | 88 |
| ಬದುಕಿನ ವೀಕ್ಷಕನಾಗಿ | 105 |
| ನಿಜವಾದ ಕರ್ಮಯೋಗಿ | 110 |
| ನಮ್ಮ ಅಂತಿಮ ಗುರಿ - ನಿರ್ವಾಣ ಅಥವಾ ಮೋಕ್ಷ | 116 |
| ಕರ್ಮದ ಬಗ್ಗೆ ಪದೇ-ಪದೇ ಕೇಳಲಾಗುವ ಪ್ರಶ್ನೆಗಳು | 121 |
| ಕವಿತೆ | 129 |
| ಲೇಖಕರ ಕುರಿತು | 134 |

ನಾನೇನು ಮಾಡಿದೇ ಓ ಗುರುವೇ!
ದೈವ ನನ್ನನ್ನು ನಿನ್ನ ಬಳಿಗೆ ಕೊಂಡೊಯ್ದು?
ನೀನಿಲ್ಲದೇ ನಾನೆಲ್ಲಿ

ಪ್ರತಿ ದಿನದ ಗಾಢ ಅಂಧಾಕಾರದಲ್ಲಿ ಕಳೆದು ಹೋಗುವೆ.
ನೀ ನನ್ನ ಕೈ ಹಿಡಿದು ನಡೆಸಿದೆ
ಸತ್ಯದ ಹಾದಿಯಲ್ಲಿ ಮುಕ್ತಿಯ ಕಡೆಗೆ,
ದೇಹ ಮತ್ತು ಆತ್ಮಗಳು ನಾನಲ್ಲ ಎಂಬ ಅರಿವಿನೆಡೆಗೆ.

ನನ್ನ ಹೃದಯದಾಳದಲ್ಲಿ ನೀನು ಎಂದೆಂದಿಗೂ ನೆಲೆಸಿರುವೆ
ನನ್ನ ಗುರುವಾಗಿ ಮತ್ತು ದೇವನಾಗಿ ಈ ಭೂಮಿಯ ಮೇಲೆ.
ಕೃತಜ್ಞತೆಯ ಮಾತುಗಳಷ್ಟೇ ಹೇಗೆ ಬಣ್ಣಿಸಬಲ್ಲವು
ನಿನ್ನ ನಿಜವಾದ ಮೌಲ್ಯವನ್ನು!

# ನನ್ನ ಗುರುವಿಗೆ ನಮನ

ದಾದಾ ಅವರಲ್ಲಿ ನಾನು ನನ್ನ ನೋವು, ದುಃಖಗಳನ್ನು ಹೇಳಿಕೊಂಡಾಗ ಅವರು ನನಗೆ "ನೀನು ಸಂತೋಷಪಡಬೇಕು" ಎಂದು ಹೇಳಿದರು. ನನಗೆ ಅರ್ಥವಾಗಲಿಲ್ಲ. ಆಶ್ಚರ್ಯದಿಂದ ಅವರತ್ತ ನೋಡಿದೆ. ಅದಕ್ಕೆ ಅವರು ನಸುನಗುತ್ತಾ ಹೇಳಿದರು, "ಈ ಜಗತ್ತಿನಲ್ಲಿ ಯಾವುದೂ ಆಕಸ್ಮಿಕವಾಗಿ ನಡೆಯುವುದಿಲ್ಲ. ಎಲ್ಲವೂ ನಮ್ಮ ಕರ್ಮದ ಫಲ. ಇದನ್ನು ಯಾರಿಂದಲೂ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ." ನನ್ನ ಗುರುಗಳು ಈ ಭೌತಿಕ ಜಗತ್ತನ್ನು ತ್ಯಜಿಸಿದರೂ ನನ್ನ ಹೃದಯದಾಳದಲ್ಲಿ ಶಾಶ್ವತವಾಗಿ ನೆಲೆಸಿದ್ದಾರೆ. ಅವರು ತೋರಿದ ಪ್ರೀತಿ, ಘನತೆ, ಗಾಂಭೀರ್ಯ ಮತ್ತು ನನಗೆ ನೀಡಿದ ಮಾರ್ಗದರ್ಶನಗಳಿಂದಾಗಿ ನಾನು ಆತ್ಮದ ಅರಿವಿನತ್ತ ಮತ್ತು ದೇವರತ್ತ ಮುನ್ನಡೆಯಲು ಸಾಧ್ಯವಾಯಿತು. ಅದಕ್ಕಾಗಿ ನಾನು ಅವರಿಗೆ ತಲೆಬಾಗಿ ನಮಿಸುತ್ತೇನೆ.

ದಾದಾರವರೆ ಸ್ವತಃ ಕರ್ಮದ ಬಗ್ಗೆ ಒಂದು ಪುಸ್ತಕವನ್ನು ಬರೆದಿದ್ದರು. ಅದರಲ್ಲಿ ಅವರು ನಾವು ನಮ್ಮ ಜೀವನದಲ್ಲಿ ನಮಗೆ ಯಾವುದೇ ತೊಂದರೆಯುಂಟಾದಾಗ ದೇವರು ನಮ್ಮ ಬಗ್ಗೆ ನ್ಯಾಯಯುತವಾಗಿ ನಡೆದುಕೊಳ್ಳಲಿಲ್ಲವೆಂದು ದೂರುತ್ತೇವೆ. ಆದರೆ, ನಾವೆಲ್ಲರೂ ಕರ್ಮವೆಂಬ ಜಾಗತಿಕ ನಿಯಮವೊಂದಿದೆ ಎಂಬುದನ್ನೇ ಮರೆತುಬಿಟ್ಟಿರುತ್ತೇವೆ. ದೇವರು ಈ ಜಗತ್ತಿನಲ್ಲಿ ನಡೆಯುವ ಪ್ರತಿಯೊಂದು ಕ್ರಿಯೆಯನ್ನೂ ಕೂಲಂಕಶವಾಗಿಯೇನೂ

ನಿರ್ವಹಿಸುವುದಿಲ್ಲ. ಪ್ರತಿಯೊಂದು ವಿಷಯವೂ ಕರ್ಮದ ನಿಯಮಕ್ಕೆ ಒಳಪಟ್ಟಿದೆ' ಎಂಬುದರ ಬಗ್ಗೆ ಪ್ರಸ್ತಾಪಿಸಿದ್ದರು.

ನಾನು ಈ ಪುಸ್ತಕವನ್ನು ಬರೆಯಲು ನನಗೆ ಪ್ರೇರಣೆ ನೀಡಿದ ನನ್ನ ಗುರುಗಳಾದ ಜೆ. ಪಿ. ವಾಸ್ವಾನಿಯವರಿಗೆ ಋಣಿಯಾಗಿದ್ದೇನೆ. ಅವರೊಬ್ಬ ಪ್ರೀತಿ, ಕರುಣೆ ಮತ್ತು ವಿನಯದಿಂದ ಕೂಡಿದ ವ್ಯಕ್ತಿಯಾಗಿದ್ದರು. ಅವರು ಈ ಜಗತ್ತಿನ ಆಗುಹೋಗುಗಳನ್ನು ಒಂದು ಆಟವೆಂದು ಪರಿಗಣಿಸಿದ್ದರು. ಕರ್ಮವನ್ನು ಮೀರಿ ಸ್ವ-ಅರಿವನ್ನು ಗಳಿಸಿಕೊಂಡಿದ್ದರು. ಈ ಪುಸ್ತಕವನ್ನು ನಾನು ಅವರ ಪಾದಾರವಿಂದಗಳಿಗೆ ಅರ್ಪಿಸಿ ಅವರಿಂದ ಆಶೀರ್ವಾದವನ್ನು ಪಡೆದುಕೊಳ್ಳುತ್ತಿದ್ದೇನೆ.

# ಮುನ್ನುಡಿ

ಈ ಭೂಮಿಯು ಒಂದು ವಿಶಿಷ್ಟವಾದ ಸ್ಥಳವಾಗಿದೆ. ಸುಮಾರು 8 ಶತಕೋಟಿ ಜನ, ಹಲವಾರು ಸಹಸ್ರ ಕೋಟಿ ಕೀಟಗಳು, ಪ್ರಾಣಿಗಳು ಮತ್ತು ಸಸ್ಯಗಳು ಈ ಭೂಮಿಯ ಮೇಲೆ ಜೀವಿಸುತ್ತಿವೆ. ಈ ಭೂಮಿಯು ಅಂತರಿಕ್ಷದ ಮೂಲೆಯೊಂದರಲ್ಲಿ ತೇಲಾಡುತ್ತಿರುವ, ತನ್ನ ಕಕ್ಷೆಯ ಮೇಲೆ ಸುತ್ತುತ್ತಾ, ಸೂರ್ಯನ ಸುತ್ತ ತಿರುಗುತ್ತಿರುವ ಒಂದು ಗ್ರಹವಾಗಿದೆ. ಇದು ನಡೆದದ್ದಾರೂ ಹೇಗೆ? ಇದನ್ನು ನಡೆಸುತ್ತಿರುವವರು ಯಾರು?

ಭೂಮಿಯ ಮೇಲೆ ನಾವು ಜೀವಿಸುತ್ತಿದ್ದೇವೆ ಎಂಬುದು ನಿಜ. ಆದರೆ ನಾವು ಇಲ್ಲಿಗೆ ಬಂದದ್ದಾದರೂ ಹೇಗೆ? ಇಲ್ಲಿಂದ ಮುಂದೆ ಎಲ್ಲಿಗೆ ಹೋಗುತ್ತೇವೆ? ಇದನ್ನು ತಿಳಿದವರು ಯಾರೂ ಇಲ್ಲ. ನಾವು ಈ ಭೂಮಿಯ ಮೇಲೆ ಬಂದು ಹೋಗುತ್ತೇವೆಂಬ ವಿಷಯ ನಿಜ. ಆದರೆ, ಇದೆಲ್ಲಾ ಹೇಗೆ ನಡೆಯಿತು? ಏಕೆ ನಡೆಯಿತು ಮತ್ತು ನಡೆಸುತ್ತಿರುವವರು ಯಾರು? ಎಂಬುದಕ್ಕೆ ಯಾವುದೇ ಪುರಾವೆಗಳಿರುವುದಿಲ್ಲ.

ಜೀವನ ಎಂಬ ಈ ಜಗತ್ತಿನ ಲೀಲೆಯು ಕೇವಲ ಯಕಃಶ್ಚಿತವಾಗಿ ನಡೆಯುವಂಥದ್ದಲ್ಲ. ಮಾನವನ ಅರಿವು ಮತ್ತು ಕಲ್ಪನೆಗಳಿಗೆ ಮೀರಿದ ಅದ್ಭುತ ಶಕ್ತಿಯೊಂದು ಭೂಮಿಯ ಮೇಲೆ ನಡೆಸುತ್ತಿರುವ ಆಟ ಇದಾಗಿದೆ. ಪ್ರತಿ ದಿನವೂ ಸೂರ್ಯ ಹುಟ್ಟುತ್ತಾನೆ, ಮುಳುಗುತ್ತಾನೆ, ಋತುಮಾನಗಳು ಒಂದರ ನಂತರ ಮತ್ತೊಂದು ಬದಲಾಗುತ್ತವೆ. ಕಾಲ ಉರುಳುತ್ತದೆ. ಈ

ಭೂಮಿಯ ಮೇಲೆ ಅನೇಕ ಜೀವಿಗಳು ಹುಟ್ಟುತ್ತಿವೆ ಮತ್ತು ಸಾಯುತ್ತಿವೆ. ಈ ಹುಟ್ಟು ಸಾವುಗಳ ನಡುವಿನ ಜೀವನವನ್ನು ಅನೇಕ ಜಾಗತಿಕ ನಿಯಮಗಳು ನಿಯಂತ್ರಿಸುವಂತೆ ಕಾಣುತ್ತದೆ. ಈ ನಿಯಮಗಳಿವೆ ಎಂಬುದಕ್ಕೆ ಯಾವುದೇ ನೇರ ಪುರಾವೆಗಳಿಲ್ಲ. ಆದರೆ, ನೀವು ಒಂದು ಚೆಂಡನ್ನು ಮೇಲಕ್ಕೆಸೆದಾಗ ಅದು ಆಕಾಶದಲ್ಲಿ ಕಳೆದು ಹೋಗುವುದಿಲ್ಲ. ಬದಲು ಭೂಮಿಗೆ ವಾಪಸ್ಸು ಬಂದು ಬೀಳುತ್ತದೆ. ಇದಕ್ಕೆ ನೇರವಾದ ಪುರಾವೆಗಳಿಲ್ಲದಿದ್ದರೂ, ನಾವು ಈ ವಿದ್ಯಮಾನ ಗುರುತ್ವಾಕರ್ಷಣೆಯಿಂದಾಯಿತೆಂದು ತಿಳಿಯುತ್ತೇವೆ.

ಇಂತಹ ಅನೇಕ ಜಾಗತಿಕ ನಿಯಮಗಳು ಈ ಭೂಮಿಯ ಮೇಲೆ ಜೀವಿಸುವುದನ್ನು ಸಾಧ್ಯವಾಗಿಸಿವೆ. ಅಂತಹ ಒಂದು ನಿಯಮವೆಂದರೆ - ಕಾರ್ಯಕಾರಣಗಳದ್ದು. ಇದು ಕರ್ಮ ಸಿದ್ಧಾಂತವೆಂದು ಹೆಸರು ವ್ಯಾಪಿಸಿದೆ. ಈ ನಿಯಮದ ಪ್ರಕಾರ ಪ್ರತಿಯೊಂದು ಕ್ರಿಯೆಗೂ ತಕ್ಕುದಾದ ಪ್ರತಿಕ್ರಿಯೆಯಿರುತ್ತದೆ. ಇಲ್ಲಿ ಆಕಸ್ಮಿಕವಾಗಿ ಯಾವುದೂ ನಡೆಯುವುದಿಲ್ಲ. ನೀವು ಟೊಮ್ಯಾಟೋ ಗಿಡಗಳನ್ನು ನೆಟ್ಟಿದ್ದರೆ ಅದರಲ್ಲಿ ಮಾವನ್ನು ಪಡೆಯಲು ಸಾಧ್ಯವಿಲ್ಲ. ಈ ನಿಯಮ ನಮ್ಮ ವಿಧಿಯನ್ನು ನಿರ್ಧರಿಸುತ್ತದೆ. ನಮ್ಮ ಭೂತಕಾಲದ ಕರ್ಮಗಳು ನಮ್ಮ ವರ್ತಮಾನವನ್ನೂ, ವರ್ತಮಾನವು ಭವಿಷ್ಯವನ್ನೂ ನಿರ್ಧರಿಸುತ್ತದೆ.

ಕರ್ಮದ ನಿಯಮವು ಸರಳವೂ, ವಾಸ್ತವವೂ ಮತ್ತು ಜಾಗತಿಕವಾದುದೂ ಆಗಿದ್ದರು ಸಹ ಅದು ಮಾನವನ ಅರಿವಿಗೆ ಮೀರಿದ ವಿಷಯವಾಗಿದೆ.

ಈ ನಿಯಮವು ಸಾಯುವವರೆಗೆ ಮಾತ್ರ ಸೀಮಿತವಾಗಿಲ್ಲ. ಈ ಭೌತಿಕ ದೇಹ ಸತ್ತಾಗ ಅದರ ಮನಸ್ಸು ಮತ್ತು ಅಹಂ ಅದರ ಕರ್ಮಕ್ಕೆ ಕಟ್ಟುಬಿದ್ದು ಮತ್ತೊಂದು ದೇಹದಲ್ಲಿ ಮರುಹುಟ್ಟನ್ನು ಪಡೆಯುತ್ತದೆ.

ನಾವು ಎಷ್ಟೇ ಬಾರಿ ಹುಟ್ಟು-ಸಾವುಗಳನ್ನು ಪಡೆದುಕೊಂಡರೂ ಕರ್ಮದ ನಿಯಮಗಳ ನಿಯಂತ್ರಣದಲ್ಲಿದ್ದೇವೆ. ಈ ಜಗತ್ತಿನಲ್ಲಿ ನಾವು ಸಂತೋಷವನ್ನು ಪಡೆದುಕೊಳ್ಳುತ್ತೇವೆ. ಅದೇ ರೀತಿ ನೋವನ್ನು ಕೂಡ ಅನುಭವಿಸುತ್ತೇವೆ. ನಮ್ಮ ಜೀವಿತದ ಕಾಲದಲ್ಲಿ ಸಾವು ನೋವುಗಳನ್ನು ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ.

ಈ ನಿಯಮವು ಬಹಳ ಸರಳವಾದ ವಿಷಯವೊಂದನ್ನು ನಮಗೆ ತಿಳಿಸಿಕೊಡುತ್ತದೆ- ಅದೆಂದರೆ, ನಾವು ಮಾಡಿದ ಕರ್ಮಕ್ಕೆ ತಕ್ಕ ಪ್ರತಿಫಲವನ್ನು ಪಡೆಯುತ್ತೇವೆ ಎನ್ನುವುದು. ಯಾವುದೋ ಅದ್ಭುತ ಶಕ್ತಿಯೊಂದು ಈ ನಿಯಮವನ್ನು ನಿಯಂತ್ರಿಸುತ್ತಿದೆ ಎಂದೆನ್ನಿಸುತ್ತದೆ. ಈ ಶಕ್ತಿ ಬೇರಾವುದೂ ಅಲ್ಲ, ಈ ಜಗತ್ತನ್ನು ಮತ್ತು ಅದರ ಮೇಲಿನ ಸಕಲ ಜೀವಿಗಳನ್ನೂ ಸೃಷ್ಟಿಸಿದ ಸೃಷ್ಟಿಕರ್ತನಾಗಿದ್ದಾನೆ ಅಷ್ಟೇ. ನಾವು ಕರ್ಮದ ಬಗ್ಗೆ ಎಲ್ಲ ವಿಚಾರಗಳನ್ನು ತಿಳಿದುಕೊಳ್ಳೋಣ. ಹಾಗೆ ಮಾಡುವ ಮೂಲಕ ಹುಟ್ಟು, ಸಾವು, ಪುನರ್ಜನ್ಮಗಳ ಕರ್ಮಗಳಿಂದ ಮುಕ್ತಿ ಪಡೆದು ಅಲೌಕಿಕ ಸಂತೋಷ, ಶಾಂತಿಗಳನ್ನು ಪಡೆದುಕೊಳ್ಳೋಣ.

1

# ಕರ್ಮ ಎಂದರೇನು?

ಕರ್ಮದ ನಿಯಮವೆಂದರೆ, ಅದೊಂದು ಕ್ರಿಯೆ ಮತ್ತು ಪ್ರತಿಕ್ರಿಯೆಯ ನಿಯಮ. ಈ ನಿಯಮದ ಪ್ರಕಾರ, ನಮ್ಮ ಪ್ರತಿಯೊಂದು ಕ್ರಿಯೆಯೂ ಅದು ಒಳ್ಳೆಯದನ್ನು ಮಾಡಿದೆಯೊ ಅಥವಾ ಕೆಟ್ಟದನ್ನು ಮಾಡಿದೆಯೊ ಎಂಬುದರ ಆಧಾರದ ಮೇಲೆ ಪ್ರತಿಫಲವನ್ನು ಪಡೆದುಕೊಳ್ಳುತ್ತದೆ. ಇದೊಂದು ಜಾಗತಿಕ ನಿಯಮವಾಗಿದ್ದು ಎಲ್ಲರಿಗೂ ಅನ್ವಯಿಸುತ್ತದೆ. ಯಾರೂ ಕೂಡ ಇದರಿಂದ ತಪ್ಪಿಸಿಕೊಳ್ಳಲಾಗುವುದಿಲ್ಲ ಅಥವಾ ಈ ನಿಯಮವನ್ನು ತಿರುಚಲಾಗುವುದಿಲ್ಲ. ನಮ್ಮ ಕ್ರಿಯೆಗಳನ್ನು ಯಾರಿಗೂ ಕಾಣದಂತೆ ಮುಚ್ಚಿಟ್ಟುಕೊಂಡು ಮಾಡಿದರೂ ಸಹ ಕರ್ಮದ ನಿಯಮವು ಅವನ್ನು ಗ್ರಹಿಸಿ ಬಿಡುತ್ತದೆ. ಈ ನಿಯಮ ಅಥವಾ ತತ್ವದ ಶಕ್ತಿಯೇ ಅಂಥದ್ದು.

ಕರ್ಮ ಎಂದರೆ ಅಕ್ಷರಶಃ "ಕ್ರಿಯೆ" ಎಂದರ್ಥ. ಆದರೆ ಇದನ್ನು ಎಷ್ಟು ವ್ಯಾಪಕವಾಗಿ ಬಳಸಲಾಗಿದೆಯೆಂದರೆ, ಕರ್ಮದ ಅರ್ಥ ಕ್ರಿಯೆ ಎಂಬ ಅರ್ಥವನ್ನೂ ಮೀರಿ ಬೆಳೆದಿದೆ. ಅದಕ್ಕಿಂತಲೂ ಹಿರಿದಾದ ಅರ್ಥವನ್ನು ಪಡೆದುಕೊಂಡಿದೆ. ಇಂದು ಈ ಜಾಗತಿಕ ನಿಯಮದ ಪ್ರಸ್ತುತತೆಯಾದರೂ ಏನು?

ಯಾವುದೋ ಅಹಿತಕರ ಘಟನೆ ಆಕಸ್ಮಿಕವಾಗಿ ನಡೆಯಿತೆಂದು ಕಲ್ಪಿಸಿಕೊಳ್ಳಿ. ಆ ಘಟನೆ ಸಂಭವಿಸಲು ಯಾವುದೇ ತಾರ್ಕಿಕ ಕಾರಣಗಳಿರುವುದಿಲ್ಲ. ಆಗ ನಾವು ಇದು ನಮ್ಮ ಕರ್ಮ!

ಎಂದು ಉದ್ಗಾರ ತೆಗೆಯುತ್ತೇವೆ. ಇಲ್ಲಿ ನಾವು ಕರ್ಮದ ಇರುವಿಕೆಯನ್ನು ಖಚಿತಪಡಿಸುತ್ತಿದ್ದೇವೆ. ಮೇಲ್ನೋಟಕ್ಕೆ ಈ ಘಟನೆ ಸಂಭವಿಸಲು ಯಾವುದೇ ಕಾರಣಗಳಿಲ್ಲ. ಆದರೂ ಘಟನೆ ಸಂಭವಿಸಿದೆ. ಹಾಗಾಗಲು ಕಾರಣವೇನು? ಇದು ಅಗತ್ಯವಾಗಿ ನಾವು ಹಿಂದೆ ಮಾಡಿದ ಕ್ರಿಯೆಗೆ ಪ್ರತಿಫಲವಾಗಿದೆ. ಈ ಕ್ರಿಯೆ ಬಹಳ ಹಿಂದೆ ನಡೆದಿದ್ದು ನಮ್ಮ ನೆನಪಿನಿಂದ ಮರೆಯಾಗಿರಬಹುದು. ಆದರೆ ಕರ್ಮದ ನಿಯಮದ ಕಾರಣದಿಂದಾಗಿ ಎಲ್ಲ ಕ್ರಿಯೆಗಳಿಗೂ ತಕ್ಕ ಪ್ರತಿಫಲ ಇದ್ದೇ ಇರುತ್ತದೆ. ಅದನ್ನು ನಾವು ಉಣ್ಣಲೇಬೇಕಾಗುತ್ತದೆ.

ಉದ್ಯಾನವೊಂದರ ಮರದಲ್ಲಿ ಸೇಬಿನ ಹಣ್ಣುಗಳಿವೆಯೆಂದು ಇಟ್ಟುಕೊಳ್ಳಿ. ಈ ಸೇಬುಗಳು ಎಲ್ಲಿಂದ ಬಂದವು? ಇಲ್ಲಿ ಯಾವುದಾದರೂ ಜಾದೂ ಅಥವಾ ಮಾಯೆ ನಡೆದಿದೆಯೇ? ಅಥವಾ ಇದು ನಿಸರ್ಗದಲ್ಲಿ ನಡೆಯುವ ವಿದ್ಯಮಾನವೇ? ಹಾಗೇನಿಲ್ಲ. ಸೇಬಿನ ಬೀಜವನ್ನು ಮಣ್ಣೊಳಗೆ ಬಿತ್ತಿರಬೇಕು. ಅದು ನೀವೇ ಆಗಿರಬಹುದು ಅಥವಾ ನಿಮ್ಮ ನೆರೆಹೊರೆಯವರು ಸೇಬನ್ನು ತಿಂದು ಅದರ ಬೀಜವನ್ನು ಕಾಪೌಂಡಿನಾಚೆಗೆ ಎಸೆದಿರಬಹುದು. ಅಥವಾ ಗಾಳಿ ಬೀಸಿದ್ದರಿಂದ ಎಲ್ಲಿಂದಲೋ ಅದು ಬಂದು ಬಿದ್ದಿರಬಹುದು. ಅಥವಾ ಹಕ್ಕಿಗಳು ಹಣ್ಣನ್ನು ತಿಂದು ಬೀಜವನ್ನು ಅಲ್ಲಿ ಬೀಳಿಸಿರಬಹುದು. ಹಾಗೆ ಬೀಜ ಬಿತ್ತಿದ ಕ್ರಿಯೆಯಿಂದಾಗಿ ಮರ ಬೆಳೆದು ಅದರಲ್ಲಿ ಸೇಬು ಹಣ್ಣು ಬೆಳೆದಿದೆ. ಬಿತ್ತಿದರಷ್ಟೇ ಫಲವನ್ನು ಪಡೆಯಲು ಸಾಧ್ಯ. ಇದೊಂದು ಸರಳವಾದ ನಿಯಮ. ಇದನ್ನು ಸಾಬೀತು ಮಾಡಿ ತೋರಿಸಲು ಸಾಧ್ಯವಾಗದಿರಬಹುದು. ಆದರೆ, ಈ ನಿಯಮದ ಇರುವಿಕೆಯನ್ನು ನಮ್ಮ ಅನುಭವದ ಮೂಲಕ ಖಾತ್ರಿಪಡಿಸಿಕೊಳ್ಳಬಹುದು.

ಗುರುತ್ವಾಕರ್ಷಣೆಯ ತತ್ವವನ್ನು ನೀವು ಸಾಬೀತು ಮಾಡಲು ಸಾಧ್ಯವೇ? ಇಲ್ಲ. ಅದು ಸಾಧ್ಯವಾಗುವುದಿಲ್ಲ. ನಿಮ್ಮ ಇ-ಮೇಲ್ ಖಾತೆಯು ನಿಮ್ಮದೆಂದು ಪಾಸ್ವರ್ಡ್ ಇತ್ಯಾದಿಗಳ

ಮೂಲಕ ಸಾಬೀತುಪಡಿಸಬಹುದು. ಆದರೆ, ಗುರುತ್ವಾಕರ್ಷಣೆಯ ವಿಚಾರವೇ ಬೇರೆ. ನೀವು ನಿಮ್ಮ ಹಣವನ್ನು ಮೇಲೆ ಎಸೆದರೆ ಅದು ಮೋಡಗಳಲ್ಲಿ ಹೋಗಿ ಲೀನವಾಗುವುದಿಲ್ಲ. ಮತ್ತೆ ನೆಲಕ್ಕೆ ತಿರುಗಿ ಬೀಳುತ್ತದೆ. ಹಾಗೆ ಕೆಳಗೆ ಬಂದು ಬೀಳಲು ಯಾವುದೋ ಶಕ್ತಿ ಅದನ್ನು ಸೆಳೆಯುತ್ತದೆ. ಇದನ್ನು ಗುರುತ್ವಾಕರ್ಷಣೆಯ ತತ್ತ್ವವೆಂದು ನೀವು ಕರೆಯುತ್ತೀರಿ. ಕರ್ಮದ ನಿಯಮದ ವಿಚಾರದಲ್ಲೂ ಹೀಗೆಯೇ. ಕರ್ಮದ ಇರುವಿಕೆಯನ್ನು ನೀವು ತಿಳಿದಿರುತ್ತೀರಿ. ಈ ಬಗ್ಗೆ ಯಾವುದೇ ರೀತಿಯ ಸಂಶಯಗಳಿರುವುದಿಲ್ಲ.

ಕರ್ಮದ ನಿಯಮವು ಒಂದು ಸಂಕೀರ್ಣ ನಿಯಮವಾಗಿದೆ. ಇದು ಹಲವಾರು ರೀತಿಯಲ್ಲಿ ಕೆಲಸ ಮಾಡುತ್ತದೆ. ನಿಮ್ಮ ಕರ್ಮದ ಫಲವನ್ನು ನೀವು ತಕ್ಷಣವೇ ಪಡೆದುಕೊಳ್ಳಬಹುದು ಅಥವಾ ಹಲವಾರು ದಿನ, ವಾರ, ವರ್ಷಗಳ ನಂತರವೂ ಅದನ್ನು ನೀವು ಅನುಭವಿಸಬಹುದು. ಆದರೆ, ನೀವು ಸತ್ತರೂ ಸಹ ನಿಮ್ಮ ಕರ್ಮದ ಫಲದಿಂದ ತಪ್ಪಿಸಿಕೊಳ್ಳಲಾರಿರಿ.

ನಮ್ಮ ಸುತ್ತ-ಮುತ್ತಲೂ ಅನೇಕ ವಿಷಯಗಳು ನಡೆಯುತ್ತವೆ. ಇದಕ್ಕೆ ಕಾರಣಗಳೇನು? ಇದು ಕಾರ್ಯಕಾರಣದ ನಿಯಮದ ಪರಿಣಾಮವಾಗಿರಬಹುದು. ಹಾಗಿದ್ದರೆ, ಕಾರ್ಯಕಾರಣದ ಪರಿಣಾಮವೆಂದರೆ ಏನು? ಪ್ರತಿಯೊಂದು ಕ್ರಿಯೆ ಅಥವಾ ಕಾರ್ಯಕ್ಕೂ ಒಂದು ಕಾರಣವಿರುತ್ತದೆ ಎಂಬುದೇ ಇದರ ಅರ್ಥ. ಆದ್ದರಿಂದ ಹಿಂದೆ ನಡೆದುದರ ಕಾರಣವಾಗಿಯೇ ಈಗ ವರ್ತಮಾನದಲ್ಲಿ ನಡೆಯುತ್ತಿದೆ. ಪ್ರತಿಯೊಂದು ಕ್ರಿಯೆಗೂ ವಿರುದ್ಧವಾದ ಮತ್ತು ಅಷ್ಟೇ ಪ್ರಮಾಣದ ಪ್ರತಿಕ್ರಿಯೆ ಇರುತ್ತದೆ ಎಂಬುದೇ ಈ ನಿಯಮ. ಹೊಗೆಯಾಡುತ್ತಿದೆ ಎಂದ ಮೇಲೆ ಅಲ್ಲಿ ಬೆಂಕಿ ಇರಬೇಕು ಅಥವಾ ಯಾವುದಾದರು ಕಾರಣದಿಂದಾಗಿ ಬೆಂಕಿ ಬಿದ್ದಿರಬಹುದು.

ಈ ಕಾರ್ಯಕಾರಣದ ಪರಿಣಾಮವನ್ನು ನಮ್ಮ ದೈನಂದಿನ ಜೀವನದಲ್ಲಿ ನೋಡಬಹುದು. ನೀವು ಒಂದು ಮಡಕೆ, ಒಂದು ತಟ್ಟೆ ಮತ್ತು ಪ್ರತಿಮೆಯೊಂದನ್ನು ನೋಡಿರಿತ್ತೀರಿ. ಈ ಮೂರೂ ವಸ್ತುಗಳನ್ನು ಮಣ್ಣಿನಿಂದ ಮಾಡಿದ್ದಾರೆ ಎಂಬ ಅಂಶವನ್ನು ನೀವು ತಿಳಿದಿರುತ್ತೀರಿ. ಇಲ್ಲಿ ಮಣ್ಣು ಕಾರಣವಾದರೆ ಮಡಕೆ, ತಟ್ಟೆ ಮತ್ತು ಮೂರ್ತಿಗಳು ಅದರ ಪರಿಣಾಮವಾಗಿವೆ. ನಮ್ಮ ಸುತ್ತ-ಮುತ್ತಲಿರುವುದೆಲ್ಲವೂ ಪರಿಣಾಮದ ರೂಪದಲ್ಲಿವೆ. ಹಾಗಿದ್ದರೆ ಕಾರಣವೇನು? ಅದು ನಮ್ಮ ಕರ್ಮ. ಅಂದರೆ ನಾವು ಹಿಂದೆ ಮಾಡಿರುವ ಕ್ರಿಯೆ ಅಥವಾ ಕರ್ಮದ ಪ್ರತಿಫಲಗಳಾಗಿ ಈಗ ಗೋಚರವಾಗುತ್ತಿವೆ. ಹಾಗಾಗಿ ಕರ್ಮದ ನಿಯಮವನ್ನು ಕ್ರಿಯೆ, ಪ್ರತಿಕ್ರಿಯೆ ಎಂದು ಗುರುತಿಸುವುದಷ್ಟೇ ಅಲ್ಲದೇ ಕಾರ್ಯಕಾರಣದ ನಿಯಮವೆಂದು ಕೂಡ ಗುರುತಿಸಲಾಗುತ್ತದೆ.

ನೀವು ತಿರುಗು ತಟ್ಟೆಯನ್ನು ನೋಡಿರಬಹುದು. ನೀವು ಅದನ್ನು ಮೇಲಕ್ಕೆಸೆದರೆ ಅದು ಮತ್ತೆ ನಿಮ್ಮ ಬಳಿಗೇ ಹಾರಿ ಬರುತ್ತದೆ. ಕರ್ಮವೂ ಕೂಡ ಈ ತಿರುಗು ತಟ್ಟೆಯಂತೆಯೇ ಕೆಲಸ ಮಾಡುತ್ತದೆ. ನೀವು ಏನನ್ನು ಬಿತ್ತುತ್ತೀರೋ ಅದರ ಪ್ರತಿಫಲವನ್ನು ಪಡೆದುಕೊಂಡೇ ತೀರುತ್ತೀರಿ. ಕೆಲವೊಮ್ಮೆ ಕರ್ಮವು ನಮ್ಮೊಡನೆ ಆಟವಾಡಬಹುದು. ನಾವು ಕೆಟ್ಟದ್ದನ್ನು ಮಾಡಿದರೂ ನಮಗೆ ಒಳ್ಳೆಯ ಪ್ರತಿಫಲಗಳೇ ದೊರೆಯಬಹುದು. ಆದರೆ ಈ ಒಳ್ಳೆಯದು ನಮ್ಮ ಕರ್ಮ ಎಂಬುದು ನಮಗೆ ತಿಳಿದಿರುವುದಿಲ್ಲ. ನಮ್ಮ ಹಿಂದಿನ ಒಳ್ಳೆಯ ಕೃತ್ಯಗಳು ಈಗ ಪ್ರತಿಫಲವನ್ನು ನೀಡುತ್ತಿರಬಹುದು. ಅದು ತಿರುಗುತಟ್ಟೆಯಂತೆ ನಮ್ಮತ್ತ ಹಾರಿ ಬರುತ್ತಿರಬಹುದು. ಹಾಗಾದರೆ ಈಗ ನಾವು ಮಾಡುತ್ತಿರುವ ಕೆಟ್ಟ ಕೆಲಸಗಳು? ಅವುಗಳ ಬಗ್ಗೆ ಎಚ್ಚರಿಕೆಯಿಂದಿರಿ. ಈಗ ಅನೇಕ ಒಳ್ಳೆಯ ಪ್ರತಿಫಲಗಳು ದೊರೆಯುತ್ತಿದ್ದರೂ ನಿಮ್ಮ ಕೆಟ್ಟ ಕ್ರಿಯೆಗಳಿಗೆ ಮುಂದೆ ಎಂದಾದರೂ ಒಂದು ದಿನ ನೀವು ಬೆಲೆ ತೆರಲೇಬೇಕಾಗುತ್ತದೆ. ಅದರ ಪರಿಣಾಮವನ್ನು ನೀವು ಅನುಭವಿಸಲೇಬೇಕಾಗುತ್ತದೆ.

ಒಂದು ದಿಕ್ಕಿನಲ್ಲಿ ಹೋಗಿದ್ದು ವಿರುದ್ಧ ದಿಕ್ಕಿನಿಂದ ತಿರುಗಿ ಬರುತ್ತದೆ ಎಂಬ ನಿಯಮವನ್ನು ಜಗತ್ತು ತಿಳಿದುಕೊಂಡಿದೆ. ಇದನ್ನು ಎಲ್ಲರೂ ಬಲ್ಲರು. ಯಾರಿಗೂ ನಾವು ಹೇಳಿಕೊಡಬೇಕಾಗಿಲ್ಲ. ಅದರ ಬಗ್ಗೆ ಜನರಿಗೆ ಅಂತರ್ಗತವಾಗಿಯೇ ತಿಳಿದಿರುತ್ತದೆ. ಅದನ್ನು ಅವರು ಅನುಭವಿಸುತ್ತಾರೆ ಕೂಡ. ನಾವು ಯಾರನ್ನಾದರೂ ಕೆಟ್ಟದಾಗಿ ನಡೆಸಿಕೊಂಡರೆ ನಮ್ಮನ್ನು ಕೂಡ ಎಂದಾದರೊಂದು ದಿನ ಕೆಟ್ಟದಾಗಿ ನಡೆಸಿಕೊಳ್ಳುತ್ತಾರೆ. ಪ್ರೀತಿಯಲ್ಲಿ ಯಾರನ್ನಾದರೂ ಮೋಸಗೊಳಿಸಿದರೆ ಮುಂದೊಂದು ದಿನ ತಾವು ಕೂಡ ಪ್ರೀತಿಯ ವಿಷಯದಲ್ಲಿ ವಂಚನೆಗೊಳಗಾಗಬಹುದು ಎಂದು ಜನರಿಗೆ ತಿಳಿದಿದೆ. ನಮ್ಮ ಕರ್ಮ- ಫಲಗಳನ್ನು ನಾವು ಉಣ್ಣದೇ ವಿಧಿಯಿಲ್ಲ, ಅದರಿಂದ ನಾವು ಎಂದೂ ತಪ್ಪಿಸಿಕೊಳ್ಳಲಾರೆವು.

ಈ ಜಗತ್ತಿನಲ್ಲಿ ಅನೇಕ ನಿಯಮಗಳು ಕೆಲಸ ಮಾಡುತ್ತವೆ. ಅಂತಹ ನಿಯಮಗಳಲ್ಲಿ ಅನುಕ್ರಮ ಮತ್ತು ಮುಂದುವರಿಕೆಯ ನಿಯಮವೂ ಒಂದಾಗಿದೆ. ಯಾರೇ ಎಲ್ಲಿಗೇ ಹೋದರೂ ಮತ್ತೆ ಅದೇ ಸ್ಥಳಕ್ಕೆ ಹಿಂದಿರುಗಬೇಕಾಗುತ್ತದೆ. ಶೂನ್ಯದಿಂದ ಯಾರೂ ಬರಲಾಗುವುದಿಲ್ಲ ಅಥವಾ ಶೂನ್ಯಕ್ಕೆ ಯಾರೂ ಹೋಗಲಾಗುವುದಿಲ್ಲ. ಯಾರೇ ಎಲ್ಲಿಗೇ ಹೋದರೂ, ಹೋದ ಸ್ಥಳಕ್ಕೆ ಮತ್ತೆ ಹಿಂದಿರುಗಲೇಬೇಕು.

ನೀವು ಕೆಟ್ಟದ್ದನ್ನು ಮತ್ತೆ ಪಡೆದುಕೊಂಡೇ ತೀರುತ್ತೀರಿ. ಕರ್ಮದ ಈ ನಿಯಮವು ಬಹಳ ಸರಳವಾಗಿದೆ. ಅದನ್ನು ಎಳೆಯ ಮಕ್ಕಳು ಕೂಡ ಅರ್ಥಮಾಡಿಕೊಳ್ಳುತ್ತಾರೆ. ಆದರೆ, ನಾವು ಬೆಳೆದವರು ಕರ್ಮದ ಇರುವಿಕೆಯನ್ನೇ ಮರೆತುಬಿಡುತ್ತೇವೆ. ಈ ನೆಲದ ಮೇಲೆ ಮೇಜು, ಕುರ್ಚಿ, ಲ್ಯಾಪ್-ಟಾಪ್ ಇತ್ಯಾದಿ ವಸ್ತುಗಳು ಬೀಳದೆ ಸುರಕ್ಷಿತವಾಗಿವೆ ಎಂಬ ಕಾರಣಕ್ಕೆ ಗುರುತ್ವಾಕರ್ಷಣೆಯ ತತ್ವವನ್ನು ಅಲ್ಲಗಳೆಯಲಾಗುವುದಿಲ್ಲ. ಗುರುತ್ವಾಕರ್ಷಣೆಯ ತತ್ವವು ಹಿಂದೆಯೂ ಕೆಲಸ ಮಾಡಿತ್ತು, ಈಗಲೂ ಕೆಲಸ ಮಾಡುತ್ತಿದೆ ಮತ್ತು ಭವಿಷ್ಯದಲ್ಲೂ ಕೆಲಸ

ಮಾಡುತ್ತದೆ. ಕರ್ಮದ ನಿಯಮವೂ ಕೂಡ ಹಾಗೆಯೆ.

ಕರ್ಮದ ನಿಯಮವು ಜಾಗತಿಕವಾದುದು. ನೀವು ಭಾರತೀಯರಾಗಿರಿ, ಅಮೆರಿಕನ್ನರಾಗಿರಿ, ಚೀನೀ ಅಥವಾ ಜಪಾನಿಯರಾಗಿರಿ. ಕರ್ಮದ ನಿಯಮವು ಎಲ್ಲಾ ದೇಶದವರಿಗೂ ಅನ್ವಯಿಸುತ್ತದೆ. ಅಥವಾ ಹಿಂದೂ, ಮುಸ್ಲಿಮ್, ಸಿಖ್, ಕ್ರೈಸ್ತ, ಜೈನ್ ಅಥವಾ ಬೌದ್ಧ ಧರ್ಮದವರೇ ಆಗಿರಬಹುದು. ಈ ನೆಲದ ಮೇಲೆ ಹುಟ್ಟಿದ ಪ್ರತಿಯೊಬ್ಬರಿಗೂ ಈ ನಿಯಮವು ಅನ್ವಯವಾಗುತ್ತದೆ. ನೀವು ಯಾವ ಧರ್ಮದವರೇ ಆಗಿರಿ ಕರ್ಮದ ನಿಯಮಗಳಿಂದ ತಪ್ಪಿಸಿಕೊಳ್ಳಲಾರಿರಿ.

ವ್ಯಂಗ್ಯವೆಂದರೆ, ನಾವು ಕರ್ಮ (ಕ್ರಿಯೆ) ವನ್ನಾಗಲಿ ಅಥವಾ ಕರ್ಮದ ನಿಯಮಗಳಿಂದಾಗಲಿ ತಪ್ಪಿಸಿಕೊಳ್ಳಲಾರೆವು. ನಾವು ಮಾಡುವ ಕರ್ಮ ಅಥವಾ ಕ್ರಿಯೆಯಿಂದ ತಪ್ಪಿಸಿಕೊಳ್ಳಬಲ್ಲೆವೆ? ಪ್ರತಿಯೊಬ್ಬ ವ್ಯಕ್ತಿಯೂ ಕ್ರಿಯೆಯಲ್ಲಿ ತೊಡಗಲೇ ಬೇಕು. ಇದರಿಂದ ತಪ್ಪಿಸಿಕೊಳ್ಳಲಾಗುವುದಿಲ್ಲ. ಅಲ್ಲದೇ ಇದು ಲೋಕದ ನಿಯಮ ಕೂಡ ಹೌದು. ಆದರೆ ಕರ್ಮದ ಬಗ್ಗೆ ಎಲ್ಲಾ ಧರ್ಮಗಳೂ, ನಾಗರಿಕತೆಗಳೂ ಅದನ್ನು ಕ್ರಿಯೆ, ಪ್ರತಿಕ್ರಿಯೆ ಅಥವಾ ಕರ್ಮ ಮತ್ತು ಪ್ರತಿಫಲ ಅಥವಾ ಕಾರ್ಯಕಾರಣವೆಂದೇ ತಿಳಿದುಕೊಂಡಿವೆ.

ಪೀಟರ್ ತನ್ನ ಚಿಕ್ಕಪ್ಪನ ಜೊತೆ ಹಳ್ಳಿಯಲ್ಲಿ ವಾಸವಾಗಿದ್ದನು. ಕೆಲಸದ ಅವಕಾಶಗಳನ್ನು ಅರಸುತ್ತಾ, ತನ್ನ ವೃತ್ತಿಯನ್ನು ಕಟ್ಟಿಕೊಳ್ಳುತ್ತಾ ನಗರದಲ್ಲಿ ಸುಮಾರು ಎರಡು ದಶಕಗಳನ್ನು ಕಳೆದನು. ಒಂದು ದಿನ ತನ್ನ ಚಿಕ್ಕಪ್ಪನನ್ನು ನೋಡುವ ಸಲುವಾಗಿ ಹಳ್ಳಿಗೆ ಹಿಂತಿರುಗಿದನು. ಇಬ್ಬರೂ ಹೊಲದಲ್ಲಿ ಸುತ್ತುತ್ತಾ ನಡೆದಾಡಿದರು. ಚಿಕ್ಕಪ್ಪ ಹೇಳಿದರು, “ಪೀಟರ್ ನೀನು ನಗರಕ್ಕೆ ಹೋಗುವ ಮುಂಚೆ ನಿನಗೆ ನಮ್ಮ ಹೊಲದ ಅಂಚಿನಲ್ಲಿ ಸೇಬಿನ ಸಸಿಗಳನ್ನು

ನೆಡಲು ಹೇಳಿದ್ದೆ. ನೆನಪಿದೆಯಾ? ಈಗ ನೋಡು ಅವುಗಳು ಎಷ್ಟು ದೊಡ್ಡದಾಗಿ ಸುಂದರವಾಗಿ ಬೆಳೆದು ನಿಂತಿವೆ. ಈ ಇಪ್ಪತ್ತು ವರ್ಷಗಳಲ್ಲಿ ಅವು ಎಷ್ಟು ಸೊಗಸಾಗಿ ಬೆಳೆದು ನಿಂತಿವೆ ನೋಡು". ಚಿಕ್ಕಪ್ಪನು ಪೀಟರನನ್ನು ಹೊಲದ ಉದ್ದಕ್ಕೂ ಕರೆದುಕೊಂಡು ಹೋಗಿ ಸೊಗಸಾಗಿ ಬೆಳೆದು ನಿಂತ ಮರಗಳನ್ನು ತೋರಿಸುತ್ತಾ ನಡೆದನು. ಕೊನೆಗೆ ಇಬ್ಬರೂ ಹೊಲದ ಉತ್ತರದ ಅಂಚಿಗೆ ಬಂದು ತಲುಪಿದರು. ಇದ್ದಕ್ಕಿದ್ದಂತೆ ಹೊಲವು ಅಡ್ಡಾದಿಡ್ಡಿಯಾಗಿ ಬೆಳೆದ ಕಾಡಿನಂತೆ ಕಾಣಿಸತೊಡಗಿತು. ಅವನು ಅದನ್ನು ನೋಡಿ ಕ್ಷಣಕಾಲ ಕಣ್ಣುಮುಚ್ಚಿ ಮಂಕಾದನು. ಅವನಿಗೆ ತನ್ನ ಬಗ್ಗೆ ಬೇಸರ ಮತ್ತು ನಾಚಿಕೆಯಾಗಿ ಕಣ್ಣೀರು ಕಾಕಿದನು. ಇಲ್ಲಿಯವರೆಗೆ ನಾನು ನನ್ನ ಕೆಲಸವನ್ನು ಸರಿಯಾಗಿ ಮಾಡಿದ್ದೆ. ಗೆಳೆಯರು ಆಡಲು ಕರೆದರು ಎಂದು ಎಲ್ಲಾ ಬೀಜಗಳನ್ನೂ ಒಂದೇ ಹಳ್ಳದಲ್ಲಿ ಚೆಲ್ಲಿ ಆಡಲು ಹೊರಟು ಹೋದೆ. ಎಂದು ಅವನು ಹೇಳಿದನು. ಚಿಕ್ಕಪ್ಪನು ನಸುನಕ್ಕು 'ನೀನು ನಿಸರ್ಗದ ನಿಯಮಗಳನ್ನು ಮೀರಿ ಹೋಗಲಾಗುವುದಿಲ್ಲ' ಎಂದು ಹೇಳಿದನು. ಹಾಗೆ ಮಾಡಿದರೆ ಅದರ ಪರಿಣಾಮಗಳಿಂದ ತಪ್ಪಿಸಿಕೊಳ್ಳಲಾಗುವುದಿಲ್ಲ. ಈ ಹೊಲದಲ್ಲಿ ನೀನು ಮಾಡಿದ ಒಳ್ಳೆಯ ಕ್ರಿಯೆಗಳು ಒಳ್ಳೆಯ ಪ್ರತಿಫಲಗಳನ್ನು ನೀಡಿಯೇ ನೀಡುತ್ತವೆ. ಹಾಗೆಯೇ ನಿನ್ನ ಕೆಟ್ಟ ಕ್ರಿಯೆಗಳ ಪ್ರತಿಫಲಗಳಿಂದ ನೀನು ತಪ್ಪಿಸಿಕೊಳ್ಳಲಾಗುವುದಿಲ್ಲ".

ಕರ್ಮದ ನಿಯಮ ಸ್ಪಷ್ಟವಾಗಿದೆ. ನೀನು ಬಿತ್ತಿದಂತೆ ಬೆಳೆ. ನೀವು ಏನನ್ನಾದರೂ ಬೆಳೆದಿದ್ದರೆ ಅದನ್ನು ನೀವು ಬಿತ್ತಿದ್ದರಲ್ಲಿ ಯಾವುದೇ ಅನುಮಾನವಿಲ್ಲ. ನೀವು ಎಲ್ಲಿ, ಯಾವಾಗ ಏನನ್ನು ಬಿತ್ತಿದಿರಿ ಎಂಬುದನ್ನು ಮರೆತಿರಬಹುದು. ಅದಕ್ಕೆ ಸಿಗುವ ಪ್ರತಿಫಲಗಳು ನಿಮ್ಮ ಕರ್ಮದ ಫಲಗಳು ಎಂದು ಕರ್ಮದ ನಿಯಮಗಳು ಸ್ಪಷ್ಟಪಡಿಸುತ್ತವೆ.

ನಮಗೆ ಕರ್ಮದ ಅರ್ಥ ತಿಳಿಯದೆ ಇರುವುದರಿಂದ ದೇವರನ್ನು ಪ್ರಶ್ನಿಸಲು ತೊಡಗುತ್ತೇವೆ.

ಒಳ್ಳೆಯವರಿಗೆ ಯಾಕೆ ಕೆಟ್ಟದು ಆಗುತ್ತದೆ? ಎಂದು ನಾವು ದೇವರನ್ನು ದೂರುತ್ತೇವೆ. ಆದರೆ ನಿಜವಾಗಿಯೂ ಒಳ್ಳೆಯವರಿಗೆ ಕೆಟ್ಟದಾಗಲಾರದು. ಕರ್ಮಲೋಕದ ನೀತಿಯು ಇದನ್ನು ಆಗಗೊಡುವುದಿಲ್ಲ. ನಾವು ಒಳ್ಳೆಯವರಿಗೆ ಯಾಕೆ ಕೆಡುಕು ಆಗುತ್ತಿದೆ ಎಂಬುದನ್ನು ಅರ್ಥೈಸಲಾರೆವು. ಆದರೆ ಕೆಟ್ಟ ಕ್ರಿಯೆಗಳೇ ಅವರನ್ನು ಮತ್ತೆ ಕಾಡುತ್ತವೆ. ಕೆಲವೊಮ್ಮೆ ಅಪ್ರಾಮಾಣಿಕರಾದ ಜನರಿಗೆ ಒಳ್ಳೆಯದು ಏಕಾಗುತ್ತದೆಯೆಂದು ನಾವು ದೇವರನ್ನು ದೂರುತ್ತೇವೆ. ಆದರೆ ಹಿಂದೆ ಅವರು ಮಾಡಿದ ಫಲವನ್ನು ಈಗ ಅನುಭವಿಸುತ್ತಿದ್ದಾರೆ ಎಂಬ ಅಂಶವನ್ನು ನಾವು ಮರೆತುಬಿಡುತ್ತೇವೆ.

ನಾವು ಮಾನವರು ಕರ್ಮದ ನಿಯಮಗಳನ್ನು ಅರ್ಥಮಾಡಿಕೊಳ್ಳದೆ ಅನೇಕ ತಪ್ಪು ಕೆಲಸಗಳನ್ನು ಮಾಡುತ್ತೇವೆ. ಮೋಸ ಮಾಡುವುದು, ಸುಳ್ಳು ಹೇಳುವುದು, ಮತ್ತೊಬ್ಬರಿಗೆ ನೋವನ್ನು ಮಾಡುವುದು, ಕೊಲ್ಲುವುದು, ಇತ್ಯಾದಿ. ಆದರೆ, ಈ ಕ್ರಿಯೆಗಳಿಗೆ ಪ್ರತಿಯಾಗಿ ನಮಗೆ ಒಳ್ಳೆಯದಾಗಬೇಕೆಂದು ನಾವು ಬಯಸುತ್ತೇವೆ. ಆದರೆ, ಕರ್ಮದ ನಿಯಮಗಳು ಜಾರಿಯಲ್ಲಿರುವಾಗ ಹೇಗೆ ಒಳ್ಳೆಯದಾಗಲು ಸಾಧ್ಯ?.

ಇಂದೋ, ನಾಳೆಯೋ ಅಥವಾ ಇನ್ನಾವಾಗಲಾದರೋ ನಾವು ನಮ್ಮ ಕೆಟ್ಟ ಕ್ರಿಯೆಗಳಿಗೆ ತಕ್ಕ ಪ್ರತಿಫಲವನ್ನು ಪಡೆಯಲೇಬೇಕು. ಕೆಟ್ಟ ಕ್ರಿಯೆಗಳಿಗೆ ಕೆಟ್ಟ ಪ್ರತಿಫಲಗಳನ್ನು, ಒಳ್ಳೆಯ ಕ್ರಿಯೆಗಳಿಗೆ ಒಳ್ಳೆಯ ಪ್ರತಿಫಲಗಳನ್ನು ಪಡೆದುಕೊಳ್ಳುತ್ತೇವೆ.

ಕರ್ಮದ ಈ ನಿಯಮ ಕ್ರೂರವಲ್ಲ. ಅದು ಶಿಕ್ಷೆಯೂ ಅಲ್ಲ. ಬದಲು ನಮ್ಮನ್ನು ಮಾರ್ಪಾಟುಗೊಳಿಸುವಂಥದ್ದಾಗಿದೆ. ನಮ್ಮ ಒಳ್ಳೆಯ ಕ್ರಿಯೆಗಳಿಗೆ ಉತ್ತಮ ಪ್ರತಿಫಲವನ್ನು ನೀಡುತ್ತಾ, ಕೆಟ್ಟ ಕ್ರಿಯೆಗಳನ್ನು ಶಿಕ್ಷಿಸುತ್ತಾ ಅದು ನಮ್ಮನ್ನು ನೈತಿಕತೆಯ ಹಾದಿಯಲ್ಲಿ

ಸಾಗಲು ಸಹಾಯ ಮಾಡುತ್ತದೆ. ಅದರ ಮುಖ್ಯ ಉದ್ದೇಶ ನಾವು ಈ ಭೂಮಿಯ ಮೇಲಿನ ಪ್ರಯಾಣವನ್ನು ಮುಗಿಸುವ ಮುನ್ನ ನಮ್ಮನ್ನು ಸುಧಾರಿಸುವುದು. ಅದು ಸದಾ ಅಪರಾಧಿಗಳನ್ನು ಹಿಡಿಯುವ ಪೊಲೀಸಿನಂತಲ್ಲ. ಅದು ಸರಿ-ತಪ್ಪು, ಒಳ್ಳೆಯದು-ಕೆಟ್ಟದು ಎರಡಕ್ಕೂ ಸ್ಪಂದಿಸುತ್ತದೆ. ನಾವು ಕರ್ಮದ ನಿಯಮಗಳನ್ನು ಅರಿಯದೆ ಹೋದರೆ ನೈತಿಕವಾಗಿ ಬದುಕಲು ಸಾಧ್ಯವಾಗುವುದಿಲ್ಲ. ಆದ್ದರಿಂದ ನಾವು ಸಾಕಷ್ಟು ನೋವನ್ನು ಅನುಭವಿಸಬೇಕಾಗುತ್ತದೆ. ನಾವು ನೈತಿಕವಾಗಿ ಬದುಕಿದ್ದರೂ ಕೂಡ ಕೆಟ್ಟ ಅನುಭವಗಳಾದಾಗ ಅಳುತ್ತೇವೆ. ಆದರೆ ಕರ್ಮದ ನಿಯಮದಂತೆ ನಮ್ಮ ಹಿಂದಿನ ತಪ್ಪುಗಳಿಗಾಗಿ ನಾವು ಬೆಲೆ ತೆರುತ್ತಿದ್ದೇವೆ ಎಂಬುದನ್ನು ಮರೆತಿರುತ್ತೇವೆ. ಆದರೆ ಹಾಗೆ ಅಳುವುದಕ್ಕಿಂತ ನಾವು ಕರ್ಮದ ನಿಯಮಗಳನ್ನು ಅರಿತುಕೊಂಡು ಇವುಗಳು ನಮ್ಮ ಹಿಂದಿನ ಕರ್ಮದ ಫಲಗಳು ಎಂದು ತಿಳಿದುಕೊಳ್ಳುವುದು ಒಳಿತು.

**ಕರ್ಮವೆಂದರೆ ಅದೊಂದು ಕ್ರಿಯೆಯ ನಿಯಮ.**

**ನಮ್ಮ ಕ್ರಿಯೆಗಳಿಗನುಸಾರ ಪ್ರತಿಕ್ರಿಯೆ ಇರುತ್ತದೆ.**

**ನಾವು ಟೊಮ್ಯಾಟೊ ಗಿಡವನ್ನು ನೆಟ್ಟು**

**ಅದು ಮಾವಿನ ಫಲವನ್ನು ನೀಡಬೇಕೆಂದು ನಿರೀಕ್ಷಿಸಬಾರದು.**

**ನಾವು ಬಿತ್ತಿದಂತೆ ಫಲವನ್ನು ಪಡೆಯುತ್ತೇವೆ. !**

# ಸಾರಾಂಶ:

# ಕರ್ಮ ಎಂದರೇನು?

ಕರ್ಮವೆಂಬುದು ಲೋಕದ ಒಂದು ನಿಯಮ.

ಇದನ್ನು ಕಾರ್ಯಕಾರಣದ ನಿಯಮ ಅಥವಾ
ಕ್ರಿಯೆ-ಪ್ರತಿಕ್ರಿಯೆಯ ನಿಯಮವೆಂದೂ ಕರೆಯುತ್ತಾರೆ.

ಕರ್ಮದ ನಿಯಮದ ಪ್ರಕಾರ ನೀವು ಕೊಟ್ಟದ್ದನ್ನೇ ಪಡೆಯುವಿರಿ.
ಇದರಿಂದ ಯಾರೂ ತಪ್ಪಿಸಿಕೊಳ್ಳಲಾಗುವುದಿಲ್ಲ.
ಒಳ್ಳೆಯವರಿಗೆ ಕೆಟ್ಟ ಪ್ರತಿಫಲ ಸಿಗುವುದಿಲ್ಲ.

ನಾವು ಮಾಡಿದ ಯಾವುದೇ ಕ್ರಿಯೆಗೂ ಮುಂದೆ ಪ್ರತಿಕ್ರಿಯೆ ಇದ್ದೇ ಇರುತ್ತದೆ.

# 2

# ಕರ್ಮದ ನಿಯಮಗಳು ಹೇಗೆ ಕೆಲಸ ಮಾಡುತ್ತವೆ?

ನಾನು ನಿಮಗೆ ಸೇಬೊಂದನ್ನು ತೋರಿಸಿ, ಅದನ್ನು ನೋಡಿ ಅದರ ಸ್ವಾದವನ್ನು ತಿಳಿಸಿರಿ ಎಂದು ಹೇಳಿದರೆ ನೀವು ಅದನ್ನು ತಿಳಿಸಲು ಸಾಧ್ಯವೇ? ನಿಮಗೆ ಅದು ಸಾಧ್ಯವಾಗುವುದಿಲ್ಲ. ಕಾರಣ, ಕಣ್ಣುಗಳು ಸೇಬನ್ನು ಕೇವಲ ನೋಡಬಹುದೇ ಹೊರತು ಅದರ ರುಚಿಯನ್ನು ನೋಡಲು ಸಾಧ್ಯವಿಲ್ಲ. ಸೇಬು ಸವಿಯಾಗಿದೆಯೇ ಇಲ್ಲವೇ ಎಂದು ಹೇಳಲು ನಿಮಗೆ ನಾಲಿಗೆಯ ಸಹಾಯ ಬೇಕು. ನಾಲಿಗೆ ರುಚಿ ನೋಡಲು, ಕಣ್ಣುಗಳು ನೋಡಲು, ಕಿವಿ ಕೇಳಲು ಮತ್ತು ಮೂಗು ವಾಸನೆಯನ್ನು ಗ್ರಹಿಸಲು ಮತ್ತು ಚರ್ಮವು ಮುಟ್ಟಿ ನೋಡಿ ಭಾವಿಸಲು ಸಹಾಯ ಮಾಡುತ್ತವೆ. ನಮಗೆ ವಿಚಾರ ಮಾಡಲು ಮನಸ್ಸು, ಎಲ್ಲವನ್ನೂ ವಿಷದವಾಗಿ ನೋಡಿ ಆಯ್ಕೆ ಮಾಡಲು ಬುದ್ಧಿಮತ್ತೆ, ನಾವು ಗ್ರಹಿಸಿದ ವಿಚಾರಗಳನ್ನು ದಾಖಲಿಸಿಕೊಂಡು ನೆನಪಿನಲ್ಲಿಡಲು ನೆನಪಿನಶಕ್ತಿಯನ್ನು ಕೂಡ ಪಡೆದುಕೊಂಡಿದ್ದೇವೆ. ಆದರೆ ನಮ್ಮ ಕರ್ಮವನ್ನು ಅರಿತುಕೊಂಡು ಅರ್ಥೈಸಿಕೊಳ್ಳಲು ಯಾವುದೇ ಸಾಧನಗಳಿಲ್ಲ. ನಮ್ಮ ಯಾವ ಕ್ರಿಯೆಗೆ ಯಾವ ಪ್ರತಿಕ್ರಿಯೆ ಬರುತ್ತಿದೆ ಎಂಬುದನ್ನು ನಾವು ನೋಡಿ ತಿಳಿದುಕೊಳ್ಳಲಾಗುವುದಿಲ್ಲ. ಈ ನಿಯಮವನ್ನು ವಿವರಿಸಲು ಕೂಡ ನಮಗೆ ಸಾಧ್ಯವಾಗುವುದಿಲ್ಲ. ಆದರೆ ಅದು ಕೆಲಸ ಮಾಡುವ ರೀತಿಯನ್ನು ನಾವು ತಿಳಿದುಕೊಳ್ಳಬಲ್ಲೆವು. ನಾವು ಅದನ್ನು ಒಪ್ಪಬಹುದು ಇಲ್ಲವೇ ತಿರಸ್ಕರಿಸಬಹುದು. ನಾವು ಅದನ್ನು ಒಪ್ಪಿಕೊಳ್ಳಲಿಲ್ಲ ಎಂದ ಮಾತ್ರಕ್ಕೆ ಅವು ಅಸ್ತಿತ್ವದಲ್ಲಿ ಇಲ್ಲವೇ ಇಲ್ಲ ಎಂದು ಅರ್ಥವಲ್ಲ.

ಲೋಕದ ನಿಯಮಗಳು ಈ ಜಗತ್ತನ್ನು ಆಳುತ್ತಿವೆ. ಅಂತಹ ಹಲವಾರು ನಿಯಮಗಳಿವೆ. ವೈರುಧ್ಯಗಳ ನಿಯಮಗಳು ಜಗತ್ತಿನಲ್ಲಿ ಹಲವಾರು ವಿರುದ್ಧಗಳನ್ನು ಸೃಷ್ಟಿಸಿವೆ. ಹಗಲು-ರಾತ್ರಿ, ನೋವು-ನಲಿವು, ಲಾಭ-ನಷ್ಟ, ಬೇಸಿಗೆಕಾಲ-ಚಳಿಗಾಲ, ಉತ್ತರ-ದಕ್ಷಿಣ, ಹುಟ್ಟು-ಸಾವು, ಇತ್ಯಾದಿ. ಈ ವೈರುಧ್ಯಗಳು ಅಸ್ತಿತ್ವದಲ್ಲಿವೆ. ಇವುಗಳನ್ನು ಒಪ್ಪಿಕೊಳ್ಳದೆ ನಮಗೆ ಬೇರೆ ದಾರಿಯಿಲ್ಲ. ಚಕ್ರದ ನಿಯಮ ಎಂಬ ನಿಯಮ ಒಂದಿದೆ. ಇಲ್ಲಿ ಎಲ್ಲವೂ ಚಕ್ರದಂತೆ ಚಲಿಸುತ್ತವೆ- ವಸಂತಕಾಲ, ಬೇಸಿಗೆ, ಮಾಗಿ, ಚಳಿಗಾಲ ಇತ್ಯಾದಿಗಳ ಚಕ್ರ. ಮಹಿಳೆಯರು ಋತುಮತಿಯರಾಗಲು ಹಗಲು ರಾತ್ರಿಗಳ ಋತುಚಕ್ರ. ಇವುಗಳು ಯಾವುದೇ ಅಡೆತಡೆಗಳಿಲ್ಲದೆ ಒಂದನ್ನೊಂದು ಹಿಂಬಾಲಿಸುತ್ತವೆ.

ಲೋಕದ ಎಲ್ಲ ನಿಯಮಗಳನ್ನೂ ಸೃಷ್ಟಿಕರ್ತನು ನಿರ್ಮಿಸಿದ್ದಾನೆ. ಒಮ್ಮೆ ಸೃಷ್ಟಿಸಿದ ನಂತರ ಅವು ತಮ್ಮಷ್ಟಕ್ಕೆ ತಾವೇ ಸ್ವಯಂಚಾಲಿತವಾಗಿ ಕಾರ್ಯನಿರ್ವಹಿಸುತ್ತವೆ. ಸ್ಯಾಮ್ಸಂಗ್ ಕಂಪೆನಿಯು ನಮ್ಮ ಮೊಬೈಲುಗಳು ಕಾರ್ಯನಿರ್ವಹಿಸುವ ತಂತ್ರಾಂಶವನ್ನು ಅಭಿವೃದ್ಧಿಪಡಿಸಿದೆ. ಪ್ರತಿ ಸಲವೂ ನಾವು ಮೊಬೈಲಿನಲ್ಲಿ ಅಕ್ಷರಗಳ ವಿನ್ಯಾಸವನ್ನು ಬದಲಿಸಲು ಬಯಸಿದರೆ ಆ ಕಂಪೆನಿಯ ಅಧ್ಯಕ್ಷರು ನಮ್ಮ ಕೋರಿಕೆಯನ್ನು ಈಡೇರಿಸಲಾರರು. ಎಲ್ಲಾ ಸ್ಯಾಮ್ಸಂಗ್ ಮೊಬೈಲುಗಳಿಗೂ ಅಪ್ಡೇಟುಗಳಿವೆ. ಮತ್ತು ಅದರಲ್ಲಿ ಅಡಕವಾಗಿರುವ ತಂತ್ರಾಶಗಳು ಆ ಮೊಬೈಲ್ ದಕ್ಷತೆಯಿಂದ ಕಾರ್ಯನಿರ್ವಹಿಸಲು ಸಹಾಯ ಮಾಡುತ್ತವೆ. ಲೋಕ ಕೂಡ ಇದಕ್ಕಿಂತ ಭಿನ್ನವಾಗಿಲ್ಲ. ಕರ್ಮದ ನಿಯಮಗಳನ್ನೂ ಒಳಗೊಂಡಂತೆ ಈ ಭೂಮಿಯ ಮೇಲಿನ ಸಕಲವನ್ನೂ ನಿರ್ದಿಷ್ಟ ರೀತಿಯಲ್ಲಿ ವಿನ್ಯಾಸಗೊಳಿಸಿ ನಿರ್ವಹಿಸಲಾಗುತ್ತಿದೆ.

ಸೃಷ್ಟಿಕರ್ತನು ಅದರ ಪ್ರತಿಯೊಂದು ವಿವರವನ್ನೂ ನಿರ್ವಹಿಸುವುದಿಲ್ಲ. ಅಥವಾ ಅವನು

ಲೋಕ ನ್ಯಾಯಾಲಯದಲ್ಲಿ ಕೂತು ಇಂತಹವರಿಗೆ ಹೀಗೆ ಆಗಬೇಕು ಎಂದು ತೀರ್ಪನ್ನು ನೀಡುವುದಿಲ್ಲ. ಎಲ್ಲವೂ ಕರ್ಮದ ನಿಯಮದಂತೆ ನಡೆಯುತ್ತದೆ.

ಕಾರ್ಯಕಾರಣದ ನಿಯಮವು ಕರ್ಮದ ನಿಯಮಗಳೆಂದು ಹೆಚ್ಚು ಜನಪ್ರಿಯವಾಗಿರುವ ಈ ನಿಯಮಗಳು ಈ ಜಗತ್ತಿನಲ್ಲಿ ಯಾವುದೇ ವಿಷಯವು ಆಕಸ್ಮಿಕವಾಗಿ ನಡೆಯದಂತೆ ನೋಡಿಕೊಳ್ಳುತ್ತವೆ. ಪ್ರತಿಯೊಂದಕ್ಕೂ ಭೂತ ಮತ್ತು ಭವಿಷ್ಯದ ನಂಟಿದೆ. ನಮ್ಮ ಹಿಂದಿನ ಕ್ರಿಯೆಗಳು ಭವಿಷ್ಯಕ್ಕೆ ಕಾರಣವಾಗಬಹುದು. ನಮ್ಮ ಭೂತವು ನಮ್ಮ ವರ್ತನಾನವನ್ನು ನಿರ್ಧರಿಸಿದಂತೆ ನಮ್ಮ ವರ್ತಮಾನವು ನಮ್ಮ ಭವಿಷ್ಯವನ್ನು ಕೂಡ ನಿರ್ಧರಿಸುತ್ತದೆ.

ಕರ್ಮದ ನಿಯಮಗಳು ನಮ್ಮ ಜೀವಮಾನವಿಡಿ ಜಾರಿಯಲ್ಲಿರುತ್ತವೆ. ಈ ನಿಯಮದ ಪ್ರಕಾರ ನೀವು ಕೊಟ್ಟದ್ದನ್ನು ಮತ್ತೆ ಪಡೆಯುತ್ತೀರಿ. ನೀವು ಬಿತ್ತಿದಂತೆ ಬೆಳೆ. ನಮ್ಮನ್ನು ಯಾರೂ ಸೂಕ್ಷ್ಮ ರೀತಿಯಲ್ಲಿ ನಿರ್ವಹಿಸುವುದಿಲ್ಲ. ಆದರೂ ಸಹ ನಮ್ಮಲ್ಲಿ ಕೆಲವರು ಸಂತೋಷವಾಗಿದ್ದೇವೆ ಇನ್ನೂ ಕೆಲವರು ಸಂತೋಷವಾಗಿಲ್ಲ. ಏಕೆ? ಇದಕ್ಕೆ ಕಾರಣ ಕರ್ಮದ ನಿಯಮಗಳು. ಹಿಂದಿನ ಕ್ರಿಯೆಗಳ ಆಧಾರದ ಮೇಲೆ ಕರ್ಮದ ನಿಯಮಗಳು ಯಾರು ಸಂತೋಷದಿಂದಿರುತ್ತಾರೆ, ಯಾರು ಸಂತೋಷವಾಗಿರುವುದಿಲ್ಲ ಎಂಬುದನ್ನು ನಿರ್ಧರಿಸುತ್ತವೆ.

ನಮ್ಮ ಎಲ್ಲಾ ಕ್ರಿಯೆಗಳಿಗೂ ತಕ್ಕ ಪ್ರತಿಕ್ರಿಯೆ ಅಥವಾ ಪ್ರತಿಫಲ ಇದ್ದೇ ಇರುತ್ತದೆ. ಅವು ಕೇವಲ ನಮ್ಮ ಈ ಜನ್ಮದಲ್ಲಿ ಅಷ್ಟೇ ಅಲ್ಲ ಮುಂದಿನ ಜನ್ಮದಲ್ಲಿ ಕೂಡ ಪರಿಣಾಮ ಬೀರುತ್ತವೆ. ನಮ್ಮ ಕರ್ಮದ ಫಲವಾಗಿ ಮುಂದಿನ ಜನ್ಮವೂ ಕೂಡ ನಿರ್ಧಾರವಾಗುತ್ತದೆ.

ಈ ಭೂಮಿಯ ಮೇಲೆ 8 ಶತಕೋಟಿ ಜನರು ಜೀವಿಸುತ್ತಿದ್ದಾರೆ. ಅವರಲ್ಲಿ ಪ್ರತಿಯೊಬ್ಬನೂ 50,000 ವಿಚಾರಗಳನ್ನು ಯೋಚಿಸಬಲ್ಲವನಾಗಿದ್ದಾನೆ. ಈ ವಿಚರಗಳು ಅಂತಿಮವಾಗಿ

ಭಾವನೆ ಮತ್ತು ಕ್ರಿಯೆಗಳಿಗೆ ಎಡೆಮಾಡಿಕೊಡುತ್ತವೆ. ಅಂದರೆ ಪ್ರತಿದಿನವೂ ಜನರು ಸಹಸ್ರಕೋಟಿ ಕ್ರಿಯೆಗಳಲ್ಲಿ ತೊಡಗಿರುತ್ತಾರೆ. ಇದನ್ನು ದಾಖಲಿಸಲು ಬೇಕಾದ ಕಂಪ್ಯೂಟರಿನ ಗಾತ್ರ ಮತ್ತು ಶಕ್ತಿಯನ್ನು ನೀವು ಊಹಿಸಬಲ್ಲಿರಾ? ಇಲ್ಲಿ ಪ್ರತಿಯೊಂದು ಒಳ್ಳೆಯ ಕ್ರಿಯೆಗೆ ಉತ್ತಮ ಪ್ರತಿಫಲವನ್ನೂ, ಪ್ರತಿಯೊಂದು ಕೆಟ್ಟ ಕ್ರಿಯೆಗೆ ಕೆಟ್ಟ ಪ್ರತಿಫಲವನ್ನೂ ದಾಖಲಿಸಲಾಗುತ್ತದೆ.

ಈ ಲೋಕ ಹೇಗೆ ಮಾನವರ ಅರಿವಿಗೆ ಸುಲಭವಾಗಿ ದಕ್ಕುವುದಿಲ್ಲವೋ ಹಾಗೆಯೇ ಕರ್ಮದ ನಿಯಮಗಳು ಕೂಡ ಜನರ ಅರಿವಿಗೆ ಅಷ್ಟು ಸುಲಭವಾಗಿ ದಕ್ಕುವುದಿಲ್ಲ. ಈ ಭೂಮಿಯ ಮೇಲೆ 200ಕ್ಕೂ ಹೆಚ್ಚು ವಿವಿಧ ದೇಶಗಳಲ್ಲಿ ವಾಸಿಸುತ್ತಿರುವ 8 ಶತಕೋಟಿ ಜನರಲ್ಲಿ, ಸಹಸ್ರಾರು ಕೋಟಿ ಕೀಟಗಳು, ಪ್ರಾಣಿಗಳು ಮತ್ತು ಸಸ್ಯಗಳ ನಡುವೆ ಕೇವಲ ನೀವೂ ಒಬ್ಬರು ಅಷ್ಟೆ. ಈ ಭೂಮಿಯು ಕೂಡ ಆಕಾಶಗಂಗೆಯ ಮೂಲೆಯೊಂದರಲ್ಲಿರುವ ಒಂದು ಬಿಂದು ಅಷ್ಟೆ. ಸೃಷ್ಟಿಯ ಈ ಆಗಾಧತೆಯನ್ನು ನೀವು ಊಹಿಸಿಕೊಳ್ಳಲು ಸಾಧ್ಯವೇ?

ನಮಗೆ ಈ ಲೋಕದ ಅಗಾಧತೆಯನ್ನು ಮತ್ತು ಅದರ ನಿಯಮಗಳನ್ನು ಗ್ರಹಿಸಲು ಸಾಧ್ಯವಾಗದೇ ಹೋಗಿರಬಹುದು. ಆದರೆ ಅದರ ಅಸ್ತಿತ್ವವನ್ನು ಅರ್ಥ ಮಾಡಿಕೊಳ್ಳುವಷ್ಟು ಬುದ್ಧಿಮತ್ತೆಯನ್ನು ಪಡೆದುಕೊಂಡಿದ್ದೇವೆ. ಇದರ ಪೂರ್ಣ ಪ್ರಯೋಜನವನ್ನು ಪಡೆದುಕೊಂಡು ನಮ್ಮ ಜೀವನವನ್ನು ಸುಖದಾಯಕವಾಗಿ ತುಂಬು ತೃಪ್ತಿಯಿಂದ ಜೀವಿಸುವುದು ನಮ್ಮ ಜವಾಬ್ದಾರಿಯಾಗಿದೆ. ಯಾರು ಲೋಕದ ನಿಯಮಗಳನ್ನು, ಅದರಲ್ಲೂ ಕರ್ಮದ ನಿಯಮಗಳನ್ನು ಅರ್ಥ ಮಾಡಿಕೊಳ್ಳುವುದಿಲ್ಲವೋ ಅವರು ಜೀವನದಲ್ಲಿ ಎಲ್ಲದರ ಬಗ್ಗೆಯೂ ದೂರುತ್ತಾರೆ. ಅವರು ತಮಗೆ ದೊರಕಿರುವ ಈ ಉಡುಗೊರೆಯನ್ನು ಸರಿಯಾಗಿ ಅರ್ಥ ಮಾಡಿಕೊಳ್ಳದೆ ದೂರುವುದರಲ್ಲೇ ತಮ್ಮ ಜೀವನವನ್ನು ಕಳೆದುಬಿಡುತ್ತಾರೆ.

ಬುದ್ಧಿವಂತರಾದ ಮಾನವರು ಈ ಕರ್ಮದ ನಿಯಮ ಕೇಲಸ ಮಾಡುವುದನ್ನು ನೋಡಲಾರರೇ? ಟೊಮ್ಯಾಟೊ ಗಿಡಗಳನ್ನು ನೆಟ್ಟರೆ ನಮಗೆ ಅದರಲ್ಲಿ ಮಾವು ಸಿಗಲಾರದೆಂದುಬುದನ್ನು ನಾವು ತಿಳಿದುಕೊಳ್ಳಲಾರೆವೇ? ಒಳ್ಳೆಯ ಕ್ರಿಯೆಗೆ ಉತ್ತಮ ಪ್ರತಿಫಲ ಮತ್ತು ಕೆಟ್ಟ ಕ್ರಿಯೆಗಳಿಗೆ ಕೆಟ್ಟ ಪ್ರತಿಫಲ ದೊರಕುತ್ತದೆ ಎಂಬುದನ್ನು ತಿಳಿದುಕೊಳ್ಳುವಷ್ಟು ಸಾಮಾನ್ಯ ಜ್ಞಾನವನ್ನು ನಾವು ಹೊಂದಿಲ್ಲವೆ?

ನಿಮಗೆ ಯಾರಾದರೂ ಹಸನ್ಮುಖಿಯಾಗಿ ಹೂಗುಚ್ಛವನ್ನು ನೀಡಿದರೆ, ನೀವು ಏನು ಮಾಡುವಿರಿ? ಅದಕ್ಕೆ ಪ್ರತಿಯಾಗಿ ನೀವು ಅವರನ್ನು ಒದೆಯುತ್ತೀರಾ? ಇದಕ್ಕೆ ವಿರುದ್ಧವಾಗಿ ನಿಮಗೆ ಯಾರಾದರೂ ನಿಮ್ಮ ಮುಖಕ್ಕೆ ಒದ್ದರೆ ನೀವು ಅದಕ್ಕೆ ಪ್ರತಿಯಾಗಿ ಮುಗುಳು ನಗೆಯನ್ನೊ ಉಡುಗೊರೆಯನ್ನೆ ನೀಡುತ್ತೀರಾ?

ನಮ್ಮ ಪ್ರತಿಯೊಂದು ಕ್ರಿಯೆ, ಪ್ರತಿಕ್ರಿಯೆ, ವರ್ತನೆ ಇವೆಲ್ಲವೂ ಮತ್ತೊಬ್ಬರ ವರ್ತನೆ, ಕ್ರಿಯೆ, ಪ್ರತಿಕ್ರಿಯೆಗಳ ಮೇಲೆ ಅವಲಂಬಿತವಾಗಿವೆ ಎಂಬುದನ್ನು ನಾವೆಲ್ಲರೂ ಬಲ್ಲೆವು. ನಾವು ಒಳ್ಳೆಯದಕ್ಕೆ ಒಳ್ಳೆಯ ರೀತಿಯಲ್ಲಿ ಮತ್ತು ಕೆಟ್ಟದ್ದಕ್ಕೆ ಕೆಟ್ಟ ರೀತಿಯಲ್ಲಿ ಪ್ರತಿಕ್ರಿಯಿಸುತ್ತೇವೆ. ಕರ್ಮದ ನಿಯಮ ಇದಕ್ಕಿಂತ ಭಿನ್ನವಾಗಿಲ್ಲ. ಇರುವ ಒಂದೇ ಒಂದು ವ್ಯತ್ಯಾಸವೆಂದರೆ, ಕರ್ಮದ ನಿಯಮಗಳು ನಮ್ಮ ಹಿಂದಿನ ಕ್ರಿಯೆಗಳಿಗೂ ಅಂದರೆ ಹಿಂದಿನ ಜನ್ಮದ ಕ್ರಿಯೆಗಳಿಗೂ ಅನ್ವಯವಾಗುತ್ತವೆ. ಆದ್ದರಿಂದ ಈ ನಿಯಮವನ್ನು ಅರ್ಥಮಾಡಿಕೊಳ್ಳುವುದು ಬಹಳ ಕಷ್ಟವಾಗಿದೆ.

ಕೆಲವೊಮ್ಮೆ ಉತ್ತಮ ವ್ಯಕ್ತಿಗಳಿಗೆ ಕೆಟ್ಟ ಪ್ರತಿಫಲ ಸಿಗುವುದನ್ನು ನೋಡುತ್ತೇವೆ. ಇದು ಏಕೆ ಹೀಗೆ ಎಂಬುದು ನಮಗೆ ಅರ್ಥವಾಗುವುದಿಲ್ಲ. ಇದಕ್ಕೆ ಕಾರಣ ಕರ್ಮದ ನಿಯಮಗಳು

ಎಂಬುದನ್ನು ನಾವು ಮರೆತುಬಿಟ್ಟಿದ್ದೇವೆ. ಈ ನಿಯಮಗಳು ನಮ್ಮ ಹಿಂದಿನ ಕ್ರಿಯೆಗಳ ಆಧಾರದ ಮೇಲೆಯೇ ಜಾರಿಯಾಗುತ್ತವೆ. ನಮಗೆ ಸಿಗುವ ಕೆಟ್ಟ ಪ್ರತಿಫಲಗಳು ನಮ್ಮ ಕೆಟ್ಟ ಕ್ರಿಯೆಗಳಿಗೆ ಸಿಗುವ ಪ್ರತಿಫಲಗಳಾಗಿವೆಯೇ ಹೊರತು ಇನ್ನೇನೂ ಅಲ್ಲ. ಈ ಕ್ರಿಯೆಗಳು ಬಹಳ ಹಿಂದೆ ನಡೆದು ನಮಗೆ ಮರೆತು ಹೋಗಿರಬಹುದು. ಆದರೆ ಕರ್ಮದ ನಿಯಮಗಳು ಇಂತಹ ತಪ್ಪನ್ನು ಮಾಡುವುದಿಲ್ಲ. ಅದಕ್ಕೆ ಕೆಟ್ಟ ಕ್ರಿಯೆಗಳಿಗೆ ಉತ್ತಮ ಪ್ರತಿಫಲಗಳನ್ನು ನೀಡಲು ಮತ್ತು ಉತ್ತಮ ಕ್ರಿಯೆಗಳಿಗೆ ಕೆಟ್ಟ ಪ್ರತಿಫಲಗಳನ್ನು ನೀಡಲು ಸಾಧ್ಯವಿಲ್ಲ. ಸೂರ್ಯನು ಹೇಗೆ ಬೆಳಗಿನ ಹೊತ್ತು ಮೂಡಲು ಮರೆಯುವುದಿಲ್ಲವೋ ಹಾಗೆಯೆ ಈ ನಿಯಮ ಕೂಡ ಒಂದು ಸರಿಯಾದ ಲೋಕದ ನಿಯಮವಾಗಿದೆ. ಅದು ಎಂದೂ ತನ್ನ ಕರ್ತವ್ಯವನ್ನು ಮರೆಯುವುದಿಲ್ಲ. ನಿಮ್ಮ ಮನೆಯಲ್ಲಿರುವ ಮೇಜು, ಕುರ್ಚಿಗಳು ಆಕಾಶದಲ್ಲಿ ಹಾರಾಡುವ ಸಾಧ್ಯತೆ ಇದೆಯೇ? ಹಾಗಾಗಲು ಸಾಧ್ಯವಿಲ್ಲ. ಕಾರಣ, ಗುರುತ್ವಾಕರ್ಷಣೆಯ ತತ್ವ ಅಸ್ತಿತ್ವದಲ್ಲಿರುವುದರಿಂದ. ಇದು ಜಗತ್ತನ್ನು ಆಳುತ್ತಿರುವ ಲೋಕ ನಿಯಮಗಳಲ್ಲೊಂದಾಗಿದೆ. ಹಾಗೆಯೇ ಕರ್ಮದ ನಿಯಮವೂ ಕೂಡ ಜಗತ್ತನ್ನು ಆಳುತ್ತದೆ.

ನಾವು ಕರ್ಮದ ನಿಯಮಗಳನ್ನು ಅರ್ಥ ಮಾಡಿಕೊಳ್ಳದೆ ಇರಲು ಕಾರಣ, ಸಾವಿನೊಂದಿಗೆ ಕರ್ಮ ಕೊನೆಗೊಳ್ಳುವುದಿಲ್ಲ ಎಂಬುದನ್ನು ತಿಳಿದುಕೊಳ್ಳದೆ ಇರುವುದು. ಸಾವು ಕೇವಲ ಒಂದು ತಿರುವು ಅಷ್ಟೇ. ನಾವು ಮತ್ತೊಂದು ಜೀವವಾಗಿ ಪುನರ್ಜನ್ಮ ಪಡೆಯುತ್ತಿರುವಂತೆಯೇ ನಮ್ಮ ಹಿಂದಿನ ಜೀವನದ ಕ್ರಿಯೆಗಳನ್ನು ದಾಖಲು ಮಾಡಿಕೊಳ್ಳುತ್ತದೆ. ಆದ ಕಾರಣ, ಈಗತಾನೆ ಹುಟ್ಟಿದ ಮಗು ಅಂಗವೈಕಲ್ಯತೆಯಿಂದ ಬಳಲುತ್ತಿದ್ದರೆ ಅದಕ್ಕೆ ಕಾರಣವೇನು ಎಂಬುದು ನಮಗೆ ಅರ್ಥವಾಗುವುದಿಲ್ಲ. ಆ ಮಗು ತನ್ನ ಹಿಂದಿನ ಜೀವನದ ಕರ್ಮಕ್ಕೆ ಪ್ರತಿಫಲವನ್ನು ಅನುಭವಿಸುತ್ತಿದೆ ಎಂಬುದನ್ನು ಮನಗಾಣಲು ನಾವು ಅಸಮರ್ಥರಾಗಿದ್ದೇವೆ. ಹಿಂದಿನ ಜನ್ಮದ ತಪ್ಪುಗಳಿಗೆ ಪ್ರಾಯಶ್ಚಿತ್ತವಾಗಬೇಕಾದರೆ

ಮಗು ಅಂಗವೈಕಲ್ಯತೆಯೊಂದಿಗೆ ಹುಟ್ಟುವುದು ಅನಿವಾರ್ಯವಾಗುತ್ತದೆ. ನಮಗೆ ಸಾವಿಲ್ಲ ಎಂಬ ಅಂಶವನ್ನು ನಾವು ತಿಳಿದೇ ಇಲ್ಲ. ಆದ್ದರಿಂದಲೇ ನಾವು ಒಬ್ಬ ವ್ಯಕ್ತಿಯು ಮೃತಪಟ್ಟಾಗ ಅವನು ಸತ್ತಿದ್ದಾನೆ ಅಥವಾ ಹೊರಟು ಹೋದ ಎನ್ನುತ್ತೇವೆ. ಆ ವ್ಯಕ್ತಿಯು ಹೊರಟು ಹೋದದ್ದಾದರೂ ಎಲ್ಲಿಗೆ? ನಮಗೆ ಇದಕ್ಕೆ ಯಾವುದೇ ಉತ್ತರಗಳಿಲ್ಲದಿರುವುದರಿಂದ ಚರ್ಚೆಯನ್ನು ಅಲ್ಲಿಗೇ ಮುಗಿಸುತ್ತೇವೆ. ಆದರೆ ಕರ್ಮದ ಕಥೆ ಅಲ್ಲಿಗೇ ಮುಗಿಯುವುದಿಲ್ಲ.

ಕೆಲವರು ಶ್ರೀಮಂತ ಕುಟುಂಬಗಳಲ್ಲಿ ಜನಿಸಿದರೆ ಕೆಲವರು ಬಡತನದಲ್ಲಿ ಜನಿಸಿರುತ್ತಾರೆ. ಏಕೆ? ಇದು ಯಕಶ್ಚಿತವಾಗಿ ನಡೆಯುವಂಥದ್ದೇ? ಖಂಡಿತವಾಗಿಯೂ ಅಲ್ಲ. ಕರ್ಮದ ನಿಯಮಗಳು ಹುಟ್ಟನ್ನು ನಿಯಂತ್ರಿಸುತ್ತವೆ. ನಮ್ಮ ಹುಟ್ಟು ಹಿಂದಿನ ಜನ್ಮದಲ್ಲಿ ನಾವು ಮಾಡಿರುವ ಕ್ರಿಯೆಗಳನ್ನು ಆಧರಿಸಿದೆ. ನಾವು ಒಂದು ದೇಹದಲ್ಲಿ ಜೀವಿಸುತ್ತೇವೆ. ಆ ದೇಹವು ಸಾವನ್ನಪ್ಪಿ ವಿಘಟನೆ ಹೊಂದುತ್ತದೆ. ಆದರೆ ನಮ್ಮ ಕರ್ಮಗಳೆಲ್ಲವೂ ದಾಖಲುಗೊಂಡು, ಅದರ ಆಧಾರದ ಮೇಲೆ ಮತ್ತೊಂದು ಹೊಸ ದೇಹದಲ್ಲಿ ನಾವು ಪುನರ್ಜನ್ಮ ಪಡೆಯುತ್ತೇವೆ. ಇವು ಬಹಳ ಕ್ಲಿಷ್ಟವಾದ ವಿದ್ಯಮಾನಗಳಾಗಿರುವುದರಿಂದ ಮತ್ತು ಸ್ಪಷ್ಟ ಪುರಾವೆಗಳಿಲ್ಲದೆ ಕೇವಲ ನಮ್ಮ ಗಮನಕ್ಕೆ ಬರುವುದರಿಂದ ನಾವು ಕರ್ಮದ ನಿಯಮಗಳ ಅಸ್ತಿತ್ವವನ್ನು ಅಲ್ಲಗಳೆಯುತ್ತೇವೆ.

ಸಾಮಾನ್ಯವಾಗಿ ತಿಳಿದುಕೊಂಡಂತೆ ನಾವು ಒಂದು ಸ್ಥೂಲವಾದ ದೇಹ, ಬಹಳ ಸೂಕ್ಷ್ಮವಾದ, ಕಣ್ಣಿಗೆ ಕಾಣಿಸದ ದೇಹ ಮತ್ತು ಪ್ರಾಣದ ಮೊತ್ತವಾಗಿದ್ದೇವೆ. ಇದನ್ನೇ ಆತ್ಮವೆಂದು ಕರೆಯುತ್ತಾರೆ. ಸ್ಥೂಲವಾದ ದೇಹವು ಸಾವನ್ನಪ್ಪುತ್ತದೆ. ಸೂಕ್ಷ್ಮವಾದ ಕಣ್ಣಿಗೆ ಕಾಣಿಸದ ದೇಹವು - ಮನಸ್ಸು, ಪ್ರಜ್ಞೆ, ಬುದ್ಧಿಮತ್ತೆ ಮತ್ತು ಅಹಂನ್ನು ಹೊಂದಿದ ದೇಹವು ಜೀವನವನ್ನು ಮೀರಿ ತನ್ನ ಪ್ರಯಾಣವನ್ನು ಮುಂದುವರೆಸುತ್ತದೆ. ನಾವು ಮರುಹುಟ್ಟು

ಅಥವಾ ಪುನರ್ಜನ್ಮದಲ್ಲಿ ನಂಬಿಕೆ ಇಲ್ಲದವರಾಗಿರಬಹುದು. ಆದರೆ ಕರ್ಮದ ನಿಯಮವು ನಮಗೆ ಬೇರೆ ಆಯ್ಕೆಗಳನ್ನು ನೀಡುವುದೇ ಇಲ್ಲ. ನಾವು ಮನಸ್ಸು ಮತ್ತು ಅಹಂನ್ನು ಹೊಂದಿದ ದೇಹದಲ್ಲಿ ಬದುಕಿರುವವರೆಗೂ ಕ್ರಿಯೆಗಳಲ್ಲಿ ತೊಡಗಿರಬೇಕಾಗುತ್ತದೆ. ಹಾಗಾಗಿ ಕರ್ಮದ ನಿಯಮಗಳಿಗೆ ಒಳಪಟ್ಟಿರುತ್ತೇವೆ. ನಾವು ನಮ್ಮ ದೇಹವನ್ನು ತ್ಯಜಿಸಿದರೂ ದಾಖಲುಗೊಂಡಿರುವ ನಮ್ಮ ಕ್ರಿಯೆ ಅಥವಾ ಕರ್ಮಗಳನ್ನು ಮುಂದಿನ ಜನ್ಮಕ್ಕೆ ಕೊಂಡೊಯ್ಯುತ್ತೇವೆ. ಹೊಸ ಹುಟ್ಟಿನ ಹೊಸ ದೇಹದಲ್ಲಿ ನಮ್ಮ ಒಳ್ಳೆಯ ಕ್ರಿಯೆಗಳಿಗೆ ಉತ್ತಮ ಪ್ರತಿಫಲಗಳನ್ನು ಮತ್ತು ಕೆಟ್ಟ ಕ್ರಿಯೆಗಳಿಗೆ ಕೆಟ್ಟ ಪ್ರತಿಫಲಗಳನ್ನು ಪಡೆದುಕೊಳ್ಳುತ್ತೇವೆ.

ಕರ್ಮವನ್ನು ಅನುಭವಿಸುವವರು ಯಾರು? ನಾವು ಜೀವಂತವಾಗಿರುವತನಕ ದೇಹ, ಮನಸ್ಸು ಮತ್ತು ಆತ್ಮದ ಸಂಕೀರ್ಣದಲ್ಲಿ ಬದುಕುವ ನಾವು ಕರ್ಮವನ್ನು ಅನುಭವಿಸುವವರಾಗಿದ್ದೇವೆ. ಆದರೆ ಸಾವಿನ ನಂತರ ಏನಾಗುತ್ತದೆ? ದೇಹ ಉಳಿಯುವುದಿಲ್ಲ. ಹಾಗಾದರೆ, ಕರ್ಮವನ್ನು ಯಾರು ಅನುಭವಿಸುತ್ತಾರೆ?

ದೇಹವು ಸತ್ತ ನಂತರ ಮನಸ್ಸು ಮತ್ತು ಅಹಂ ಮತ್ತೊಂದು ದೇಹದಲ್ಲಿ ಮರುಹುಟ್ಟು ಪಡೆಯುವ ಮೂಲಕ ತಮ್ಮ ಪ್ರಯಾಣವನ್ನು ಮುಂದುವರೆಸುತ್ತವೆ. ಅವು ಹಿಂದಿನ ಜೀವನದ ಕರ್ಮವನ್ನಷ್ಟೇ ಹೊತ್ತು ತಂದಿರುವುದಿಲ್ಲ, ಹಿಂದಿನ ಜೀವನದ ಕರ್ಮಗಳನ್ನೂ ಕೂಡ ಹೊತ್ತು ತಂದಿರುತ್ತವೆ. ಈ ಮನಸ್ಸು ಮತ್ತು ಅಹಂ. Me (Mind + Ego) ಕರ್ಮವನ್ನು ಅನುಭವಿಸುತ್ತವೆ. ಈಗ ಸತ್ತ ದೇಹವು ಕೂಡ ತನ್ನೆಲ್ಲಾ ಅನುಭವವನ್ನು ತಾನು ಜೀವಂತವಿರುವಾಗ ಮನಸ್ಸು ಮತ್ತು ಅಹಂಗೆ ರವಾನಿಸುತ್ತದೆ. ಮನಸ್ಸು ಮತ್ತು ಅಹಂಗಳಿಗೆ ಯಾವತ್ತೂ ಸಾವಿಲ್ಲ. ಅವು ಮತ್ತೊಂದು ದೇಹದಲ್ಲಿ ಮರುಹುಟ್ಟು ಪಡೆದು

ಮತ್ತೆ-ಮತ್ತೆ ತೋರಿಸಿಕೊಳ್ಳುತ್ತವೆ. ಹಾಗಾಗಿ ಪ್ರತಿ ಹುಟ್ಟಿನಲ್ಲೂ ಕರ್ಮವು ಒಟ್ಟುಗೂಡುತ್ತದೆ. ಹೀಗೆ ಒಟ್ಟುಗೊಂಡ ಕರ್ಮದ ಆಧಾರದ ಮೇಲೆ ಮನಸ್ಸು ಮತ್ತು ಅಹಂ ಮತ್ತೊಂದು ದೇಹದಲ್ಲಿ ಮರುಹುಟ್ಟು ಪಡೆಯುತ್ತದೆ.

ನಾವು ಮಾನವರು ಕರ್ಮದ ನಿಯಮಗಳನ್ನು ಅರ್ಥಮಾಡಿಕೊಂಡಿಲ್ಲ. ನಮಗೆ ಜೀವನದ ಅರ್ಥ ಕೂಡ ಗೊತ್ತಿರುವುದಿಲ್ಲ. ಕರ್ಮ ಜೀವನಕ್ಕೆ ಅರ್ಥವಂತಿಕೆಯನ್ನು ಪಡೆದುಕೊಳ್ಳುವ ಸಾಧನವೆಂಬುದನ್ನು ನಾವು ತಿಳಿದುಕೊಂಡಿಲ್ಲ. ನಿಜ, ಸ್ವಅರಿವನ್ನು ಪಡೆಯುವುದು ಮತ್ತು ಸೃಷ್ಟಿಕರ್ತನನ್ನು ಅರಿಯುವುದು ಬಹಳ ಮುಖ್ಯ. ಆದರೆ ಕರ್ಮದ ನಿಯಮಗಳನ್ನು ತಿಳಿಯದೇ ಇರುವುದು ಅಥವಾ ಅದಕ್ಕೆ ವಿಮುಖರಾಗಿರುವುದರಿಂದ ನಾವು ಜೀವನವನ್ನು ದುಃಖದಲ್ಲೇ ಕಳೆಯುವುದು ಖಂಡಿತ. ನಮಗೆ ಜಗತ್ತಿನಲ್ಲಿ ಎಲ್ಲೆಲ್ಲೂ ದುಃಖವೇ ಕಾಣುತ್ತದೆಯಲ್ಲವೇ? ಜೀವನದ ರಂಗುಲ-ರಾಟೆ ಸುಖ ದುಃಖಗಳು ಸಾಮಾನ್ಯವಾದರೂ ನಾವು ಕಡೆಗೆ ವಯಸ್ಸಾಗಿ ಸಾವನ್ನಪ್ಪುತ್ತೇವೆ. ಕರ್ಮದ ನಿಯಮಗಳನ್ನು ಅರಿಯುವುದು ನಮಗೆ ಜೀವನದ ಅರ್ಥವಂತಿಕೆಯನ್ನು ಅರಿಯಲು ಸಹಾಯಕ. ಕರ್ಮದ ನಿಯಮಗಳು ಎಂದೂ ನಮ್ಮನ್ನು ದಂಡಿಸುವುದಿಲ್ಲ. ಅವು ನಮ್ಮನ್ನು ಸುಧಾರಿಸುತ್ತವೆ. ಅವುಗಳು ನಮ್ಮ ಮನಸ್ಸನ್ನು ಸುಧಾರಿಸಲು ಮತ್ತು ಕರ್ಮ ಮತ್ತು ಇನ್ನಿತರ ಲೋಕದ ನಿಯಮಗಳನ್ನು ತಿಳಿದುಕೊಳ್ಳಲು ಸಹಾಯ ಮಾಡುತ್ತವೆ.

ಕೆಲವರಿಗೆ ಕರ್ಮ ಎಂಬುದು ಅರ್ಥವಾಗಿಯೇ ಇಲ್ಲ. ಅವರು ಜಿವನದಲ್ಲಿ ಎಲ್ಲವೂ ಪೂರ್ವನಿರ್ಧಾರಿತವೆಂದು ತಿಳಿದಿದ್ದಾರೆ. ದೇವರು ಅವರ ಭವಿಷ್ಯವನ್ನು ಈಗಾಗಲೇ ನಿರ್ಧರಿಸಿಬಿಟ್ಟಿರುವುದರಿಂದ ತಮ್ಮ ಕ್ರಿಯೆಗಳು ಅಷ್ಟು ಮುಖ್ಯವಲ್ಲವೆಂದು ಭಾವಿಸಿದ್ದಾರೆ. ಸೃಷ್ಟಿಕರ್ತನು ಬಹಳ ಬುದ್ಧಿವಂತನಾಗಿದ್ದು ನಮ್ಮನ್ನು ಗೊಂಬೆಗಳಂತೆ ಸೃಷ್ಟಿಸಿಲ್ಲ. ಅವನು

ನಮಗೆ ಬುದ್ಧಿಮತ್ತೆಯನ್ನು ನೀಡಿದ್ದು ನಾವು ಉತ್ತಮ ಅಥವಾ ಕೆಟ್ಟ ಕ್ರಿಯೆಗಳನ್ನು ಆಯ್ದುಕೊಳ್ಳಬಹುದಾಗಿದೆ. ನಾವು ನಮ್ಮ ಬದುಕಿನಲ್ಲಿ ಕರ್ಮದ ನಿಯಮಗಳನ್ನು ಅರ್ಥಮಾಡಿಕೊಳ್ಳಬೇಕಾಗಿದೆ. ಹಿಂದಿನ ಜೀವನದಲ್ಲಿ ನಾವು ಮಾಡಿದ ಕ್ರಿಯೆಗಳು ಈಗಿನ ಹುಟ್ಟಿನಲ್ಲಿ ರಸ್ತೆ ಅಥವಾ ಹೆದ್ದಾರಿ ಇದ್ದಂತೆ. ಅದು ಮಣ್ಣಿನ ಕಾಲು ದಾರಿಯೋ ಅಥವಾ ಹೆದ್ದಾರಿಯೋ ಎಂಬುದನ್ನು ನಮ್ಮ ಹಿಂದಿನ ಕ್ರಿಯೆಗಳು ನಿರ್ಧರಿಸುತ್ತವೆ. ಇದನ್ನು ಬದಲಿಸಲು ಸಾಧ್ಯವಿಲ್ಲ. ನಮ್ಮ ಭೂತವನ್ನು ಬದಲಿಸಲು ಸಾಧ್ಯವಿಲ್ಲದಿದ್ದರೂ ನಮ್ಮ ಭವಿಷ್ಯವನ್ನು ನಾವು ಓಡಿಸುವ ಕಾರಿನಂತೆ ಬದಲಿಸಲು ಸಾಧ್ಯ. ನಾವು ವೇಗವಾಗಿ ಚಲಿಸಬಹುದು ಅಥವಾ ನಿಧಾನಿಸಬಹುದು. ಎಡಕ್ಕೆ ತಿರುಗಬಹುದು ಅಥವಾ ಬಲಕ್ಕೆ ತಿರುಗಬಹುದು. ನಮಗೆ ಇಷ್ಟಬಂದಂತೆ ನಾವು ಚಾಲನೆ ಮಾಡಬಹುದು. ಆಯ್ಕೆ ಮಾಡಿಕೊಳ್ಳಲು ನಮಗೆ ಬುದ್ಧಿಮತ್ತೆ ಮತ್ತು ಸಂಕಲ್ಪಶಕ್ತಿ ಇದೆ. ನಾವು ಏನೇ ಮಾಡಿದರೂ ವರ್ತಮಾನದ ನಮ್ಮ ಜೀವನದಲ್ಲಿನ ನಮ್ಮ ಕ್ರಿಯೆಗಳು ನಮ್ಮ ಭವಿಷ್ಯದ ಜೀವನದ ದಾರಿಯನ್ನು ನಿರ್ಧರಿಸುತ್ತವೆ. ನಮ್ಮ ಕರ್ಮ ನಮ್ಮ ಜೀವನದ ಸಂದರ್ಭಗಳನ್ನು ನಿರ್ಧರಿಸುತ್ತವೆ. ಕರ್ಮದ ನಿಯಮಗಳ ಪ್ರಭಾವವೇ ಅಂಥದ್ದು.

**ನಮ್ಮ ವರ್ತಮಾನವು ಏನೇ ಆಗಿರಲಿ ಅದು ಜಾದೂ ಅಲ್ಲ.**
**ಅದು ಒಳ್ಳೆಯದಾಗಿರಬಹುದು ಅಥವಾ ದುರಂತಮಯವಾಗಿರಬಹುದು.**
**ನಾವು ಹಿಂದಿನ ಜನ್ಮದಲ್ಲಿ ಮಾಡಿದ ಕ್ರಿಯೆಯ ಮೇಲೆ ಅವಲಂಬಿತವಾಗಿದೆ.**
**ಅದು ಕರ್ಮ ಎಷ್ಟು ಸಮಯದವರೆಗೆ ಇರುತ್ತದೆ ಎಂಬುದನ್ನು ನಿರ್ಧರಿಸುತ್ತದೆ.**

# ಸಾರಾಂಶ:

# ಕರ್ಮದ ನಿಯಮಗಳು ಹೇಗೆ ಕೆಲಸ ಮಾಡುತ್ತವೆ?

ಕರ್ಮದ ನಿಯಮಗಳು ನಮ್ಮ ಎಲ್ಲಾ ಒಳ್ಳೆಯ ಮತ್ತು
ಕೆಟ್ಟ ಕೃತ್ಯಗಳು ದಾಖಲಾಗುವಂತೆ ಮಾಡುತ್ತವೆ.
ಮತ್ತೆ ಅವುಗಳಿಗೆ ತಕ್ಕ ಪ್ರತಿಫಲವನ್ನು ನಾವು ಪಡೆಯುತ್ತೇವೆ.

"ನಾವು ಬಿತ್ತಿದಂತೆ ಬೆಳೆಯುತ್ತೇವೆ"!
ಒಳ್ಳೆಯ ಕೃತ್ಯಗಳು ಉತ್ತಮ ಫಲಗಳಾಗಿ ಹಿಂದಿರುಗುತ್ತವೆ.
ಕೆಟ್ಟ ಕೃತ್ಯಗಳು ಕೆಟ್ಟ ಪ್ರತಿಫಲವನ್ನು ನೀಡುತ್ತವೆ.

ಇಲ್ಲಿ ಅದೃಷ್ಟಕ್ಕೆ ಎಡೆಯೇ ಇಲ್ಲ. ಎಲ್ಲವೂ ಕರ್ಮದ ನಿಯಮದಂತೆ ನಡೆಯುತ್ತವೆ.
ಕರ್ಮವು ಮನಸ್ಸು ಮತ್ತು ಅಹಂಗೆ ಸೇರಿದ್ದಾಗಿದೆ. ಇದಕ್ಕೆ ಸಾವಿಲ್ಲ.
ಒಟ್ಟುಗೂಡಿದ ಕರ್ಮವು ಮನಸ್ಸು ಮತ್ತು ಅಹಂನ ಮೂಲಕ
ಮತ್ತೊಂದು ದೇಹದಲ್ಲಿ ಹೊಸ ಹುಟ್ಟನ್ನು ಪಡೆದುಕೊಳ್ಳುತ್ತದೆ.
ಇದು ಯಾವುದೂ ಪೂರ್ವನಿರ್ಧಾರಿತವಲ್ಲ.

ನಮ್ಮ ಹಿಂದಿನ ಕೃತ್ಯಗಳು ನಮ್ಮ ಇಂದಿನ ಸಂದರ್ಭವನ್ನು ನಿರ್ಧರಿಸುತ್ತವೆ.
ನಮ್ಮ ವರ್ತಮಾನದ ಕ್ರಿಯೆಗಳು ನಮ್ಮ ಭವಿಷ್ಯವನ್ನು ನಿರ್ಧರಿಸುತ್ತವೆ.

# 3

# ಕರ್ಮವೆಂಬುದು ನಿಜವಾಗಿಯೂ ಅಸ್ತಿತ್ವದಲ್ಲಿದೆಯೇ?

ಕರ್ಮ ಎಂಬುದಕ್ಕೆ ನೇರ ಪುರಾವೆಗಳಿಲ್ಲದಿರಬಹುದು. ಆದರೆ ಅದರ ಅಸ್ತಿತ್ವವಿರುವುದಂತೂ ಖಚಿತ. ಎಲ್ಲಾ ಕ್ರಿಯೆಗಳಿಗೂ ಪ್ರತಿಕ್ರಿಯೆ ಇರುತ್ತದೆಂಬ ಅಂಶವೇ ಇಂತಹ ನಿಯಮವೊಂದರ ಅಸ್ತಿತ್ವವನ್ನು ಹೇಳುತ್ತದೆ. ಕಾರ್ಯಕಾರಣದ ನಿಯಮ, ತಿರುಗುತಟ್ಟೆಯ ನಿಯಮ, ಕ್ರಿಯೆ - ಪ್ರತಿಕ್ರಿಯೆಯ ನಿಯಮಗಳು ಮತ್ತೆ-ಮತ್ತೆ ಪುನರಾವರ್ತನೆಯಾಗುತ್ತಲೇ ಇವೆ. ಇಂತಹ ನಿಯಮವು ಇಲ್ಲದಿದ್ದಲ್ಲಿ ಅದು ನಮಗೆ ನಮ್ಮ ಸುತ್ತಮುತ್ತಲಿನ ಜಗತ್ತಿನಲ್ಲಿ ನಮ್ಮ ಅನುಭವಕ್ಕೆ ಬರಬೇಕಾಗಿತ್ತು. ಹಾಗಾದಲ್ಲಿ ತೆಂಗಿನ ಮರದ ಮೇಲೆ ಸೇಬು ಬೆಳೆಯಬೇಕಾಗಿತ್ತು. ಲೋಕನೀತಿಯು ಕಾರ್ಯಕಾರಣದ ಆಧಾರದ ಮೇಲೆ ಎಲ್ಲಾ ಕ್ರಿಯೆಗಳನ್ನೂ ಸಂಯೋಜಿಸುತ್ತದೆ.

ನಮ್ಮ ಜೀವನದಲ್ಲಿ ನಡೆಯುವುದೆಲ್ಲವೂ ಆಕಸ್ಮಿಕವೆಂದು ತಿಳಿಯುವುದು ಮೂರ್ಖತನ. ಇಲ್ಲಿ ಆಗುವುದೆಲ್ಲವೂ ಕ್ರಿಯೆಗಳಿಗೆ ಸರಣಿ ಪ್ರತಿಕ್ರಿಯೆಗಳು ಮಾತ್ರ. ಕರ್ಮದ ನಿಯಮಗಳಿಲ್ಲದಿದ್ದಲ್ಲಿ ಈ ಜಗತ್ತು ಒಂದು ಅಸ್ತವ್ಯಸ್ತವಾದ ಕಾಡಿನಂತಿರುತ್ತಿತ್ತು.

ನಿಜ, ಈ ನಿಯಮವನ್ನು ಅರ್ಥಮಾಡಿಕೊಳ್ಳುವುದು ಕಷ್ಟ. ಹಾಗಂತ ಅದರ ಅಸ್ತಿತ್ವದ ಬಗ್ಗೆ ಚರ್ಚಿಸುವುದು ಅನಗತ್ಯ. ಕರ್ಮದ ನಿಯಮದ ವಿಶೇಷತೆ ಏನೆಂದರೆ ನಮ್ಮ ಕ್ರಿಯೆಗಳು

ಬಹಳ ಹಿಂದಿನವಾಗಿದ್ದು ನಮಗೆ ನೆನಪಾಗದೇ ಹೋಗಬಹುದು. ಅವು ಕೆಲವೊಮ್ಮೆ ನಮ್ಮ ಹಿಂದಿನ ಜನ್ಮದ ಕೃತ್ಯಗಳಾಗಿದ್ದು ನಮ್ಮ ನೆನಪಿನಲ್ಲಿ ಉಳಿಯುವುದಿಲ್ಲ. ಆದರೆ ಕರ್ಮದ ನಿಯಮ ಆ ಬಗ್ಗೆ ತಪ್ಪುಗಳನ್ನು ಮಾಡುವುದಿಲ್ಲ. ಅದೊಂದು ಲೋಕ ನಿಯಮ. ಹೇಗೆ ಗುರುತ್ವಾಕರ್ಷಣೆಯ ನಿಯಮವು ಅಸ್ತಿತ್ವದಲ್ಲಿದೆಯೋ ಅದೇ ರೀತಿಯಲ್ಲಿ ಕರ್ಮದ ನಿಯಮಗಳು ಕೂಡ. ನಾವು ಕೆಲವು ಸೇಬಿನ ಬೀಜಗಳನ್ನು ಬಿತ್ತುತ್ತೇವೆ ಎಂದಿಟ್ಟುಕೊಳ್ಳಿ. ಆ ಮರದಲ್ಲಿ ನಾವು ಸ್ಟ್ರಾಬೆರಿ, ಪೀಚ್ ಅಥವಾ ಚೆರ್ರಿ ಹಣ್ಣುಗಳು ಬೆಳೆಯಬೇಕೆಂದು ಬಯಸಿದರೆ ಅದು ಸಾಧ್ಯವಿಲ್ಲ. ಹಾಗಾಗಿದ್ದಲ್ಲಿ ನಾವು ಕರ್ಮದ ನಿಯಮಗಳು ಇಲ್ಲವೆಂದು ಭಾವಿಸಬಹುದು. ಆದರೆ, ನಾವು ಎತ್ತ ನೋಡಿದರೂ ಅಲ್ಲಿ ಕ್ರಿಯೆ ಮತ್ತು ಪ್ರತಿಕ್ರಿಯೆಗಳು ಇದ್ದೇ ಇರುತ್ತವೆ. ಅದರ ಇರುವಿಕೆಯನ್ನು ನಾವು ಅಲ್ಲಗಳೆಯಲು ಸಾಧ್ಯವಿಲ್ಲ.

ಇವೆಲ್ಲವನ್ನೂ ಅನುಮಾನದಿಂದ ನೋಡುವವರು ಇದನ್ನು ಅಲ್ಲಗಳೆಯಬಹುದು. ಅವರು ಎಲ್ಲದಕ್ಕೂ ಪುರಾವೆಗಳನ್ನು ಕೇಳಬಹುದು. ಆದರೆ ಕೆಲವು ವಿಷಯಗಳಿಗೆ ಪುರಾವೆಗಳನ್ನು ನೀಡಲು ಸಾಧ್ಯವಾದರೆ ಇನ್ನು ಕೆಲವು ವಿಷಯಗಳನ್ನು ನಾವು ಊಹಿಸಬಹುದಾಗಿದೆ. ನಮ್ಮ ಜೀವನದಲ್ಲಿ ಮತ್ತು ಸುತ್ತಲಿನ ಪ್ರಪಂಚದಲ್ಲಿ ಕರ್ಮದ ನಿಯಮಗಳು ಅಸ್ತಿತ್ವದಲ್ಲಿವೆ ಎಂಬುದನ್ನು ನಾವು ಊಹಿಸಬಹುದಾಗಿದೆ.

ಒಬ್ಬ ಪುಟ್ಟ ಹುಡುಗನು ಕರ್ಮದ ಅಸ್ತಿತ್ವದ ಬಗ್ಗೆ ತನ್ನ ತಾಯಿಯನ್ನು ಪ್ರಶ್ನಿಸಿದನು. ತನ್ನ ಕಣ್ಣಿಗೆ ಕಾಣದ್ದನ್ನು ಹೇಗೆ ನಂಬಲಿ? ಎಂದು ಪ್ರಶ್ನಿಸುತ್ತಾನೆ. ತಾಯಿಯು ಕರ್ಮದ ಬಗ್ಗೆ ವಿವರಿಸಲು ಪ್ರಯತ್ನಿಸುತ್ತಾಳೆ. ಆದರೆ, ಸ್ವಲ್ಪ ಸಮಯದಲ್ಲೇ ಅವಳಿಗೆ ಅರಿವಾಗುತ್ತದೆ. ತನ್ನ ಮಗನು ಬುದ್ಧಿಮತ್ತೆ ಮತ್ತು ತರ್ಕವನ್ನು ಬಳಸಿ ಕರ್ಮದ ಅಸ್ತಿತ್ವವನ್ನು ಕಂಡುಕೊಳ್ಳಲು ನಿರಾಕರಿಸುತ್ತಿದ್ದಾನೆಂದು ತಿಳಿಯುತ್ತದೆ. ಅವನು ಅವಳನ್ನು ಪದೇ-ಪದೇ ಪುರಾವೆ

ಕೇಳುತ್ತಾನೆ. ಅದು ಹೇಗೆ, ಯಾವುದೇ ವಿಜ್ಞಾನದ ಗ್ರಂಥದಲ್ಲೂ ಇದರ ಉಲ್ಲೇಖವಿಲ್ಲ ಎಂದು ಪ್ರಶ್ನಿಸುತ್ತಾನೆ. "ನಾನು ಈ ನಿಯಮವನ್ನು ನಂಬುವುದಿಲ್ಲ" ಎನ್ನುತ್ತಾನೆ. ಇದನ್ನೇ ಹಲವಾರು ಬಾರಿ ಹೇಳುತ್ತಾನೆ. ಆಗ ಆಕೆ ಅಡುಗೆ ಮಾಡುವುದರಲ್ಲಿ ನಿರತರಾಗಿರುತ್ತಾಳೆ. ಅವಳ ಕೈಯಲ್ಲಿದ್ದ ಸೌಟು ಬಹಳ ಬಿಸಿಯಾಗಿರುತ್ತದೆ. ಅದನ್ನು ತೆಗೆದು ಅವಳು ಅವನ ಬಾಯಿಗಿಡುತ್ತಾಳೆ. ಅವನು ನೋವಿನಿಂದಾ ಅರಚುತ್ತಾನೆ. "ಅಮ್ಮಾ ತುಂಬಾ ನೋಯುತ್ತಿದೆ ಎಂದು ಅವನು ಅಳುತ್ತಾನೆ. "ಓ ನೋಯುತ್ತದೆಯೇ? ಹಾಗಾದರೆ ನಿನಗೆ ನೋಯುತ್ತಿದೆ ಎನ್ನುವುದಕ್ಕೆ ಪುರಾವೆ ತೋರಿಸು ನೋಡೋಣ" ಎಂದು ಅವಳು ಹೇಳುತ್ತಾಳೆ. "ನೀನು ಏನನ್ನು ಹೇಳುತ್ತಿದ್ದೀಯಾ? ನೋವು ಅನುಭವಿಸುತ್ತಿರುವವನು ನಾನು ನನಗದು ತಿಳಿದಿದೆ" ಎಂದು ಅವನು ಉತ್ತರಿಸುತ್ತಾನೆ. "ಶೀಘ್ರವೇ ನಿನಗೆ ಕರ್ಮ ನಿಯಮಗಳ ಅಸ್ತಿತ್ವದ ಬಗ್ಗೆ ಅರಿವಾಗಲಿದೆ" ಎಂದು ತಾಯಿ ಹೇಳುತ್ತಾಳೆ. ಅಂದಿನಿಂದ ಅವನು ಕರ್ಮದ ಬಗ್ಗೆ ಪುರಾವೆಗಳನ್ನು ಕೇಳಿದಾಗಲೆಲ್ಲಾ ಅವಳು ಉತ್ತರವಾಗಿ ಬಿಸಿ ಸೌಟನ್ನು ತೆಗೆದರೆ ಸಾಕಾಗಿತ್ತು.

ನಾವು ಕೆಲವು ವಸ್ತುಗಳ ಅಸ್ತಿತ್ವವನ್ನು ಅಲ್ಲಗಳೆಯಲಾಗುವುದಿಲ್ಲ. ನನ್ನ ಮುಖದಲ್ಲಿ ಮೂಗು ಇದೆ ಎಂಬುದನ್ನು ನಾನು ಸಾಬೀತು ಪಡಿಸಬೇಕಿಲ್ಲ. ಅದು ಅಲ್ಲಿರುವುದು ಎಲ್ಲರಿಗೂ ತಿಳಿದಿದೆ. ಕರ್ಮದ ನಿಯಮಗಳೂ ಹಾಗೆಯೇ. ಅದರ ಇರುವಿಕೆಯನ್ನು ನಾವು ಬಲ್ಲೆವು, ಆದರೆ ಅದು ಹೇಗೆ ಕಾರ್ಯ ನಿರ್ವಹಿಸುತ್ತದೆ ಎಂಬುದು ನಮಗೆ ತಿಳಿದಿರುವುದಿಲ್ಲ.

ಕೆಲವು ಜನರು ಈ ನಿಯಮದ ಪ್ರಭಾವವನ್ನು ಕಡೆಗಣಿಸುತ್ತಾರೆ. ಕರ್ಮದ ನಿಯಮಗಳು ಕೇವಲ ನಮ್ಮ ಜೀವಿತಾವಧಿಯಲ್ಲಷ್ಟೇ ಅಲ್ಲದೆ ನಮ್ಮ ಮರಣದ ನಂತರವೂ ಕೆಲಸ ಮಾಡುತ್ತವೆ. ಅದು ಹೇಗೆ ಸಾಧ್ಯ ಎನ್ನುತ್ತೀರಾ? ಕರ್ಮ ಎಂದರೆ ಕ್ರಿಯೆ. ಕ್ರಿಯೆ ವಿಚಾರದಿಂದ

ಪ್ರಚೋದಿತವಾಗುತ್ತದೆ. ಹಾಗಾಗಿ ಕರ್ಮಕ್ಕೆ ಕೇವಲ ದೇಹ ಮಾತ್ರವಲ್ಲ ಮನಸ್ಸು ಕೂಡ ಕಾರಣವಾಗಿರುತ್ತದೆ. ಕರ್ಮವು ನಿರ್ಧರಿಸಿದ ರೀತಿಯಲ್ಲಿ ನಮ್ಮ ದೇಹವು ಸುಖ-ದುಃಖಗಳನ್ನು ಅನುಭವಿಸುತ್ತದೆ. ನಮ್ಮ ಹಿಂದಿನ ಜನ್ಮದ ಮನಸ್ಸಿನ ಕೃತ್ಯಗಳಿಂದಾಗಿ ದೇಹವು ಕೆಲವು ನೋವುಗಳನ್ನು ಅನುಭವಿಸಬೇಕಾಗಬಹುದು. ಹಾಗೆಯೇ, ನಮ್ಮ ಇಂದಿನ ದೇಹದ ಕೆಲವು ಕ್ರಿಯೆಗಳಿಂದಾಗಿ ಹಲವಾರು ನೋವುಗಳನ್ನು ಅನುಭವಿಸಬೇಕಾಗಬಹುದು. ಇದು ಇಲ್ಲಿಗೇ ಮುಗಿಯುವುದಿಲ್ಲ. ಇವುಗಳನ್ನು ಮನಸ್ಸಿನ ಮೂಲಕ ಮುಂದಿನ ಹೊಸ ಹುಟ್ಟಿಗೆ ತೆಗೆದುಕೊಂಡು ಹೋಗಬಹುದು.

*ರಾಮ ಒಬ್ಬ ನೀತಿವಂತ ಮತ್ತು ಪ್ರಾಮಾಣಿಕನಾದ ಬಡಗಿ. ಅವನು ಯಾವುದೇ ಕೆಡುಕನ್ನಾಗಲೀ ಅಥವಾ ಯಾರಿಗೂ ನೋವನ್ನು ಮಾಡುವುದಾಗಲಿ ಮಾಡಲಿಲ್ಲ. ಒಂದು ದಿನ ಯಂತ್ರದಲ್ಲಿ ಸೌದೆಯನ್ನು ಕತ್ತರಿಸುತ್ತಿರುವಾಗ ಅವನ ಕೈಗಳು ಯಂತ್ರದಲ್ಲಿ ಸಿಕ್ಕಿ ಹಾಕಿಕೊಂಡು ಕತ್ತರಿಸಿ ಹೋಗುತ್ತವೆ. ತನ್ನ ಕೈಗಳನ್ನೂ, ಜೀವನೋಪಾಯವನ್ನೂ ಕಳೆದುಕೊಂಡ ರಾಮನು ತನ್ನ ಗುರುವಿನ ಬಳಿ ಹೋಗಿ ಕೇಳಿದನು "ಗುರುಗಳೇ ನಾನು ಒಂದೂ ತಪ್ಪನ್ನಾಗಲಿ ಕೆಟ್ಟದನ್ನಾಗಲಿ ಮಾಡಿದವನಲ್ಲ. ಆದರೂ ನಾನು ಕೈಗಳನ್ನು ಕಳೆದುಕೊಂಡಿದ್ದೇನೆ. ಇದು ಏಕೆ ಹೀಗೆ? ನನಗೊಂದೂ ಅರ್ಥವಾಗುತ್ತಿಲ್ಲ" ಎಂದು ಕೇಳುತ್ತಾನೆ. ಅದಕ್ಕೆ ಗುರುವು ಹೀಗೆ ಉತ್ತರಿಸುತ್ತಾನೆ ಇದು ನಿನ್ನ ಈ ಜೀವನದ ಪಾಪದ ಕರ್ಮವಲ್ಲ. ಹಿಂದಿನ ಜನ್ಮದಲ್ಲಿ ನೀನು ಶ್ಯಾಮನಾಗಿದ್ದೆ. ಆಗ ನಿನ್ನ ಉದ್ಯೋಗ ಕಟುಕನದ್ದಾಗಿತ್ತು. ನೀನು ಪ್ರತಿ ದಿನವೂ ನೂರಾರು ಪ್ರಾಣಿಗಳನ್ನು ಕೊಲ್ಲುತ್ತಿದ್ದೆ. ಶ್ಯಾಮನಾಗಿ ನೀನು ನಿನ್ನ ಕರ್ಮವನ್ನು ಪೂರೈಸದೆ ತೀರಿಕೊಂಡೆ. ಅಂದರೆ ನಿನ್ನ ಕೃತ್ಯಗಳಿಗೆ ತಕ್ಕ ಪ್ರತಿಫಲವನ್ನು ನೀನು ಆಗ ಪಡೆಯಲಿಲ್ಲ. ಈಗ ಆ ಶ್ಯಾಮನೇ ರಾಮನಾಗಿ ಹೊಸ ಹುಟ್ಟನ್ನು ಪಡೆದಿದ್ದಾನೆ. ಆದ್ದರಿಂದ ಈಗ ನೀನು ಶ್ಯಾಮನ ಕರ್ಮವನ್ನು ಅನುಭವಿಸುತ್ತಿದ್ದೀಯ."*

*ರಾಮನಿಗೆ ಗುರು ಹೇಳಿದ್ದು ಅರ್ಥವಾಗಲಿಲ್ಲ. ಗುರುವು ಮತ್ತೆ ವಿವರಿಸಿದರು "ಇಂದು ನೀನು ರಾಮನಾಗಿ ಒಳ್ಳೆಯ ಕೃತ್ಯಗಳನ್ನು ಮಾಡುತ್ತಿದ್ದೀಯ. ಆದರೆ, ಅದಕ್ಕೆ ತಕ್ಕ ಪ್ರತಿಫಲವನ್ನು ಪಡೆಯುತ್ತಿಲ್ಲ. ಆದರೆ ಅದಕ್ಕೆ ನೀನು ಚಿಂತಿಸಬೇಕಾಗಿಲ್ಲ. ನಿನ್ನ ಮುಂದಿನ ಜನ್ಮದಲ್ಲಿ ನೀನು ಒಬ್ಬ ರಾಜನಾಗಿ ಹುಟ್ಟುವೆ. ನಿನ್ನ ಈಗಿನ ದೇಹವು ಉತ್ತಮ ಪ್ರತಿಫಲಗಳನ್ನು ಅನುಭವಿಸದಿರಬಹುದು, ಆದರೆ ನಿನ್ನ ಮನಸ್ಸು ಮತ್ತು ಅಹಂ ಮತ್ತೊಂದು ಹೊಸ ದೇಹದಲ್ಲಿ ಮರುಹುಟ್ಟು ಪಡೆಯುತ್ತವೆ. ಆಗ ನೀನು ನಿನ್ನ ಒಳ್ಳೆಯ ಕೃತ್ಯದ ಪ್ರತಿಫಲಗಳನ್ನು ಅನುಭವಿಸುವೆ."*

ಕೆಲವೊಮ್ಮೆ ನಮ್ಮ ದೇಹವು ಈಗಿನ ಜೀವನದ ಕ್ರಿಯೆಗಳಿಗೆ ಪ್ರತಿಫಲವನ್ನು ಅನುಭವಿಸುವುದಿಲ್ಲ. ಹಿಂದೆ ಮತ್ತೊಂದು ದೇಹವನ್ನಾವರಿಸಿದ್ದ ಮನಸ್ಸಿನ ದೆಸೆಯಿಂದ ಈ ದೇಹವು ಕರ್ಮವನ್ನು ಅನುಭವಿಸಬೇಕಾಗಬಹುದು. ಆದ್ದರಿಂದ ಈ ಕರ್ಮವು ದೇಹದ್ದಲ್ಲ ಮನಸ್ಸಿನದು. ಈ ಮನಸ್ಸು ತನ್ನ ಹಿಂದಿನ ಜನ್ಮದ ದೇಹದಲ್ಲಿ ಕೆಲವು ಕ್ರಿಯೆಗಳನ್ನು ನಡೆಸಿರಬಹುದು. ಅದು ತನ್ನ ಭೌತಿಕ ದೇಹದ ವ್ಯಾಪಾರವನ್ನು ಮುಗಿಸಿದಾಗ ಕರ್ಮವನ್ನು ಮುಗಿಸಿರುವುದಿಲ್ಲ. ಈಗ ಮನಸ್ಸು ಹೊಸ ದೇಹದಲ್ಲಿ ಮರುಹುಟ್ಟು ಪಡೆದುಕೊಂಡಿದೆ. ಮನಸ್ಸು ಹಿಂದಿನ ಜನ್ಮದಲ್ಲಿ ಮಾಡಿದ ಕ್ರಿಯೆಗಳ ಕರ್ಮವನ್ನು ಆ ದೇಹವು ಅನುಭವಿಸುತ್ತದೆ. ಹಾಗೆಯೇ, ಒಂದು ದೇಹವು ಕರ್ಮವನ್ನೆಸಗಿ ಅದಕ್ಕೆ ಪ್ರತಿಫಲವನ್ನು ಪಡೆಯುವ ಮುಂಚೆಯೇ ದೇಹವನ್ನು ತ್ಯಜಿಸಿದರೆ ಆ ದೇಹ ಇರುವ ಮನಸ್ಸು ಮುಂದಿನ ಜನ್ಮದಲ್ಲಿ ಮತ್ತೊಂದು ದೇಹದಲ್ಲಿ ಹೊಸಹುಟ್ಟನ್ನು ಪಡೆದುಕೊಂಡು ಕರ್ಮದ ಫಲಗಳನ್ನು ಅನುಭವಿಸಬೇಕಾಗುತ್ತದೆ.

ಸಾವು ಸಂಭವಿಸಿದಾಗ ಏನಾಗುತ್ತದೆ? ಒಬ್ಬ ವ್ಯಕ್ತಿಯು ಸತ್ತಾಗ ಅವನ ದೇಹ ಮಾತ್ರ

ಸಾಯುತ್ತದೆ ಎಂಬುದನ್ನು ನಾವು ಬಲ್ಲೆವು. ನಾವು ಆ ವ್ಯಕ್ತಿ ಹೊರಟು ಹೋದನೆಂದು ಹೇಳುತ್ತೇವೆ. ಹಾಗೆಂದರೆ ಏನು ಅರ್ಥ? ನಮಗೆ ಅವನ ಮೃತದೇಹ ಕಾಣುತ್ತಿದೆ. ಅದು ಜೀವಂತ ವ್ಯಕ್ತಿಯ ದೇಹವಲ್ಲವೆಂಬುದನ್ನು ಬಲ್ಲೆವು. ಅದು ಅವನ ಮೃತದೇಹವಷ್ಟೆ. ಹಾಗಿದ್ದರೆ ಆ ವ್ಯಕ್ತಿ ಹೋದದ್ದಾದರೂ ಎಲ್ಲಿಗೆ? ನಾವು ಒಂದು ಕೋಣೆಯಲ್ಲಿ ಕುಳಿತಿದ್ದೇವೆ. ಅಲ್ಲಿಂದ ಒಬ್ಬ ವ್ಯಕ್ತಿ ಹೊರಗೆ ಹೋಗುತ್ತಾನೆ. ಆದರೆ ಅವನು ಎಲ್ಲಿಗೆ ಹೋದ ಎಂಬುದು ನಮಗೆ ತಿಳಿಯುವುದಿಲ್ಲ. ಸ್ವಲ್ಪ ಸಮಯದ ನಂತರ ಕೋಣೆಯೊಳಗೆ ವ್ಯಕ್ತಿಯೊಬ್ಬನು ಬರುತ್ತಾನೆ. ಆದರೆ ಅವನು ಎಲ್ಲಿಂದ ಬಂದನೆಂದು ನಮಗೆ ತಿಳಿಯುವುದಿಲ್ಲ. ಆದರೆ, ಹೊರ ನಡೆಯುವ ಮತ್ತು ಒಳಬರುವ ವ್ಯಕ್ತಿಗಳೊಂದಿಗೆ ಯಾವುದೋ ಒಂದು ರೀತಿಯ ಸಂಬಂಧವಿರುವುದು ಖಚಿತ. ಸಾವು ಅಂತಿಮವಲ್ಲ. ನಮ್ಮ ಪ್ರಯಾಣದಲ್ಲಿ ಅದೊಂದು ತಿರುವು ಮಾತ್ರ. ಕರ್ಮದ ನಿಯಮಾನುಸಾರ ನಾವು ಮತ್ತೆ-ಮತ್ತೆ ಹುಟ್ಟುತ್ತಲೇ ಇರುತ್ತೇವೆ.

ಇತ್ತೀಚಿನ ದಿನಗಳಲ್ಲಿ ಮರುಹುಟ್ಟಿನ ತಾರ್ಕಿಕತೆಯ ಬಗ್ಗೆ ಅನೇಕ ಅಧ್ಯಯನಗಳನ್ನು ಕೈಗೊಳ್ಳಲಾಗಿದೆ. ನಾಲ್ಕು ವರ್ಷದ ಚಿಕ್ಕ ಮಗು ಪಿಯಾನೋವನ್ನು ಅದ್ಭುತವಾಗಿ ನುಡಿಸುತ್ತದೆ. ಈ ಅಲ್ಪಾವಧಿಯಲ್ಲಿ ಪಿಯಾನೋ ನುಡಿಸುವ ಕಲೆಯನ್ನು ಸಂಪೂರ್ಣವಾಗಿ ಆ ಮಗುವಿಗೆ ಕಲಿಯಲು ಸಾಧ್ಯವಿಲ್ಲ. ಕೆಲವೇ ವರ್ಷಗಳಷ್ಟು ದೊಡ್ಡವಳಾದ ಹೆಣ್ಣು ಮಗಳೊಬ್ಬಳು ಇಡೀ ಶಾಸ್ತ್ರಗ್ರಂಥವನ್ನೇ ಬಾಯಿಪಾಠ ಒಪ್ಪಿಸುತ್ತಾಳೆ. ಒಂದು ಚಿಕ್ಕ ಮಗುವಿಗೆ ಇಷ್ಟೊಂದು ಮಾಹಿತಿಯನ್ನು ಗ್ರಹಿಸಲು ಸಾಧ್ಯವಾದದ್ದಾದರೂ ಹೇಗೆ? ಒಂದು ಸಣ್ಣ ನಾಯಿಮರಿಯು ಯಾವುದೇ ತರಬೇತಿಯಿಲ್ಲದೆ ನೀರಿನಲ್ಲಿ ಈಜುತ್ತದೆ. ಇದು ಹೇಗೆ ಸಾಧ್ಯ ಎಂದು ಯೋಚಿಸಿದಾಗ ನಮಗೆ ಹೊಳೆಯುವ ಉತ್ತರ ಇದು ಅವರಿಗೆ ಸ್ವಾಭಾವಿಕವಾದದ್ದು ಎಂದು ತಿಳಿಯುತ್ತೇವೆ. ಹಾಗಿದ್ದರೆ ಈ ಸ್ವಭಾವವೆನ್ನುವುದು ಏನು? ಅದು ಮತ್ತೇನಿಲ್ಲ ಮರುಹುಟ್ಟು ಪಡೆದ ಮನಸ್ಸಿನ ನೆನಪುಗಳು ಅಷ್ಟೆ.

ಜಗತ್ತಿನಲ್ಲಿ ಅನೇಕ ವೃತ್ತಾಂತಗಳು ಹಲವರು ತಮ್ಮ ಹಿಂದಿನ ಜನ್ಮದೊಂದಿಗೆ ಯಾವುದೋ ಬಗೆಯ ಸಂಬಂಧವನ್ನು ಹೊಂದಿರುವುದರ ಬಗ್ಗೆ ಪುರಾವೆಯನ್ನು ನೀಡುತ್ತವೆ. ಮಕ್ಕಳು ತಾವೆಂದೂ ನೋಡಿರದ ಜಾಗಗಳಿಗೆ ಹೋಗಿ ತಮ್ಮ ಹಿಂದಿನ ಜನ್ಮದ ಸಂಬಂಧಿಗಳನ್ನು ಗುರುತಿಸಿದ, ಅವರ ಹೆಸರುಗಳನ್ನು ಸರಿಯಾಗಿ ಹೇಳಿದ ಮತ್ತು ತಾವು ಹಿಂದಿನ ಜನ್ಮದಲ್ಲಿ ವಾಸವಿದ್ದ ಮನೆಯನ್ನೂ ಸಹ ಗುರುತಿಸಿದ ಹಲವಾರು ನಿದರ್ಶನಗಳಿವೆ. ಇದು ಹೇಗೆ ಸಾಧ್ಯವಾಯಿತು ಎಂಬುದರ ಬಗ್ಗೆ ಯಾರಲ್ಲೂ ಸ್ಪಷ್ಟ ಉತ್ತರವಿಲ್ಲ. ಇದಕ್ಕಿರುವ ಒಂದೇ ಉತ್ತರವೆಂದರೆ ಮನಸ್ಸು ಮತ್ತು ನೆನಪು ಅಷ್ಟೆ.

*ಲೂಸಿಯಾನಾದ 8 ವರ್ಷದ ಬಾಲಕ ಜೇಮ್ಸ್ ಲೆನಿಂಗರ್ ಕೇವಲ ಎರಡು ವರ್ಷದವನಿದ್ದಾಗಲೇ ವಿಮಾನಯಾನದ ಬಗ್ಗೆ ಮಾತನಾಡಲು ಪ್ರಾರಂಭಿಸಿದ್ದ. ಅವನ ತಂದೆ ತಾಯಿಗಳಿಗೆ ವಿಮಾನಗಳ ಬಗ್ಗೆ ಏನೇನೂ ತಿಳಿದಿರಲಿಲ್ಲ. ಅವನಿಗಿರುವ ವಿಮಾನಗಳ ಬಗೆಗಿನ ಆಳವಾದ ಜ್ಞಾನವನ್ನು ನೋಡಿ ಅವರು ಆಶ್ಚರ್ಯಚಕಿತರಾದರು. ಜೇಮ್ಸ್ ನಿಗೆ ಕೆಂಪು ಸೂರ್ಯನಿದ್ದ ಜಪಾನಿ ವಿಮಾನವೊಂದು ತನ್ನ ವಿಮಾನವನ್ನು ಹೊಡೆದು ಹಾಕುತ್ತಿರುವ ಬಗ್ಗೆ ಕೆಟ್ಟ ಕನಸುಗಳು ಬೀಳುತ್ತಿದ್ದವು. ಅವನಿಗೆ ಕನಸಿನಲ್ಲಿ ತಾನು 50 ವರ್ಷಗಳ ಹಿಂದೆ ಎರಡನೇ ಮಹಾಯುದ್ಧದಲ್ಲಿ ಸಾವನ್ನಪ್ಪಿದ ಜೇಮ್ಸ್ ಮೆಕ್ರೀಡಿ ಹೂಸ್ಟನ್ ಜೂನಿಯರ್ ಎಂಬಂತೆ ಭಾಸವಾಗುತ್ತಿತ್ತು. ಕನಸನ್ನು ಕಂಡ ಜೇಮ್ಸ್ ಮೇಲಿನ ಚಾವಣಿಯನ್ನು ನೋಡುತ್ತಾ ಗಟ್ಟಿಯಾಗಿ "ವಿಮಾನಕ್ಕೆ ಬೆಂಕಿ ಹೊತ್ತಿಕೊಂಡಿದೆ. ಚಿಕ್ಕ ಮಗುವೇ ಹೊರಗೆ ನಡೆ" ಎಂದು ಅರಚುತ್ತಿದ್ದ. ನಂತರ ತಾನು ನಟೋಮಾ ಎಂಬ ದೋಣಿಯಿಂದ ಕ್ರಾಸ್ಏರ್ ಎಂಬ ವಿಮಾನವನ್ನು ಹಾರಿಸಿದೆನೆಂದು ತನ್ನ ತಂದೆತಾಯಂದಿರ ಬಳಿ ಹೇಳಿಕೊಂಡನು. ಅವನ ತಂದೆಯು ಸಾಕಷ್ಟು ವಿಷಯಗಳನ್ನು ಕಲೆಹಾಕಿ ನಟೋಮಾ ಎಂಬ ದೋಣಿಯಿರುವುದು ಮತ್ತು ಜೇಮ್ಸ್ ಮೆಕೀಡಿ ಹೂಸ್ಟನ್*

*ಜೂನಿಯರ್ ಎಂಬಾತ ಪೈಲಟ್ ಹಿಂದೆ ಇದ್ದುದು ಖಾತ್ರಿಯಾಯಿತು. ಅವನ ವಿಮಾನದತ್ತ ಜಪಾನೀ ವಿಮಾನ ಗುಂಡು ಹೊಡೆದದ್ದು ಕೂಡ ಖಾತ್ರಿಯಾಯಿತು.*

*ಶಾಂತಿ ದೇವಿಯ ಪುನರ್ಜನ್ಮದ ವೃತ್ತಾಂತವು ಬಹಳ ಪ್ರಸಿದ್ಧವಾದುದು. ಅವಳಿಗೆ ಮಾತನಾಡಲು ತಿಳಿದಾಗಿನಿಂದ ಅವಳಿಗೆ ತನ್ನ ಹಿಂದಿನ ಜನ್ಮದಲ್ಲಿನ ತನ್ನ ಗಂಡನ ಜೊತೆಗಿನ ಸಂಭಾಷಣೆಗಳೆಲ್ಲವೂ ನೆನಪಾಗುತ್ತಿದ್ದವು. ಅವಳ ಹೆಸರು ಲುಡ್ಗಿ ದೇವಿಯೆಂದೂ ತಾನು ಮಹುರಾದವಳೆಂದೂ ಅವಳು ತಂದೆತಾಯಿಗಳಿಗೆ ಪದೇ  ಪದೇ ಹೇಳುತ್ತಿದ್ದಳು. ಅವಳ ಹಿಂದಿನ ಜನ್ಮದ ಗಂಡ ಕೇದಾರನಾಥನು ತನ್ನ ಎರಡನೆಯ ಹೆಂಡತಿ ಮತ್ತು 10 ವರ್ಷದ ಮಗನೊಂದಿಗೆ ಬಂದಾಗ ಅವಳು ತಕ್ಷಣವೇ ಅವನನ್ನು ಗುರುತು ಹಿಡಿದಳು. ಅವಳು ಹೇಳಿದ್ದೆಲ್ಲವೂ ನಿಜವೆಂದು ಅವನು ಹೇಳಿದ. ಅವಳಿಗೆ ಮಥುರಾದಲ್ಲಿನ ತನ್ನ ಮನೆಯ ಬಣ್ಣ ತಿಳಿದಿತ್ತು, ಅಷ್ಟೇ ಅಲ್ಲ ಅವಳ ಮನೆಗೆ ಹೋಗುವ ರಸ್ತೆಗಳ ಹೆಸರುಗಳು ಕೂಡ ಅವಳಿಗೆ ತಿಳಿದಿದ್ದವು. ಅವಳು ತನ್ನ ಮನೆಯ ಅಂಗಳವನ್ನು ಪ್ರವೇಶಿಸಿದಾಗ ಅಲ್ಲಿ ಗೋಡೆಯಿಲ್ಲದ ಬಾವಿಯ ಮೇಲಿನ ಕಲ್ಲನ್ನು ಅವಳ ಹಿಂದಿನ ಜನ್ಮದ ಗಂಡನು ತೆಗೆದಾಗ ಅಲ್ಲಿ ಬಾವಿಯಿಲ್ಲದಿರುವುದನ್ನು ಕಂಡು ಗಾಬರಿಯಾದಳು. ತನ್ನ ಹಿಂದಿನ ಜನ್ಮದ ಸೋದರ, ತಂದೆ ತಾಯಿಗಳು ಅಷ್ಟೇ ಏಕೆ ತನ್ನ ಗಂಡನ ಅಣ್ಣನನ್ನು ಕೂಡ ಗುರುತಿಸಿದಳು.*

ಇಂತಹ ಘಟನೆಗಳಿಂದ ಇವು ಹೊಸ ದೇಹದಲ್ಲಿರುವ ಮರುಹುಟ್ಟು ಪಡೆದ ಮನಸ್ಸುಗಳೆಂದು ಮನದಟ್ಟಾಗದೇ? ಇಲ್ಲದಿದ್ದರೆ ಅಷ್ಟು ಕರಾರುವಾಕ್ಕಾಗಿ ತನ್ನ ಹಿಂದಿನ ಜನ್ಮದ ಘಟನೆಗಳನ್ನು ಅವರು ಹೇಗೆ ನೆನಪಿಸಿಕೊಳ್ಳಬಲ್ಲರು?

ಮರುಹುಟ್ಟು ಮತ್ತು ಕರ್ಮಗಳು ಬಹಳ ಹತ್ತಿರದ ನಂಟನ್ನು ಹೊಂದಿವೆ. ನಾವು ನಮ್ಮ

ಕರ್ಮದ ಆಧಾರದ ಮೇಲೆ ಮರುಹುಟ್ಟನ್ನು ಪಡೆಯುತ್ತೇವೆ. ಮರುಹುಟ್ಟು ಮತ್ತು ಕರ್ಮವು ಒಂದರೊಳಗೊಂದು ಹಾಸುಹೊಕ್ಕಾಗಿವೆ. ಸೃಷ್ಟಿಕರ್ತನು ಕರ್ಮದ ನಿಯಮಗಳನ್ನು ಮಾನವ ಬದುಕಿನ ಅನುಭವದ ಒಂದು ಶಕ್ತಿಯಾಗಿ ರೂಪಿಸಿದ್ದಾನೆ. ಮರುಹುಟ್ಟಿನ ವಿಚಾರವು ಕರ್ಮಕ್ಕೆ ತಳಕು ಹಾಕಿಕೊಂಡಿದೆ. ನೀವು ಬಿತ್ತಿದಂತೆ ಬೆಳೆಯುತ್ತೀರಿ. ನೀವು ಮರುಹುಟ್ಟು ಪಡೆಯದಿದ್ದರೆ ಬಿತ್ತಿದ್ದ ಬೆಳೆಯನ್ನು ಪಡೆಯುವುದಾದರೂ ಹೇಗೆ? ನಿಮ್ಮ ಇಡೀ ಕರ್ಮವನ್ನು ಒಂದೇ ಜೀವಿತದ ಸಮಯದಲ್ಲಿ ಬಾಚಿಕೊಳ್ಳಲು ಸಾಧ್ಯವಿಲ್ಲ. ಆದ್ದರಿಂದ ಸಾವು ಅಂತಿಮವಲ್ಲ. ನಾವು ಒಂದು ದೇಹವನ್ನು ತ್ಯಜಿಸಿ ಮತ್ತೊಂದು ದೇಹವನ್ನು ಹೊಕ್ಕುವ ದಾರಿಯಲ್ಲಿನ ಒಂದು ತಿರುವು ಅದು, ಅಷ್ಟೇ. ಅದು ಜೀವನವೆಂಬ ನಾಟಕದ ಅಂತ್ಯವಲ್ಲ. ದೃಶ್ಯ ಬದಲಾಗುತ್ತದೆ ಅಷ್ಟೇ.

ಕರ್ಮದ ನಿಯಮಗಳಿಲ್ಲದ ಜಗತ್ತು ಹೇಗೆ ಕಾರ್ಯನಿರ್ವಹಿಸುತ್ತದೆ? ಅದು ಗೊಂದಲದ ಗೂಡಾಗಿರುತ್ತದೆ. ಗುರುತ್ವಾಕರ್ಷಣೆಯ ತತ್ವವು ಹೇಗೆ ಎಲ್ಲಾ ವಸ್ತುಗಳೂ ನೆಲದ ಮೇಲೆ ನೆಲಸುವಂತೆ ಮಾಡುತ್ತವೆಯೋ ಅದೇ ರೀತಿ ಕರ್ಮದ ನಿಯಮಗಳು ಹುಟ್ಟಿನಿಂದ ಸಾವಿನವರೆಗೆ ಎಲ್ಲವೂ ವ್ಯವಸ್ಥಿತವಾಗಿರುವಂತೆ ನೋಡಿಕೊಳ್ಳುತ್ತವೆ.

ನಿಜ, ನಾವೆಲ್ಲರೂ ಒಂದು ದಿನ ಸಾಯಲೇಬೇಕು. ನಾವು ಕರ್ಮದ ನಿಯಮಗಳಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ನಾವು ಎಲ್ಲೇ ಹುಟ್ಟಲಿ ಯಾವಾಗಲಾದರೂ ಮರುಹುಟ್ಟನ್ನು ಪಡೆಯಲಿ, ಹಳೇ ಕರ್ಮಗಳನ್ನು ಕೂಡ ಕೊಂಡೊಯ್ಯುತ್ತೇವೆ. ನಮ್ಮ ಬದುಕು ಅದೃಷ್ಟ ಅಥವಾ ವಿದಿಯಿಂದ ರೂಪಿತವಾಗಿಲ್ಲ. ಬದಲಿಗೆ ಅದು ನಮ್ಮ ಕರ್ಮದಿಂದ ರೂಪಿತವಾಗಿದೆ. ಎಲ್ಲವನ್ನೂ ಬಹಳ ಬುದ್ಧಿವಂತಿಕೆಯಿಂದ ಬಹಳ ನಿಯಮಿತವಾಗಿ ಸೃಷ್ಟಿಸಿರುವ ಸೃಷ್ಟಿಕರ್ತನು ಜೀವನದಲ್ಲಿ ಆಕಸ್ಮಿಕಗಳಿಗೆ ಎಡೆಮಾಡಿಕೊಡುವನೆ? ಹಾಗೆ

ಯೋಚಿಸುವುದು ಕೂಡ ಮೂರ್ಖತನವಾಗುತ್ತದೆ. ಈ ಜಗತ್ತು ಹಲವಾರು ನಿಯಮಗಳ ಮೂಲಕ ವ್ಯವಸ್ಥಿತವಾಗಿ ಕಾರ್ಯನಿರ್ವಹಿಸುತ್ತದೆ. ಸೃಷ್ಟಿಕರ್ತನು ನೀಡುವ ಈ ಭೂಮಿಯ ಮೇಲೆ ವಾಸಿಸುತ್ತಿರುವ 8 ಶತಕೋಟಿ ಜನರಿಗೆ ದೇವತಗಳ ಮೂಲಕ ಆದೇಶವನ್ನು ನೀಡುತ್ತಿರುವ ಸರ್ವಾಧಿಕಾರಿಯಲ್ಲ. ಇವೆಲ್ಲವೂ ಸ್ವಯಂಚಾಲಿತವಾಗಿ ನಡೆಯುತ್ತಿವೆ ಎನ್ನುವುದು ನಮಗೆ ತಿಳಿದಿದೆ. ಕ್ರಿಯೆ-ಪ್ರತಿಕ್ರಿಯೆಗಳ ನಿಯಮಗಳನ್ನು ಬಿಟ್ಟರೆ ಅಲ್ಲಿ ಬೇರೇನೂ ಇರುವುದು ಸಾಧ್ಯವಿಲ್ಲ.

ಕರ್ಮವು ನಮ್ಮ ಮುಂದಿನ ಜೀವನದಲ್ಲಿಯೂ ನಮ್ಮನ್ನು ಹಿಂಬಾಲಿಸುತ್ತದೆ ಎಂಬ ಅಂಶವನ್ನು ಅನುಮಾನಿಸುವವರು ಕೆಲವು ಮಕ್ಕಳು ಹುಟ್ಟುತ್ತಲೇ ಏಕೆ ನೋವು ದುಃಖಗಳನ್ನು ಅನುಭವಿಸುತ್ತಾರೆ ಎಂಬುದನ್ನು ಪರಿಗಣಿಸಬೇಕು. ಅದು ಸೃಷ್ಟಿಕರ್ತನ ಕ್ರೌರ್ಯದಿಂದಲೆ ಅಥವಾ ಆ ಮಗುವಿನ ಹಿಂದಿನ ಜನ್ಮದ ಕರ್ಮದ ಫಲವೆ? ಒಬ್ಬ ಯುವರಾಜನಾಗಿ ಹುಟ್ಟಿದರೆ ಮತ್ತೊಬ್ಬ ಬಿಕಾರಿಯಾಗಿ ಹುಟ್ಟುತ್ತಾನೆ. ನಾವು ಈ ಅಸಮಾನತೆಯನ್ನು ಯಾವಾಗಲೂ ಪ್ರಶ್ನಿಸುತ್ತೇವೆ. ಇದನ್ನು ಪ್ರಶ್ನಿಸುವ ಅಗತ್ಯವಾದರೂ ಏನು? ಜನರು ತಮ್ಮ ಪೂರ್ವಜನ್ಮದ ಕರ್ಮದ ಫಲವಾಗಿ ಹುಟ್ಟನ್ನು ಪಡೆಯುತ್ತಾರೆ ಎಂಬ ಅಂಶವನ್ನು ನಾವು ಏಕೆ ಅರ್ಥಮಾಡಿಕೊಳ್ಳುವುದಿಲ್ಲ.

ನಮ್ಮ ಎಲ್ಲಾ ಒಳಿತು ಕೆಡಕುಗಳನ್ನು ನಮ್ಮ ದೇಹವು ಅನುಭವಿಸಿದರೆ ನಮ್ಮ ಕರ್ಮವನ್ನು ಮುಂದುವರೆಸಿಕೊಂಡು ಹೋಗುವುದು ನಮ್ಮ ಮನಸ್ಸು. ನಾವು ದೇಹ, ಮನಸ್ಸು ಮತ್ತು ಆತ್ಮಗಳ ಸಂಕೀರ್ಣ ಮೊತ್ತವಾಗಿದ್ದೇವೆ. ದೇಹವು ನಮ್ಮ ಭೌತಿಕ ಭಾಗವಾಗಿದ್ದು ಪಂಚೇಂದ್ರಿಯಗಳನ್ನು ಹೊಂದಿದೆ. ಅವುಗಳು ಕ್ರಿಯೆಯ ಅಂಗಗಳು ಕೂಡ. ದೇಹವು ಮನಸ್ಸಿನ ಮೂಲಕ ಚಾಲನೆಗೊಳ್ಳುತ್ತಿರುವ ವಾಹನದಂತೆ. ಮನಸ್ಸು ಬಹಳ

ಅಮೂರ್ತವಾಗಿದ್ದು ನಾವು ಅದನ್ನು ಮುಟ್ಟಿ ನೋಡಿ ಅನುಭವಿಸಲಾಗುವುದಿಲ್ಲ. ಆದರೆ ನಮಗೊಂದು ಮನಸ್ಸು ಇದೆಯೆಂಬುದನ್ನು ನಾವು ಬಲ್ಲೆವು. ಬುದ್ಧಿಮತ್ತೆ ಮತ್ತು ನೆನಪುಗಳ ಸಹಾಯದಿಂದ ಮನಸ್ಸು ಕೇವಲ ವಿಚಾರ ಮಾಡುವುದಷ್ಟೇ ಅಲ್ಲದೆ ಅದು ದಾಖಲಿಸುತ್ತದೆ, ನೆನಪಿಸಿಕೊಳ್ಳುತ್ತದೆ ಮತ್ತು ನಿರ್ಧರಿಸುತ್ತದೆ ಕೂಡ. ಇದು ನಮ್ಮ ದೇಹದ ಅತಿ ಸೂಕ್ಷ್ಮ ಅಂಗವಾಗಿದ್ದು ನಮ್ಮ ಎಲ್ಲಾ ಕ್ರಿಯೆಗಳಿಗೆ ಜವಾಬ್ದಾರಿಯಾಗಿರುತ್ತದೆ. ದೇಹ ಕ್ರಿಯೆಯಲ್ಲಿ ತೊಡಗಿದೆ ಎಂದು ನಮಗೆ ಅನಿಸಿದರೂ ಅದನ್ನು ನಿರ್ದೇಶಿಸುತ್ತಿರುವುದು ನಮ್ಮ ಮನಸ್ಸೇ. ಆತ್ಮವೆನ್ನುವುದು ಒಂದು ಶಕ್ತಿ ಮೂಲವಷ್ಟೆ. ಅದು ಉಸಿರಾಟದ ಮೂಲಕ ಜೀವಂತವಾಗಿರಿಸುತ್ತದೆ. ಇಲ್ಲದ್ದಿದ್ದರೆ ಸಾವು ನಿಶ್ಚಿತ. ಸತ್ತಾಗ ದೇಹ ನಶಿಸುತ್ತದೆ. ಆದರೆ ಮನಸ್ಸು ನಶಿಸುವುದಿಲ್ಲ. ಅದು ಬುದ್ದಿಮತ್ತೆ, ನೆನಪು, ಅಹಂ ಇತ್ಯಾದಿ ಸೂಕ್ಷ್ಮ ಸಾಧನಗಳ ಜೊತೆಗೆ ತನ್ನ ಕರ್ಮದ ಪ್ರಕಾರ ಹೊಸ ದೇಹವೊಂದರಲ್ಲಿ ಮರುಹುಟ್ಟು ಪಡೆದುಕೊಳ್ಳುವವರೆಗೂ ತನ್ನ ಪ್ರಯಾಣವನ್ನು ಮುಂದುವರೆಸುತ್ತದೆ. ಚಕ್ರ ಹಾಗೆಯೇ ಉರುಳುತ್ತದೆ. ನಾವು ಕರ್ಮದಿಂದ ತಪ್ಪಿಸಿಕೊಳ್ಳಲಾರೆವು. ಜನ್ಮ-ಜನ್ಮಾಂತರಗಳಲ್ಲಿ ನಾವು ಮರುಹುಟ್ಟು ಪಡೆಯುವ ಹೊಸ ದೇಹಗಳಲ್ಲಿ ನಾವು ನಮ್ಮ ಕರ್ಮದ ಫಲವನ್ನು ಉಣ್ಣುತ್ತೇವೆ.

ಪ್ರತಿಯೊಂದು ಒಳ್ಳೆಯ ಮತ್ತು ಕೆಟ್ಟ ಕ್ರಿಯೆಯೂ ದಾಖಲಾಗಿರುತ್ತದೆ. ಅದಕ್ಕೆ ತಕ್ಕುದಾಗಿ ಕರ್ಮದ ಫಲವನ್ನು ಪಡೆದುಕೊಳ್ಳುತ್ತೇವೆ. ನಾವು ಕರ್ಮದ ಫಲವನ್ನು ನಿರಾಕರಿಸಲು ಪ್ರಯತ್ನಿಸುತ್ತೇವೆ. ಕರ್ಮದ ನಿರಾಕರಣೆಯ ಬಗ್ಗೆ ಭಿನ್ನ-ಭಿನ್ನ ವಿಚಾರಗಳಿವೆ ಎಂಬುದರ ಬಗ್ಗೆ ಪುರಾವೆಗಳಿಲ್ಲದಿರಬಹುದು. ಆದರೆ, ಸರಳ ತರ್ಕ ನಮಗೆ ಒಂದಷ್ಟು ನೆಮ್ಮದಿಯನ್ನು ನೀಡಬಹುದು. ನಾವು ಹೆಚ್ಚು- ಹೆಚ್ಚು ಒಳಿತನ್ನು ಮಾಡಿದಷ್ಟೂ ನಮಗೆ ಮುಂದಿನ ಜೀವನದಲ್ಲಿ ಒಳಿತಾಗುತ್ತದೆ. ಆದ್ದರಿಂದ ಈ ಜನ್ಮದಲ್ಲಷ್ಟೇ ಅಲ್ಲ ಮುಂದಿನ ಜನ್ಮದಲ್ಲಿ ಕೂಡ ಕರ್ಮ ನಮ್ಮನ್ನು ಹಿಂಬಾಲಿಸುತ್ತದೆ ಎಂಬ ಅಂಶವನ್ನು ನಾವು ಮನಗಾಣಬೇಕು. ಈ

ಅರಿವಿನೊಂದಿಗೆ ನಾವು ಬದುಕಬೇಕು.

ಕರ್ಮದ ಅಸ್ತಿತ್ವದ ಬಗ್ಗೆ ನಾವು ಅರಿವನ್ನು ಪಡೆದುಕ್ಕೊಳ್ಳುತ್ತಿದ್ದಂತೆ ನಾವು ನಿಸ್ಸಹಾಯಕ ಪ್ರೇಕ್ಷಕರಲ್ಲ ಎಂಬ ಅಂಶವನ್ನು ಕೂಡ ಮನಗಾಣಬೇಕು. ನಮಗೆ ದತ್ತವಾಗಿರುವ ಬುದ್ಧಿಮತ್ತೆಯನ್ನು ಬಳಸಿ ಯಾವ ಕ್ರಿಯೆಯು ಒಳಿತು, ಯಾವುದು ಕೆಡಕು ಎಂಬುದನ್ನು ನಿರ್ಧರಿಸಬೇಕು. ನಾವು ಸಾಕಷ್ಟು ಬುದ್ಧಿವಂತಿಕೆಯಿಂದ ನಮ್ಮ ಕ್ರಿಯೆಗಳನ್ನು ಕೈಗೊಂಡರೆ ಒಳ್ಳೆಯ ಕರ್ಮಫಲವನ್ನು ಪಡೆಯಬಹುದು. ಆದರೆ ನಾವು ಮನಸ್ಸಿಗೆ ಬಂದಂತೆ ನಡೆದುಕೊಂಡರೆ ಅಂತಹ ನಡವಳಿಕೆಗಾಗಿ ಮುಂದೆ ಬೆಲೆ ತೆರಬೇಕಾಗುತ್ತದೆ.

**ನಾವು ಒಳಿತನ್ನೇ ಮಾಡಲಿ ಅಥವಾ**
**ಕೆಡುಕನ್ನೇ ಮಾಡಲಿ**
**ಕರ್ಮ ಅದನ್ನು ದಾಖಲಿಸುವುದು ಸತ್ಯ.**
**ಹೀಗೆ ಹೋದದ್ದು ಹಾಗೆ ಬರಲೇಬೇಕು.**
**ಇಲ್ಲಿ ಏನು ನಡೆಯಬೇಕೆನ್ನುವುದನ್ನು**
**ನಮ್ಮ ಕರ್ಮವು ನಿರ್ಧರಿಸುತ್ತದೆ.**

# ಸಾರಾಂಶ:



# ಕರ್ಮವೆಂಬುದು ನಿಜವಾಗಿಯೂ ಅಸ್ತಿತ್ವದಲ್ಲಿದೆಯೇ?

ಹೌದು. ಕರ್ಮವು ಅಸ್ತಿತ್ವದಲ್ಲಿದೆ!

ಕರ್ಮದ ನಿಯಗಳಿಂದಾಗಿ ಈ ಜಗತ್ತಿನಲ್ಲಿ ಎಲ್ಲವೂ ನಿಯಮಿತವಾಗಿ
ಮತ್ತು ಸ್ವಯಂಚಾಲಿತ ಪ್ರಕ್ರಿಯೆಯಾಗಿ ನಡೆಯುತ್ತಿದೆ.
ಒಬ್ಬ ಶ್ರೀಮಂತನಾಗಿ, ಮತ್ತೊಬ್ಬ ಬಡವನಾಗಿ ಏಕೆ ಹುಟ್ಟುತ್ತಾನೆ?
ಒಳ್ಳೆಯವರಿಗೆ ಏಕೆ ಕೆಟ್ಟ ಪ್ರತಿಫಲಗಳು ದೊರಕುತ್ತವೆ?
ಇದೆಲ್ಲವೂ ಕರ್ಮದ ಫಲವಾಗಿವೆ.

ಮನಸ್ಸು ಮತ್ತೆ ಹುಟ್ಟುತ್ತದೆಯೇ? ನಾವು ಮರುಹುಟ್ಟನ್ನು ಸಾಬೀತು ಮಾಡಬಲ್ಲವೇ?

ನಾವು ಮರುಹುಟ್ಟು ಸಾಬೀತುಮಾಡಲಾಗದಿದ್ದರೂ
ಕರ್ಮದ ಕಾರಣಕ್ಕಾಗಿ ಮರುಹುಟ್ಟು ಜರಗುತ್ತದೆ ಎಂಬುದನ್ನು ತಿಳಿಯಬಲ್ಲೆವು.

ಮರುಹುಟ್ಟಿನಿಂದಾಗಿ ಕರ್ಮವಿರುವಂತೆ, ಕರ್ಮ
ಮತ್ತು ಮರುಹುಟ್ಟು ಒಂದಕ್ಕೊಂದು ಗಾಢವಾದ ಸಂಬಂಧವನ್ನು ಹೊಂದಿವೆ.

# 4

# ಕರ್ಮದ ಮೂರು ಖಾತೆಗಳು

ಕರ್ಮವನ್ನು ನಾವು ಅರ್ಥ ಮಾಡಿಕೊಳ್ಳಬೇಕಾದರೆ ಅದರ ಮೂರು ಖಾತೆಗಳ ಬಗ್ಗೆ ನಾವು ತಿಳಿದಿರಬೇಕು- ಕರ್ಮದ ಒಟ್ಟು ನಿಧಿ, ಅದರ ಚಾಲ್ತಿಖಾತೆ ಮತ್ತು ಪ್ರಾರಂಭದ ಮೊತ್ತ ಇವುಗಳ ಬಗ್ಗೆ ನಾವು ತಿಳಿದಿರಬೇಕಾಗುತ್ತದೆ.

ಒಂದು ಖಾತೆಯಲ್ಲಿ ನಮ್ಮ ಪ್ರಸ್ತುತ ಜೀವನದ ಒಳಿತು-ಕೆಡಕುಗಳ ಲೆಕ್ಕವಿರುತ್ತದೆ. ಇದನ್ನು ನಾವು ಚಾಲ್ತಿಖಾತೆ ಎಂದು ಕರೆಯಬಹುದು. ಆದರೆ, ಯಾವುದೇ ಖಾತೆಯನ್ನು ತೆರೆಯಬೇಕೆಂದರೆ ಅದರಲ್ಲಿ ಪ್ರಾರಂಭದ ಮೊತ್ತವನ್ನಿರಿಸಬೇಕಾಗುತ್ತದೆ. ಹಾಗೆಯೇ ಜೀವನದಲ್ಲಿ ಕೂಡ. ಈ ಪ್ರಾರಂಭಿಕ ಮೊತ್ತ ನಮ್ಮ ಜೀವನದ ಎರಡನೆಯ ಖಾತೆ ಎನ್ನಬಹುದು. ನಮ್ಮ ಜೀವನದ ಕೊನೆಯಲ್ಲಿ ಪ್ರಾರಂಭಿಕ ಮೊತ್ತ ಹಾಗೂ ಈಗಿನ ಜೀವನದ ನಮ್ಮ ಕ್ರಿಯೆಗಳು ಎರಡೂ ಕೂಡಿ ಮುಕ್ತಾಯದ ಮೊತ್ತವಾಗುತ್ತದೆ. ಈ ಒಟ್ಟು ಕರ್ಮವನ್ನು ಮುಂದೆ ನಮ್ಮ ಇದುವರೆಗಿನ ಕರ್ಮದ ಮೊತ್ತಕ್ಕೆ ಸೇರಿಸಲಾಗುತ್ತದೆ. ಇದನ್ನು ನಮ್ಮ ಕರ್ಮದ ಒಟ್ಟು ನಿಧಿ ಎಂದು ಕರೆಯಬಹುದು. ನಾವು ಕರ್ಮದ ನಿಯಮವನ್ನು ಅರ್ಥ ಮಾಡಿಕೊಳ್ಳಬೇಕೆಂದರೆ, ಕರ್ಮದ ಈ ಮೂರೂ ಖಾತೆಗಳನ್ನು ಚೆನ್ನಾಗಿ ಅರಿತಿರಬೇಕು.

ಕರ್ಮದ ಈ ಮೂರು ಖಾತೆಗಳನ್ನು ಮತ್ತೊಮ್ಮೆ ಪರಿಶೀಲಿಸೋಣ. ನಾವು ಪ್ರತಿಯೊಬ್ಬರೂ ಕರ್ಮದ ಒಟ್ಟು ನಿಧಿಯನ್ನು ಹೊಂದಿರುತ್ತೇವೆ. ಇದರಲ್ಲಿ ನಮ್ಮ ಒಳಿತು-ಕೆಡಕುಗಳ ವೆಚ್ಚ ಮತ್ತು ಜಮೆಗಳು ಸೇರಿಕೊಂಡಿರುತ್ತವೆ. ಇದನ್ನು ನಾವು ಪ್ರತಿ ಜನ್ಮದಲ್ಲೂ

ಮುಂದುವರೆಸಿಕೊಂಡು ಹೋಗುತ್ತೇವೆ. ನಿಮ್ಮ ಬಳಿ ಕ್ರೆಡಿಟ್ ಮತ್ತು ಡೆಬಿಟ್ ಕಾರ್ಡುಗಳು ಇವೆಯೆಂದು ಇಟ್ಟುಕೊಳ್ಳಿ. ಕೆಲವು ಕಾರ್ಡುಗಳಿಗೆ ನೀವು ಬ್ಯಾಂಕಿಗೆ ಹಣವನ್ನು ಭರಿಸಬೇಕಾಗುತ್ತದೆ. ಕೆಲವದರಲ್ಲಿ ಹಣವಿರುತ್ತದೆ. ನೀವು ಒಟ್ಟು ಮೊತ್ತವನ್ನು ತಿಳಿಯಬೇಕಾದರೆ ಏನು ಮಾಡುತ್ತೀರಿ. ನೀವು ನಿಮ್ಮ ಎಲ್ಲಾ ಖರ್ಚು ಮತ್ತು ಜಮೆಗಳನ್ನು ಲೆಕ್ಕಹಾಕಿ ಒಟ್ಟು ಮೊತ್ತ ಎಷ್ಟಿದೆ ಎಂದು ತಿಳಿದುಕೊಳ್ಳುತ್ತೀರಿ. ನೀವು ಕ್ರೆಡಿಟ್ ಕಾರ್ಡುಗಳ ಮೂಲಕ ನಿಮ್ಮ ಜಮೆಯಲ್ಲಿರುವುದಕ್ಕಿಂತ ಹೆಚ್ಚಿನ ಹಣವನ್ನು ಖರ್ಚು ಮಾಡಿದ್ದರೆ, ನೀವು ಬ್ಯಾಂಕಿಗೆ ಹಣವನ್ನು ಕಟ್ಟಬೇಕಾಗುತ್ತದೆ.

ಪ್ರತಿ ಜೀವಿತವೂ ನಮ್ಮ ಒಳಿತು-ಕೆಡಕು ಕ್ರಿಯೆಗಳಿಂದಾಗಿ ಖರ್ಚು-ಜಮಾದ ಲೆಕ್ಕದ ರೂಪದಲ್ಲಿರುತ್ತದೆ. ಕರ್ಮದ ಈ ಎರಡು ಖಾತೆಗಳನ್ನು - ಪ್ರಾರಂಭಿಕ ಮೊತ್ತ ಮತ್ತು ಚಾಲ್ತಿಖಾತೆಯ ಮೊತ್ತ, ಲೆಕ್ಕ ಮಾಡಿದಾಗ ನಮಗೆ ಕರ್ಮದ ಒಟ್ಟು ಮೊತ್ತ ತಿಳಿಯುತ್ತದೆ.

ಒಂದು ಉತ್ತಮವಾದ ಡಿವಿಡಿ ಪ್ಲೇಯರನ್ನು ನೀವು ರೇಡಿಯೋ ಶ್ಯಾಕ್ ಅಂಗಡಿಯಿಂದ ಕೊಂಡುಕೊಳ್ಳುತ್ತೀರಿ. ಅಮೆರಿಕದಲ್ಲಷ್ಟೆ ಅಲ್ಲದೆ ಮೆಕ್ಸಿಕೊ, ಯು.ಕೆ., ಆಸ್ಟ್ರೇಲಿಯಾ ಮತ್ತು ಕೆನಡಾಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲೆಕ್ಟ್ರಾನಿಕ್ ಮಳಿಗೆಗಳನ್ನು ನೀವು ತುಂಬಾ ಮೆಚ್ಚಿಕೊಳ್ಳುತ್ತೀರಿ. ಹಾಗಾಗಿ ಈ ಮಳಿಗೆಗಳ ಇತಿಹಾಸವನ್ನು ಅರಿಯಲು ಪ್ರಯತ್ನಿಸುತ್ತೀರಿ. ಈ ಮಳಿಗೆಗಳು ರೇಡಿಯೋ ಶ್ಯಾಕ್ ಕಾರ್ಪೊರೇಶನ್ ಎಂಬ ಅಮೆರಿಕನ್ ಚಿಲ್ಲರೆ ವ್ಯಾಪಾರಿ ಮಳಿಗೆಯಾಗಿ ಪ್ರಾರಂಭಗೊಂಡು ದೇಶದ ಉದ್ದಕ್ಕೂ 424 ಮಳಿಗೆಗಳನ್ನು ಹೊಂದಿವೆ ಎಂಬ ಅಂಶವನ್ನು ತಿಳಿದುಕೊಳ್ಳುತ್ತೀರಿ. ಅದೇ ರೀತಿ ಬೇರೆ ದೇಶಗಳಲ್ಲೂ ಸಹ ಈ ಮಳಿಗೆಗಳು ಬಹಳ ವೇಗವಾಗಿ ಹರಡಿ ಬೆಳೆದವು. ಇವು ಇಂದು ಉತ್ತಮವಾದ ಸರಣಿ ಮಳಿಗೆಗಳಾಗಿವೆ. ಆದರೆ ರೇಡಿಯೋ ಶ್ಯಾಕ್ ಕಂಪೆನಿಯು

ದಿವಾಳಿತನಕ್ಕಾಗಿ ಅಧ್ಯಾಯ 11ಕ್ಕೆ ಅರ್ಜಿ ಹಾಕಿದ್ದಾರೆ ಎಂದು ಒಂದು ದಿನ ನಿಮಗೆ ಆಕಸ್ಮಿಕವಾಗಿ ತಿಳಿಯುತ್ತದೆ. ಇದಕ್ಕೆ ಕಾರಣವೇನೆಂದು ನಿಮಗೆ ಬಹುಶಃ ಹೊಳೆಯುವುದಿಲ್ಲ. ಬಹುಶಃ ಅವರ ಖರ್ಚು ಜಮೆಗಿಂತ ಹೆಚ್ಚಿದ್ದಿರಬಹುದು. ಆದಾಯಕ್ಕಿಂತ ಖರ್ಚು ಹೆಚ್ಚಾಗಿರಬಹುದು. ಕರ್ಮದ ಖಾತೆಗಳ ಕಥೆಯೂ ಇದೇ. ಅದು ನೀವು ಮಾಡಿರುವ ಒಳ್ಳೆಯ ಕ್ರಿಯೆಗಳನ್ನು ಮಾತ್ರ ತೋರುವುದಿಲ್ಲ. ನೀವು ಮಾಡಿದ ಕೆಟ್ಟ ಕ್ರಿಯೆಗಳ ಲೆಕ್ಕವನ್ನು ಕೂಡ ಇಡುತ್ತದೆ. ಪ್ರಾರಂಭದ ದಿನಗಳಲ್ಲಿ ರೇಡಿಯೋ ಶ್ಯಾಕ್ ಕಂಪೆನಿಯು ಒಳ್ಳೆಯ ವಹಿವಾಟನ್ನು ನಡೆಸಿರಬಹುದು ಆದರೆ, ನಂತರದ ದಿನಗಳಲ್ಲಿ ಅದರ ವೆಚ್ಚ ಹೆಚ್ಚಾಗಿ, ಜಮೆ ಕಡಿಮೆಯಾಗಿ ಅದು ದಿವಾಳಿ ಎದ್ದಿರಬಹುದು.

ನಮ್ಮ ಜೀವನದ ಒಟ್ಟು ಮೊತ್ತ ಅಂತಿಮ ಮೊತ್ತವಾಗಿದ್ದು ಅದನ್ನು ಕರ್ಮದ ನಿಧಿಗೆ ಸೇರಿಸಲಾಗುತ್ತದೆ. ನಮ್ಮ ಒಟ್ಟು ಮೊತ್ತ ಖರ್ಚಿರಬಹುದು ಅಥವಾ ಜಮೆಯಿರಬಹುದು. ಅದೇನೇ ಇರಲಿ ಈ ಅಂತಿಮ ಮೊತ್ತವು ನಮ್ಮ ಸಾವಿನೊಂದಿಗೆ ಮುಗಿಯುವುದಿಲ್ಲ. ಅದು ನಮ್ಮ ಒಟ್ಟು ಕರ್ಮ ನಿಧಿಗೆ ಸೇರ್ಪಡೆಯಾಗುತ್ತದೆ. ಇದು ಹೇಗೆ ಕೆಲಸ ಮಾಡುತ್ತದೆ ಎಂದು ನಾವ್ಯಾರೂ ಊಹಿಸಲಾಗುವುದಿಲ್ಲ. ಆದರೆ, ಸೃಷ್ಟಿಕರ್ತನಿಗೆ ಇದೆಲ್ಲದರ ವಿವರಗಳು ತಿಳಿದಿರುತ್ತವೆ. ಇಂತಹ ಕರ್ಮ ನಿಧಿ ಇರುವುದನ್ನು ನಾವು ಊಹಿಸಬಲ್ಲೆವು. ನೀವು ನಿಮ್ಮ ಹಲವು ಬ್ಯಾಂಕ್ ಖಾತೆಗಳನ್ನು ನೋಡಿದಾಗ ಅವುಗಳಲ್ಲಿ ಖರ್ಚೇ ಹೆಚ್ಚಾಗಿ ಇರುವುದು ಕಂಡುಬರುತ್ತದೆ ಎಂದಿಟ್ಟುಕೊಳ್ಳಿ. ನಿಮ್ಮ ಕ್ಲಬ್ ಸದಸ್ಯತ್ವದ ಶುಲ್ಕ, ಇಂಟರ್ನೆಟ್ಟಿನ ಸ್ವಯಂಚಾಲಿತ ನವೀಕರಣ, ನೀವು ಮಾಡಿರುವ ಆನ್ಲೈನ್ ಶಾಪಿಂಗ್, ಇವೆಲ್ಲವುಗಳ ಖರ್ಚುಗಳು ಬ್ಯಾಂಕ್ ಸ್ಟೇಟ್-ಮೆಂಟಿನಲ್ಲಿ ಕಂಡುಬರುತ್ತವೆ. ನಿಮ್ಮ ಖಾತೆಗೆ ಒಂದು ದೊಡ್ಡ ಉಡುಗೊರೆ ಜಮೆಯಾಗಿರುತ್ತದೆ. ಇದು ನಿಮ್ಮ ಮಾವನವರು ನಿಮ್ಮ ಹುಟ್ಟುಹಬ್ಬಕ್ಕೆ ನೀಡಿರುವ ಉಡುಗೊರೆ ಎಂದುಕೊಳ್ಳುತ್ತೀರಿ. ನಾವು ನಮ್ಮ ಬ್ಯಾಂಕ್ ಖಾತೆಯಲ್ಲಿನ

ಜಮಾ- ಖರ್ಚುಗಳನ್ನು ನೋಡಿ ತಿಳಿಯಬಲ್ಲೆವು. ಆದರೆ, ನಮ್ಮ ಒಳ್ಳೆಯ ಮತ್ತು ಕೆಟ್ಟ ಪ್ರತಿಫಲಗಳನ್ನು ನೋಡಲಾಗುವುದಿಲ್ಲ. ಕೆಲವೊಮ್ಮೆ ಕೆಟ್ಟ ಪ್ರತಿಫಲಗಳು ದೊರಕಿದಾಗ ನಾವು ಜೀವನದಲ್ಲಿ ಯಾವ ತಪ್ಪನ್ನು ಮಾಡಿದೆವು ಎಂದುಕೊಳ್ಳುತ್ತೇವೆ. ನಾವು ನಮ್ಮ ಹಿಂದಿನ ಜನ್ಮದಲ್ಲಿ ತಪ್ಪುಗಳನ್ನು ಮಾಡಿರಬಹುದೆಂಬುದನ್ನು ನಾವು ತಿಳಿದುಕೊಳ್ಳುವುದಿಲ್ಲ.

ಕೆಲವರು ಕರ್ಮದ ಮೂರು ಖಾತೆಗಳ ಬದಲು ಎರಡೇ ಖಾತೆಗಳಿವೆಯೆಂದು ತಿಳಿದಿದ್ದಾರೆ. ಅವರ ಪ್ರಕಾರ ಕರ್ಮದ ನಿಧಿ ಎಂಬ ಖಾತೆ ಇರುವುದಿಲ್ಲ. ಜೀವನವು ಹಿಂದಿನ ಜೀವನದ ಮುಕ್ತಾಯ ಖಾತೆ, ಅಂದರೆ ಈ ಜೀವನದ ಪ್ರಾರಂಭಿಕ ಖಾತೆಯಿಂದ ಕೂಡುತ್ತದೆ ಎಂದು ತಿಳಿದಿರುತ್ತಾರೆ. ಇದಕ್ಕೆ ಈಗಿನ ಜೀವನದ ಚಾಲ್ತಿ ಖಾತೆಯ ಲೆಕ್ಕ ಸೇರಿಕೊಳ್ಳುತ್ತದೆಂದು ಅವರು ತಿಳಿದುಕೊಂಡಿದ್ದಾರೆ. ಜೀವನವು ಮುಕ್ತಾಯ ಖಾತೆಯೊಂದಿಗೆ ಕೊನೆಗೊಂಡು ಅದೇ ಮತ್ತೆ ಇನ್ನೊಂದು ಜೀವನದ ಪ್ರಾರಂಭಿಕ ಖಾತೆಯಾಗಿರುತ್ತದೆಂಬುದು ಅವರ ನಂಬಿಕೆ. ಹಾಗಾಗಿ ಮುಕ್ತಾಯ ಖಾತೆಯು ಮುಂದಿನ ಜೀವನದ ಪ್ರಾರಂಭಿಕ ಖಾತೆಯಾಗಿದ್ದು ಅದು ನಿಧಿಗೆ ಸೇರುವುದಿಲ್ಲ ಹಾಗಾಗಿ ಒಟ್ಟು ನಿಧಿ ಇರುವುದಿಲ್ಲ ಎಂದು ತಿಳಿಯಲಾಗುತ್ತದೆ. ಅವರ ಪ್ರಕಾರ ಈ ಜನ್ಮದ ಮುಕ್ತಾಯ ಖಾತೆಯು - ಅದು ಒಳಿತಿರಲಿ ಅಥವಾ ಕೆಡುಕಿರಲಿ - ಅದೇ ಮುಂದಿನ ಜನ್ಮದ ಪ್ರಾರಂಭಿಕ ಖಾತೆಯಾಗಿರುತ್ತದೆ. ಅವರಿಗೆ ಮೂರನೆಯ ಖಾತೆಯ ಬಗ್ಗೆ ನಂಬಿಕೆ ಇರುವುದಿಲ್ಲ. ಆದರೆ ಇವೆಲ್ಲವನ್ನೂ ಅಧ್ಯಯನ ಮಾಡಿರುವ ಆಧ್ಯಾತ್ಮಿಕ ಗುರುಗಳ ಪ್ರಕಾರ ನಮ್ಮ ಮುಕ್ತಾಯದ ಖಾತೆಯ ಮೊತ್ತ ಎಷ್ಟು ದೊಡ್ಡದಾಗಿರುತ್ತದೆ ಎಂದರೆ ಅಷ್ಟು ದೊಡ್ಡ ಮೊತ್ತವನ್ನು ಮುಂದಿನ ಜನ್ಮದ ಪ್ರಾರಂಭಿಕ ಖಾತೆಗೆ ತೆಗೆದುಕೊಂಡು ಹೋಗಲು ಸಾಧ್ಯವಾಗುವುದಿಲ್ಲ. ಅದು ನಾವು ಬ್ಯಾಂಕಿನಲ್ಲಿ ಪಡೆದ ಸಾಲದಂತೆ. ಕೇವಲ ಒಂದು ಭಾಗವನ್ನು ಮಾತ್ರ ಕೊಂಡೊಯ್ಯಬಹುದು. ಹಾಗೆ ಕೊಂಡುಹೋದ ಭಾಗವಷ್ಟೇ ಮುಂದಿನ ಜನ್ಮದ ಪ್ರಾರಂಭಿಕ ಖಾತೆಯಾಗುತ್ತದೆ.

ನೀವು ಕಂಪೆನಿಯೊಂದರಲ್ಲಿ ಕೆಲಸ ಮಾಡುತ್ತಿದ್ದು ಹುಷಾರು ತಪ್ಪುತ್ತೀರಿ ಎಂದಿಟ್ಟುಕೊಳ್ಳಿ. ಅದಕ್ಕೆ ಚಿಕಿತ್ಸೆ ಪಡೆಯಲು ನೀವು ಆಸ್ಪತ್ರೆಗೆ ದಾಖಲಾಗುತ್ತೀರಿ. ಆಸ್ಪತ್ರೆಯ ಖರ್ಚು ನಿಮ್ಮ 10 ತಿಂಗಳ ಸಂಬಳಕ್ಕೆ ಸಮಾನವಾದುದಾಗಿರುತ್ತದೆ. ನೀವು ವಿಮೆ ಮಾಡಿಸಿರುವುದಿಲ್ಲ. ಕಂಪೆನಿಯು ಆಸ್ಪತ್ರೆಯ ಬಿಲ್ಲನ್ನು ಪಾವತಿಸುತ್ತದೆ ಮತ್ತು ನಿಮ್ಮ ಸಂಬಳದಲ್ಲಿ ಒಂದು ಭಾಗವನ್ನು 50 ತಿಂಗಳುಗಳ ಕಾಲ ಕಡಿತಗೊಳಿಸುತ್ತದೆ. ಇದು ನಿಮಗೆ ಸಹಾಯವಾಗುತ್ತದೆ. ಇದೊಂದು ನಕಾರಾತ್ಮಕವಾದ ಸಂದರ್ಭ. ಅದೇ ನೀವು ಹತ್ತು ದಶಲಕ್ಷದ ಲಾಟರಿಯೊಂದನ್ನು ಗೆದ್ದಿದ್ದೀರಿ ಎಂದಿಟ್ಟಕೊಳ್ಳಿ. ನಿಮ್ಮ ಹಿತೈಷಿಗಳು ನಿಮಗೆ ಎಲ್ಲಾ ಹಣವನ್ನೂ ಖರ್ಚು ಮಾಡಿಬಿಡಬೇಡ ಎಂದು ಸಲಹೆ ನೀಡುತ್ತಾರೆ. ಒಂದು ಸ್ಥಿರ ಠೇವಣಿಯಲ್ಲಿ ಈ ಹಣವನ್ನಿಟ್ಟು ಸ್ವಲ್ಪ ಸ್ವಲ್ಪವಾಗಿ ಹಲವು ವರ್ಷಗಳ ಕಾಲ ಉಪಯೋಗಿಸುವಂತೆ ಹೇಳುತ್ತಾರೆ. ಹೀಗೆ ಒಟ್ಟು ಕರ್ಮದ ನಿಧಿಯು ಸಾಲದ ಹಣದಂತೆ ನಕಾರಾತ್ಮಕವಾಗಿರಬಹುದು ಅಥವಾ ಸ್ಥಿರ ಠೇವಣಿಯಂತೆ ಸಕಾರಾತ್ಮಕವಾಗಿರಬಹುದು.

ನಮ್ಮ ಮುಂದಿನ ಜನ್ಮವು ಹೇಗೆ ನಿರ್ಧರಿಸಲ್ಪಡುತ್ತದೆ? ದೇಹ ಸಾಯುತ್ತದೆ. ಅಲ್ಲಿಗೆ ಅದರ ಪ್ರಯಾಣ ಮುಗಿಯಿತು. ಆದರೆ ಕರ್ಮವನ್ನು ಮುಂದುವರಿಸುವುದು ಮನಸ್ಸು. ನಿಯಮವನ್ನು ಆಧರಿಸಿ, ಮನಸ್ಸು ಒಟ್ಟು ಕರ್ಮದ ಮೊತ್ತವನ್ನು- ಒಳಿತು ಮತ್ತು ಕೆಡಕುಗಳನ್ನು ಸೇರಿಸಿ ಪರಿಶೀಲಿಸುತ್ತದೆ. ನಂತರ ಅದು ತನ್ನ ಮರುಹುಟ್ಟನ್ನು ನಿರ್ಧರಿಸುತ್ತದೆ. ನಾವು ಪಾಪಿಗಳಾಗಿ ಕೆಟ್ಟ ಕೆಲಸಗಳನ್ನು ಮಾಡುತ್ತಾ ಜೀವಿಸಿದ್ದರೆ, ನಕಾರಾತ್ಮಕ ಕರ್ಮವನ್ನು ಸಂಗ್ರಹಿಸಿರುತ್ತೇವೆ. ನಮಗೆ ಮುಂದಿನ ಜೀವನದಲ್ಲಿ ಯಾವುದೇ ಆಯ್ಕೆ ಇರುವುದಿಲ್ಲ. ನಾವು ನಮ್ಮ ಕೆಟ್ಟ ಕ್ರಿಯಗಳಿಗಾಗಿ ನೋವು, ದುಃಖಗಳನ್ನು ಅನುಭವಿಸಲೇ ಬೇಕಾಗುತ್ತದೆ. ಕೆಲವು ಧರ್ಮಗಳು ಮತ್ತು ಶಾಸ್ತ್ರಗ್ರಂಥಗಳು ನಮ್ಮ ಕೆಟ್ಟ ಕ್ರಿಯೆಗಳ ದೆಸೆಯಿಂದಾಗಿ ಮುಂದಿನ ಜನ್ಮದಲ್ಲಿ ನಾವು ನಾಯಿಯಾಗಿಯೋ ಅಥವಾ ಹುಳುವಾಗಿಯೋ ಬಹಳ ನೋವನ್ನು ಅನುಭವಿಸಿ

ಸಾಯುತ್ತೇವೆಂದು ಸಾರುತ್ತವೆ. ಈ ನೋವು, ದುಃಖಗಳು ನಮ್ಮ ಒಟ್ಟು ಕರ್ಮದ ಮೊತ್ತವನ್ನು ಕಡಿಮೆ ಮಾಡಿ ಅವು ಸಕಾರಾತ್ಮಕವಾಗುವವರೆಗೂ ಇರುತ್ತವೆ. ನಂತರ ನಾವು ಮುಂದಿನ ಜನ್ಮದಲ್ಲಿ ಒಳ್ಳೆಯ ಕರ್ಮ ಪಡೆದು ಜೀವನವನ್ನು ಸಂತೋಷದಿಂದ ಕಳೆಯುತ್ತೇವೆ. ಆದ್ದರಿಂದ ನಮ್ಮಲ್ಲಿ ಒಳ್ಳೆಯ ಕರ್ಮದ ನಿಧಿಯಿದ್ದರೆ ನಾವು ಒಳ್ಳೆಯ ಮರುಹುಟ್ಟನ್ನು ಪಡೆಯಬಹುದು. ಆದರೆ ನಮ್ಮಲ್ಲಿ ಕೆಟ್ಟ ಕರ್ಮಗಳ ನಿಧಿಯಷ್ಟೇ ಇದ್ದರೆ ನಾವು ನೋವು ದುಃಖಗಳನ್ನು ಅನುಭವಿಸದೇ ಬೇರೆ ಆಯ್ಕೆಗಳಿರುವುದಿಲ್ಲ. ಆದ್ದರಿಂದ ಪ್ರತಿ ಕ್ಷಣವೂ ನಾವು ಒಳ್ಳೆಯ ಕ್ರಿಯೆಯಲ್ಲಿ ತೊಡಗುತ್ತಾ ಹೆಚ್ಚು ಸಕಾರಾತ್ಮಕ ಕರ್ಮದ ಮೊತ್ತವನ್ನು ಗಳಿಸಿಕೊಳ್ಳುವುದು ಮುಖ್ಯ. ಹಾಗೆ ಮಾಡಿದರೆ ನಾವು ಮುಂದಿನ ಜನ್ಮದಲ್ಲಿ ಈ ನಿಧಿಯನ್ನು ಮುಂದುವರೆಸಿ ಹೆಚ್ಚು ಸಂತೋಷದಾಯಕವಾಗಿ ಬದುಕಬಹುದು.

ಕರ್ಮದ ನಿಯಮಗಳು ಕೇವಲ ನಮ್ಮ ಇಂದಿನ ಬದುಕನ್ನಷ್ಟೇ ಅಲ್ಲ ನಂತರದ ಬದುಕನ್ನು ಕೂಡ ನಿಯಂತ್ರಿಸುತ್ತವೆ. ನಾವು ಕರ್ಮದ ಮೂರು ಖಾತೆಗಳನ್ನು ಅರ್ಥ ಮಾಡಿಕೊಂಡರೆ ನಮ್ಮ ಇಂದಿನ ಬದುಕಿನ ಒಳಿತು ಕೆಡಕುಗಳು, ನಮ್ಮ ಹಿಂದಿನ ಕೃತ್ಯದ ಫಲಿತಗಳು ಎಂಬುದು ಅರಿವಾಗುತ್ತದೆ. ನಮ್ಮ ಬದುಕಿನಲ್ಲಿ ನಡೆಯುತ್ತಿರುವ ಯಾವ ವಿದ್ಯಮಾನವೂ ಕೂಡ ಆಕಸ್ಮಿಕವಲ್ಲ. ನಮ್ಮ ಜೀವನದಲ್ಲಿ ನಡೆಯುವ ಎಲ್ಲ ಸಂಗತಿಗಳೂ ನಮ್ಮ ಕರ್ಮದ ಫಲಿತಗಳು. ಪ್ರತಿಯೊಂದು ಕರ್ಮವೂ ನಮಗೆ ಒಂದು ಸಂದರ್ಭವಾಗಿ ಅಥವಾ ಅವಕಾಶವಾಗಿ ಕಾಣಬಹುದು. ಇವುಗಳನ್ನು ನಾವು ನಮ್ಮ ಬುದ್ಧಿವಂತಿಕೆಯಿಂದ ಆಯ್ಕೆ ಮಾಡಿಕೊಳ್ಳಬೇಕಾಗುತ್ತದೆ. ಇವು ಕ್ರಿಯೆಗೆ ಎಡೆಮಾಡಿಕೊಡುತ್ತವೆ ಮತ್ತು ಇವುಗಳೇ ನಮ್ಮ ಕರ್ಮವೆಂದು ದಾಖಲಾಗುತ್ತವೆ. ಅವು ಮುಂದೆ ಈ ಜನ್ಮದಲ್ಲಿಯೋ ಅಥವಾ ತದನಂತರದ ಜನ್ಮದಲ್ಲಿಯೋ ಪ್ರಕಟಗೊಳ್ಳುತ್ತವೆ. ಕರ್ಮದ ನಿಯಮಗಳನ್ನು ಮತ್ತು ಕರ್ಮದ ಮೂರು ಖಾತೆಗಳನ್ನು ನಾವು ಸರಿಯಾಗಿ ತಿಳಿದುಕೊಳ್ಳದೇ ಹೋದರೆ ನಮಗೆ

ಸೂಕ್ಷ್ಮ ತಿಳಿವಳಿಕೆ ಸಾಧ್ಯವಾಗುವುದಿಲ್ಲ. ಹಾಗಾದಲ್ಲಿ ನಾವು ನಕಾರಾತ್ಮಕ ಕರ್ಮ ನಿಧಿಯನ್ನು ಸಂಗ್ರಹ ಮಾಡಿಡುತ್ತೇವೆ. ಇದು ಸಹಜವಾಗಿಯೇ ನೋವು, ದುಃಖಗಳನ್ನು ಉಂಟುಮಾಡುತ್ತವೆ.

ನಮ್ಮ ಚಾಲ್ತಿ ಖಾತೆಯ ಕರ್ಮವು ಹೇಗೆ ಕಾರ್ಯ ನಿರ್ವಹಿಸುತ್ತದೆ? ನಮ್ಮ ಪ್ರತಿಯೊಂದು ಕ್ರಿಯೆಯನ್ನೂ ಒಳಿತು ಅಥವಾ ಕೆಡುಕು, ಕ್ರೂರವಾದದ್ದು ಅಥವಾ ದಯೆಯಿಂದ ಕೂಡಿದ್ದು ಮತ್ತು ಸಕಾರಾತ್ಮಕ ಅಥವಾ ನಕಾರಾತ್ಮಕ ಕ್ರಿಯೆಗಳೆಂದು ದಾಖಲು ಮಾಡಲಾಗುತ್ತದೆ. ಈ ತತ್ವವು ಕರ್ಮಗಳ ಮೌಲ್ಯಮಾಪನ ಮಾಡಿ ದಾಖಲು ಮಾಡಲು ತನ್ನದೇ ವಿಧಾನವನ್ನು ಹೊಂದಿದೆ. ನಿಯಮವು ಹೇಗೆ ಕಾರ್ಯವೆಸಗುತ್ತದೆ ಎಂಬುದನ್ನು ಯಾರೂ ವಿವರಿಸಲಾರರು. ಒಳ್ಳೆಯ ಕ್ರಿಯೆಗಳಿಗೆ ಉತ್ತಮ ಫಲ ಮತ್ತು ಕೆಟ್ಟ ಕ್ರಿಯೆಗಳಿಗೆ ಕೆಟ್ಟ ಫಲ ದೊರಕುತ್ತದೆಂಬುದನ್ನು ಊಹಿಸಬಲ್ಲೆವು. ಅದರಂತೆ ನಮ್ಮ ಬದುಕು ಸಂತೋಷದಾಯಕವಾಗಬಹುದು ಅಥವಾ ದುಃಖದಿಂದ ಕೂಡಿರಬಹುದು. ಯಾವೊಂದು ಕ್ರಿಯೆಯೂ ಇದರಿಂದ ತಪ್ಪಿಸಿಕೊಳ್ಳಲಾಗುವುದಿಲ್ಲ. ನಾವು ಯಾರನ್ನಾದರೂ ಕೊಲೆ ಮಾಡಿದರೆ ಕರ್ಮದ ನಿಯಮ ಅದನ್ನು ದಾಖಲು ಮಾಡದೇ ಇರುವುದಿಲ್ಲ.

ಆದ್ದರಿಂದಲೇ ಪ್ರಾಣಿಗಳ ಮಾಂಸವನ್ನು ತಿನ್ನುವುದು ಪ್ರಾಣಿಹಿಂಸೆಯಾಗುವುದರಿಂದ ಅನೇಕ ಧರ್ಮಗಳು ಅದನ್ನು ನಿಷೇಧಿಸಿವೆ. ಇನ್ನೂ ಕೆಲವು ಧರ್ಮಗಳು ಕ್ಯಾರೆಟ್, ಈರುಳ್ಳಿ ಬೆಳ್ಳುಳ್ಳಿಗಳಂತಹ ಗೆಡ್ಡೆಗಳನ್ನು ಕೂಡ ತಿನ್ನುವುದನ್ನು ನಿಷೇಧಿಸುತ್ತವೆ. ಹಾಗಿದ್ದರೆ ನಾವೇನು ಮಾಡಬೇಕು? ಇದ್ಯಾವುದನ್ನೂ ತಿನ್ನದೇ ಇರೋಣವೇ? ಈ ವಿಷಯದ ಬಗ್ಗೆ ನಾವು ನಮ್ಮ ವಿಚಾರಶಕ್ತಿಯನ್ನು ಬಳಸಿ ನಮ್ಮ ನೈತಿಕತೆಯ ಆಧಾರದ ಮೇಲೆ ನಿರ್ಧಾರವನ್ನು ಮಾಡಬೇಕಾಗುತ್ತದೆ. ನಾವು ಬೇರೆಯವರ ಬಗ್ಗೆ ನಮ್ಮ ತೀರ್ಪನ್ನು

ನೀಡಬೇಕಾಗಿಲ್ಲ. ಆದರೆ ನಮ್ಮ ಬದುಕಿನ ರೀತಿಯ ಬಗ್ಗೆ ನಿರ್ಧಾರವನ್ನು ತೆಗೆದುಕೊಳ್ಳಬಹುದು. ನಾವು ಕೊಲೆ ಮಾಡಿದರೆ, ನಾವೂ ಕೂಡ ಕೊಲೆಯಾಗುವ ಸಾಧ್ಯತೆ ಇರುವಂತೆಯೇ, ನಾವು ಯಾರಿಗಾದರೂ ಮೋಸ ಮಾಡಿದರೆ, ನಾವೂ ಕೂಡ ಮೋಸ ಹೋಗುವ ಸಾಧ್ಯತೆಯೇ ಹೆಚ್ಚು. ಆದ್ದರಿಂದ ದಯಾಳುವಾಗಿದ್ದುಕೊಂಡು ಕ್ಷಮಿಸುವ ಗುಣವನ್ನು ಹೊಂದಿದ್ದರೆ ಅದು ಮುಂದೆ ಭವಿಷ್ಯದಲ್ಲಿ ಹೆಚ್ಚು ಸಕಾರಾತ್ಮಕ ಪರಿಣಾಮಗಳನ್ನುಂಟುಮಾಡಬಹುದು. ನಾವು ಕರ್ಮದ ನಿಯಮಗಳನ್ನು ತಿಳಿದುಕೊಂಡರೆ ನಮ್ಮ ಪ್ರಸ್ತುತ ಜೀವನದಲ್ಲಿ ಅದನ್ನು ಅಳವಡಿಸಿಕೊಳ್ಳುತ್ತೇವೆ. ಒಳ್ಳೆಯ ಕೃತ್ಯಗಳು ಎಂದೂ ನಿಷ್ಪ್ರಯೋಜಕವಲ್ಲ. ಪ್ರತಿಯೊಂದು ಒಳ್ಳೆಯ ಕ್ರಿಯೆಯೂ ಕರ್ಮದ ಪುಸ್ತಕದಲ್ಲಿ ದಾಖಲಾಗಿದ್ದು ಅದು ಒಳ್ಳೆಯ ಫಲವನ್ನು ನೀಡುತ್ತದೆ ಅಥವಾ ಕೆಟ್ಟ ಕ್ರಿಯೆಗಳಿಂದಾಗಿ ರದ್ದಾಗುತ್ತದೆ. ನೀವು ಏರ್ ಫ್ರಾನ್ಸ್ ವಿಮಾನದಲ್ಲಿ ಪ್ರಯಾಣಿಸುತ್ತಿರಬಹುದು. ಪ್ರತಿಯೊಂದು ವಿಮಾನಯಾನ ಕಂಪೆನಿಯೂ ನಿಮಗೆ ಲಾಯಲ್ಟಿ ಪಾಯಿಂಟುಗಳನ್ನು ನೀಡುತ್ತದೆ. ಆ ಪಾಯಿಂಟುಗಳು ನಿಮ್ಮ ಖಾತೆಗೆ ಜಮಾ ಆಗುತ್ತವೆ. ಒಂದು ದಿನ ನಿಮ್ಮ ಕಾರ್ಯದರ್ಶಿಯು ನಿಮಗೆ ಜಮಾ ಆಗಿರುವ ಲಾಯಲ್ಟಿ ಪಾಯಿಂಟುಗಳಿಗೆ ಬದಲಾಗಿ ನಿಮಗೆ ಜಗತ್ತನ್ನು ವಿಮಾನದಲ್ಲಿ ಸುತ್ತಲು ಎರಡು ಬ್ಯುಸನೆಸ್ ಕ್ಲಾಸ್ ಟಿಕೆಟುಗಳು ದೊರೆತಿವೆ ಎಂದು ಹೇಳುತ್ತಾರೆ. ಆದರೆ ಕರ್ಮದ ವಿಚಾರದಲ್ಲಿ ಇದು ಭಿನ್ನ ರೀತಿಯಲ್ಲಿ ಕೆಲಸ ಮಾಡುತ್ತದೆ. ಒಂದು ನಾವು ಈ ಪಾಯಿಂಟುಗಳಿಗೆ ಬದಲಾಗಿ ಪಡೆದುಕೊಳ್ಳಬೇಕಾಗಿಲ್ಲ.

ಕರ್ಮದ ನಿಯಮವೇ ತನ್ನದೇ ರೀತಿಯಲ್ಲಿ ಆಯ್ಕೆ ಮಾಡುತ್ತದೆ. ಮತ್ತೆ ವಿಮಾನಯಾನ ಕಂಪೆನಿಗಳ ಪಾಯಿಂಟುಗಳಂತೆ ಈ ಕರ್ಮದ ಪಾಯಿಂಟುಗಳು ತಮ್ಮಷ್ಟಕ್ಕೆ ಅವಧಿಯ ನಂತರ ಕೊನೆಗೊಳ್ಳುವುದಿಲ್ಲ. ಬದಲು ಅವು ಪ್ರಕಟಗೊಂಡೇಗೊಳ್ಳುತ್ತವೆ. ಆದ್ದರಿಂದ ನಮ್ಮ ಪ್ರಸ್ತುತ ಜೀವನದ ಪ್ರತಿಯೊಂದು ಕ್ರಿಯೆಯೂ ಕರ್ಮದ ತಂತ್ರಾಂಶದಲ್ಲಿ ದಾಖಲಾಗಿದ್ದು ನಮಗೆ ಅದರ ಫಲವಾಗಿ ಫಲ ಅಥವಾ ಶಾಪ ದೊರಕುತ್ತದೆ.

ನಾವು ನಿಜಕ್ಕೂ ಪಾಪ ಮಾಡಿ ನಮ್ಮ ಕೃತ್ಯಗಳಿಂದ ತಪ್ಪಿಸಿಕೊಳ್ಳಲು ಸಾಧ್ಯವೇ? ಹಾಗೆಂದು ತಿಳಿದುಕೊಂಡರೆ ನಾವು ಯಾವುದೋ ಕಲ್ಪನಾ ಲೋಕದಲ್ಲಿ ವಿಹರಿಸುತ್ತಿರಬೇಕು. ನಮ್ಮ ಪ್ರತಿಯೊಂದು ಕೆಟ್ಟ ಕೃತ್ಯವನ್ನೂ ಕರ್ಮದ ನಿಯಮವು ದಾಖಲು ಮಾಡಿಕೊಂಡಿರುತ್ತದೆ. ನಾವು ಇದರಿಂದ ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ. ಯಾವುದಾದರೂ ಒಂದು ರೂಪದಲ್ಲಿ ಅದು ನಮ್ಮತ್ತ ಹಿಂದಿರುಗಿ ಬಂದೇ ಬರುತ್ತದೆ. ಕರ್ಮದ ನಿಯಮಗಳು ಕೆಲಸ ಮಾಡುವುದೇ ಹೀಗೆ. ಉದಾಹರಣೆಗೆ, ನೀವು ಒಂದು ರೆಸ್ಟೊರಾದಲ್ಲಿ ಮದ್ಯವನ್ನು ಸೇವಿಸುತ್ತೀರಿ ಎಂದಿಟ್ಟುಕೊಳ್ಳೋಣ. ನೀವು ಅದಾಕ್ಕಾಗಿ ಹಣವನ್ನು ಪಾವತಿಸದೇ ಇರಲಾಗುವುದಿಲ್ಲ. ನೀವು ಮದ್ಯವನ್ನು ಸೇವಿಸಿ, ರೆಸ್ಟೊರಾದಿಂದ ಹೊರಬೀಳುವಾಗ ಹಣವನ್ನು ಪಾವತಿಸಿಯೇ ಹೊರ ಬೀಳಬೇಕಾಗುತ್ತದೆ.

ಮೂರು ಬಗೆಯ ಕರ್ಮದ ಖಾತೆಗಳಿವೆಯೆಂದು ತಿಳಿದುಕೊಂಡೆವು - ಅವುಗಳು ಪ್ರಾರಂಭದ ಮೊತ್ತ, ಚಾಲ್ತಿ ಖಾತೆ ಮತ್ತು ಒಟ್ಟು ಕರ್ಮದ ನಿಧಿ. ಇವು ಮೂರೂ ಖಾತೆಗಳು ಒಂದಕ್ಕೊಂದು ಸಂಬಂಧವನ್ನು ಹೊಂದಿವೆ ಎಂಬುದನ್ನು ತಿಳಿದುಕೊಂಡಿದ್ದೇವೆ. ಅಂತಿಮವಾಗಿ ಇವು ಕರ್ಮದ ನಿಯಮಗಳ ಭಾಗವಾಗಿದ್ದು ನಮ್ಮ ವಿಧಿಯನ್ನು ನಿರ್ಧರಿಸುತ್ತವೆ. ನಮ್ಮ ಇಂದಿನ ಕರ್ಮಗಳ ಚೌಕಟ್ಟಿನಲ್ಲಿ ನಾವು ನಮ್ಮ ಕ್ರಿಯೆಗಳನ್ನು ಮಾಡುವ ಆಯ್ಕೆಯನ್ನು ಹೊಂದಿರುತ್ತೇವೆ. ನಮ್ಮ ಇಂದಿನ ಕ್ರಿಯೆಗಳು ಭವಿಷ್ಯದಲ್ಲಿ ನಮ್ಮ ಕರ್ಮವನ್ನು ನಿರ್ಧರಿಸುತ್ತವೆ ಎಂಬುದನ್ನು ತಿಳಿದಿದ್ದೇವೆ. ಅಂದರೆ ಇಂದಿನ ಕ್ರಿಯೆಗಳು ಏನೇ ಆಗಿರಲಿ ಅವು ನಮ್ಮ ಭವಿಷ್ಯದ ಕರ್ಮವನ್ನು ನಿರ್ಧರಿಸುತ್ತವೆ. ಇವೆಲ್ಲವೂ ನಮಗೆ ಸ್ಪಷ್ಟವಾಗಿ ತಿಳಿದಿದ್ದರೂ ಸಹ ಕರ್ಮದ ನಿಯಮಗಳು ಹೇಗೆ ಕೆಲಸ ಮಾಡುತ್ತವೆಂದು ನಮಗಾರಿಗೂ ತಿಳಿದಿಲ್ಲ. ಯಾವ ಒಳಿತಿಗೆ ಹೆಚ್ಚು ಅಂಕ, ಯಾವ ಪಾಪಕ್ಕೆ ಎಷ್ಟು ಶಿಕ್ಷೆ ಎಂಬುದನ್ನು ನಿರ್ಧರಿಸುವವನು ಸೃಷ್ಟಿಕರ್ತ ಮತ್ತು ಕರ್ಮದ ನಿಯಮಗಳು ಮಾತ್ರ.

ಕರ್ಮದ ನಿಯಮ ಮೂರು ಖಾತೆಗಳನ್ನು  ಹೊಂದಿದೆ-

ಮರದ ಬೇರಿನಂತೆ ಪ್ರಾರಂಭಿಕ ಮೊತ್ತದ ಖಾತೆ,

ನಾವು ಪ್ರಸ್ತುತದಲ್ಲಿ ಮಾಡುವ ಎಲ್ಲಾ ಕ್ರಿಯೆಗಳ ಚಾಲ್ತಿ ಖಾತೆ

ನಿಮ್ಮ ಮೇಲೆ ಸದಾ ನಿಗಾ ಇಡುವ ಒಟ್ಟು ಕರ್ಮದ ನಿಧಿ.

# ಸಾರಾಂಶ:

# ಕರ್ಮದ ಮೂರು ಖಾತೆಗಳು

**1. ಪ್ರಾರಂಭಿಕ ಮೊತ್ತ:**

ನಾವು ಹುಟ್ಟಿದಾಗ ಪಡೆದುಕೊಂಡು ಬಂದಿರುವ ಒಟ್ಟು ಕರ್ಮದ ನಿಧಿ.
ಅದು ನಮ್ಮ ಪ್ರಸ್ತುತ ಜೀವನವನ್ನು ನಾವು ಎಲ್ಲಿ,
ಹೇಗೆ ಹುಟ್ಟುತ್ತೇವೆಂಬುದನ್ನು ಕೂಡ ನಿರ್ಧರಿಸುತ್ತದೆ.
ಅದು ನಮ್ಮ ಹುಟ್ಟಿನ ಸಂದರ್ಭವನ್ನು ನಿರ್ಧರಿಸುತ್ತದೆ.

**2. ಚಾಲ್ತಿ ಖಾತೆ**

ನಾವು ಜೀವನದಲ್ಲಿ ಎಸಗುವ ಎಲ್ಲಾ ಕ್ರಿಯೆಗಳೂ -
ಅವು ಒಳಿತಿರಲಿ ಅಥವಾ ಕೆಡುಕಿರಲಿ, ದಾಖಾಗುತ್ತವೆ.
ನಮ್ಮ ಆಯಸ್ಸು ಮುಗಿದ ಕೂಡಲೇ ಅವು ನಮ್ಮ ಪ್ರಾರಂಭಿಕ
ಮೊತ್ತಕ್ಕೆ ಸೇರ್ಪಡೆಯಾಗುತ್ತವೆ. ಮತ್ತು ಒಟ್ಟು ಮೊತ್ತವನ್ನು
ಕರ್ಮದ ಒಟ್ಟು ನಿಧಿಗೆ ಕೊಂಡೊಯ್ಯಲಾಗುತ್ತದೆ.

# ಸಾರಾಂಶ:

# ಕರ್ಮದ ಮೂರು ಖಾತೆಗಳು

### 3. ಕರ್ಮದ ಒಟ್ಟು ನಿಧಿ

ನಮ್ಮ ಜೀವಿತದ ಕೊನೆಯಲ್ಲಿ ನಮ್ಮ ಒಟ್ಟು ಕರ್ಮ-
ಪ್ರಾರಂಭಿಕ ಮೊತ್ತ ಮತ್ತು ಚಾಲ್ತಿ ಖಾತೆ, ಸಕಾರಾತ್ಮಕ ಮತ್ತು ನಕಾರಾತ್ಮಕಗಳು
ನಮ್ಮ ಎಲ್ಲಾ ಜನ್ಮಗಳ ಕರ್ಮದ ಮೊತ್ತಕ್ಕೆ ಸೇರ್ಪಡೆಯಾಗುತ್ತವೆ.
ನಾವು ಪಡೆಯುವ ಪ್ರತಿಯೊಂದು ಜನ್ಮವೂ ಕರ್ಮದ ಮೊತ್ತವನ್ನು ಹೊಂದಿರುತ್ತದೆ.
ಈ ಮೊತ್ತವನ್ನು ಕರ್ಮದ ಒಟ್ಟು ನಿಧಿಗೆ ಸೇರಿಸಲಾಗುತ್ತದೆ.
ಈ ನಿಧಿಯಿಂದಲೇ ನಮ್ಮ ಮುಂದಿನ ಜನ್ಮ ಆಯ್ಕೆಯಾಗುತ್ತದೆ.
ಎಲ್ಲ ಮೂರು ಖಾತೆಗಳೂ ಒಂದರೊಡನೊಂದು
ಸಂಬಂಧ ಹೊಂದಿದ್ದು ನಮ್ಮ "ಕರ್ಮ"ವನ್ನು ನಿರ್ಧರಿಸುತ್ತವೆ.

5

# ನಮ್ಮ ಬದುಕಿನಲ್ಲಿ ಕರ್ಮ

ಕರ್ಮದ ನಿಯಮವನ್ನು ನಾವು ತಪ್ಪಿಸಿಕೊಳ್ಳಬಲ್ಲೆವೆ? ಹಾಗೆ ಮಾಡುವುದು ಸಾಧ್ಯವಿಲ್ಲ. ನಾವು ಊಟ, ನಿದ್ರೆ, ಉಸಿರಾಟ ಮಾಡುವಂತೆ ಕ್ರಿಯೆಯಲ್ಲಿ ಕೂಡ ತೊಡಗಲೇಬೇಕು. ನಮಗೆ ಕ್ರಿಯೆಯಿಂದ ಬಿಡುಗಡೆ ಇಲ್ಲ. ನಮ್ಮ ಕ್ರಿಯೆಗಳು ಮನಸ್ಸು ಮತ್ತು ಅಹಂನಿಂದ ಪ್ರೇರಿತಗೊಳ್ಳುವುದರಿಂದ ಅವು ನಿರಂತರವಾಗಿ ಒಳ್ಳೆಯ ಮತ್ತು ಕೆಟ್ಟ ಕರ್ಮವನ್ನು ಸೃಷ್ಟಿ ಮಾಡುತ್ತವೆ. ಕ್ರಿಯೆಯಿಂದ ತಪ್ಪಿಸಿಕೊಳ್ಳುವ ಯೋಚನೆಯನ್ನು ಕೂಡ ನಾವು ಮಾಡುವಂತಿಲ್ಲ. ನಾವು ನಮ್ಮ ಬದುಕಿನಲ್ಲಿ ಅನೇಕ ಕ್ರಿಯೆಗಳಲ್ಲಿ ತೊಡಗುತ್ತೇವೆ ಮತ್ತು ಅದಕ್ಕಾಗಿ ತಕ್ಕ ಪ್ರತಿಫಲಗಳನ್ನು ಪಡೆದುಕೊಳ್ಳುತ್ತೇವೆ.

ಬದುಕುವ ಉತ್ತಮ ಮಾರ್ಗ ಯಾವುದು? ಮಾನವಕೋಟಿಯ ಮುಖ್ಯ ಗುರಿ ಕರ್ಮದ ನಿಯಮಗಳನ್ನು ತಿಳಿದುಕೊಂಡು ಉತ್ತಮ ಕ್ರಿಯೆಗಳಲ್ಲಿ ತೊಡಗುವ ಮೂಲಕ ಉತ್ತಮ ವಿಧಿಯನ್ನು ರೂಢಿಸಿಕೊಳ್ಳುವುದು. ಇದು ನಮ್ಮ ಕರ್ಮ ಜೀವನದ ಮುಖ್ಯ ಅಂಶವಾಗಿದ್ದು, ನಾವು ದಿನನಿತ್ಯದ ಕರ್ಮದ ಸಂದರ್ಭಗಳನ್ನು ಎದುರಿಸುವುದು ಹೇಗೆ?

ನಾವು ಬಹಳ ಉತ್ತಮ ಕೆಲಸಗಳನ್ನು ಮಾಡಿ ಸಂತೋಷದ ಜೀವನವನ್ನು ಬದುಕಿದ್ದೇವೆ ಎಂದುಕೊಳ್ಳೋಣ. ಆದರೆ ಇದ್ದಕ್ಕಿದಂತೆ ನಮಗೆ ಘೋರವಾದ ಸಂದರ್ಭ ಎದುರಾಗುತ್ತದೆ. ನಾವು ಇದನ್ನು ಶಪಿಸುತ್ತಾ ಮತ್ತಷ್ಟು ನಕಾರಾತ್ಮಕ ಕರ್ಮವನ್ನು ಉಂಟುಮಾಡಬೇಕೆ

ಅಥವಾ ಇವು ನಮ್ಮ ಪೂರ್ವಕೃತ್ಯಗಳ ಫಲಿತಗಳೆಂದು ತಿಳಿದು ಮುಂದುವರೆಯಬೇಕೆ? ಕರ್ಮದ ನಿಯಮಗಳನ್ನು ಚೆನ್ನಾಗಿ ಅರಿತ ಜನ ತಮಗೆ ತೊಂದರೆಯಾದಾಗ ಇದು ತಮ್ಮ ಪೂರ್ವಕೃತ್ಯಗಳನ್ನು ರದ್ದುಪಡಿಸುವ ಸಲುವಾಗಿ ಎಂದು ಬಗೆದು ಸಂತೋಷಪಡುತ್ತಾರೆ. ಒಮ್ಮೆ ಈ ಸಂಕಟದಿಂದ ಪಾರಾದರೆ ಸಕಾರಾತ್ಮಕ ವಿಷಯಗಳು ತಮ್ಮ ಜೀವನದಲ್ಲಿ ಒದಗಿಬರುತ್ತವೆಂಬ ಭರವಸೆಯೊಂದಿಗೆ ಅವರು ಬದುಕುತ್ತಾರೆ. ನಮ್ಮ ಕರ್ಮದ ಮತ್ತು ಚಾಲ್ತಿ ಖಾತೆಗಳಲ್ಲಿ ನಕಾರಾತ್ಮಕ ಕರ್ಮಗಳಿರುವತನಕವೂ ಅವು ಸಂಪೂರ್ಣವಾಗಿ ಖರ್ಚಾಗುವತನಕವೂ ಇದ್ದೇ ಇರುತ್ತವೆ. ಹಾಗಾಗಿ ನಾವು ಸಂಪೂರ್ಣವಾಗಿ ನಮ್ಮನ್ನು ಕರ್ಮದ ನಿಯಮಗಳಿಗೆ ಒಪ್ಪಿಸಿಕೊಂಡುಬಿಡಬೇಕು. ನಾವು ಭವಿಷ್ಯದಲ್ಲಿ ಸಕಾರಾತ್ಮಕ ಕರ್ಮವನ್ನು ಉಂಟುಮಾಡಲು ಸಕಾರಾತ್ಮಕವಾಗಿ ಮತ್ತು ನೈತಿಕತೆಯಿಂದ ನಡೆದುಕೊಳ್ಳಬೇಕು. ಇದೇ ಸರಿಯಾಗಿ ಬದುಕುವ ಮಾರ್ಗ.

ನಮ್ಮ ಮನಸ್ಸೆಂಬುದು ಒಂದು ಮರ್ಕಟ. ಅದು ಸದಾ ವಿಚಾರಗಳನ್ನು ಹುಟ್ಟಿಸುತ್ತಲೇ ಇರುತ್ತದೆ. ಅದು ನಿಮಿಷಕ್ಕೆ 50 ವಿಚಾರಗಳನ್ನು ಹುಟ್ಟಿಸುತ್ತದೆಂದು ಒಂದು ಅಂದಾಜು. ಇವು ದಿನಕ್ಕೆ 50,000 ವಿಚಾರಗಳಾಗುತ್ತವೆ. ಈ ವಿಚಾರಗಳೇ ಕ್ರಿಯೆಯಾಗಿ ಹೊರಹೊಮ್ಮುತ್ತವೆ ಮತ್ತು ಕ್ರಿಯೆಗಳು ಕರ್ಮದ ನಿಯಮಕ್ಕೆ ಒಳಪಟ್ಟಿವೆ. ಹಾಗಾಗಿ ದೇಹವು ಕ್ರಿಯೆಯಲ್ಲಿ ತೊಡಗಿದರೂ ನಿಜಕ್ಕೂ ಕರ್ಮಕ್ಕೆ ಕಾರಣವಾಗುವುದು ಮನಸ್ಸು ಎಂದು ಹೇಳಲಾಗುತ್ತದೆ. ಹಾಗಿದ್ದರೆ ನಾವು ಮನಸ್ಸನ್ನು ಹೇಗೆ ನಿಗ್ರಹಿಸಬಹುದು. ವಿಚಾರಗಳನ್ನು ನಿಯಂತ್ರಿಸುವುದು ಕಷ್ಟವಾದರೂ ನಮ್ಮ ಬುದ್ಧಿಮತ್ತೆಯ ಮೂಲಕ ನಾವು ಅವುಗಳನ್ನು ಸೋಸಿ ಸಮನ್ವಯತೆಯನ್ನು ಸಾಧಿಸಬಹುದು. ನಾವು ಈ ಶಕ್ತಿಗಳನ್ನು ಸಾಕಷ್ಟು ಜಾಗರೂಕರಾಗಿ ಬಳಸಿದರೆ ವಿಚಾರಗಳು ಕ್ರಿಯೆಗಳಾಗಿ ಹೊರಹೊಮ್ಮುವ ಮೊದಲೇ ಅವುಗಳನ್ನು ಚಿವುಟಿ ಹಾಕಬಹುದು. ಅಥವಾ ಈ ವಿಚಾರಗಳ ಸಲುವಾಗಿ

ಹೊರಮೊಮ್ಮಿದ ಕ್ರಿಯೆಗಳನ್ನು ಸೋಸಿ ಹೊರತೆಗೆಯಬಹುದು. ನಮ್ಮ ಬುದ್ಧಿಮತ್ತೆಯನ್ನು ಬಳಸುವ ಮೂಲಕ ನಮ್ಮ ಸಂಕಲ್ಪ ಶಕ್ತಿಯಿಂದ ಅದನ್ನು ಕ್ರಿಯೆಗಳನ್ನು ಕೈಗೊಳ್ಳುವ ಒಂದು ಶಕ್ತಿಶಾಲಿ ಸಾಧನವನ್ನಾಗಿ ಬಳಸಬಹುದು. ಆ ಮೂಲಕ ಭವಿಷ್ಯದಲ್ಲಿ ಸಕಾರಾತ್ಮಕ ಕರ್ಮವನ್ನು ಉಂಟುಮಾಡಬಹುದು.

ಸರಿಯಾಗಿ ಬದುಕುವುದರ ಮೂಲಕ ಸಕಾರಾತ್ಮಕ ಕರ್ಮವನ್ನು ಉಂಟುಮಾಡಿದರೆ ಕ್ರಮೇಣ ನಕಾರಾತ್ಮಕ ಕರ್ಮದ ಭಂಡಾರವು ಖಾಲಿಯಾಗಿ ನಮ್ಮ ಜೀವನವು ಸಕಾರಾತ್ಮಕ ಕರ್ಮದಿಂದ ಕೂಡಿರುತ್ತದೆ. ಇದು ಬಹಳ ಸುಲಭವೆನ್ನಿಸಿದರೂ ಅಷ್ಟು ಸುಲಭವಲ್ಲ. ನಮ್ಮ ದೇಹವು ಪಂಚೇಂದ್ರಿಯಗಳನ್ನು ಮತ್ತು ಮನಸ್ಸನ್ನು ಹೊಂದಿದ್ದು ಅವುಗಳು ಒಟ್ಟಾಗಿ ಗ್ರಹಿಸುತ್ತವೆ ಮತ್ತು ಯೋಚಿಸುತ್ತವೆ ಮತ್ತು ಕಾಮನೆಗಳನ್ನು ಬೆಳೆಸಿಕೊಂಡಿರುತ್ತವೆ. ಈ ಆಸೆಗಳು ಅಥವಾ ಕಾಮನೆಗಳು ಕಾಮ, ಮೋಹ, ದುರಾಸೆ, ಹೊಟ್ಟೆಕಿಚ್ಚು ಇನ್ನೂ ಮುಂತಾದ ತಪ್ಪು ಕ್ರಿಯೆಗಳತ್ತ ನಮ್ಮನ್ನು ಕೊಂಡೊಯ್ಯುತ್ತವೆ. ನಾವು ಇವುಗಳನ್ನು ಗುರುತಿಸಿ ನಿರ್ಲಿಪ್ತವಾಗಿ ಬದುಕದಿದ್ದರೆ ನಕಾರಾತ್ಮಕವಾದ ಕರ್ಮಗಳನ್ನುಂಟು ಮಾಡುತ್ತೇವೆ.

ನಮ್ಮಲ್ಲಿ ಕೆಲವರು ಮಾತ್ರ ಉತ್ತಮವಾದ ವ್ಯಕ್ತಿತ್ವವನ್ನು ರೂಢಿಸಿಕೊಳ್ಳುವ ಅವಕಾಶವನ್ನು ಪಡೆದ ಅದೃಷ್ಟಶಾಲಿಗಳಾಗಿರುತ್ತೇವೆ. ಇದು ನಮ್ಮ ಪೂರ್ವಕರ್ಮದ ಫಲವೇ ಆಗಿರುತ್ತದೆ. ನಾವು ವಯಸ್ಕರಾಗಿ ಬೆಳೆಯುತ್ತಿದ್ದಂತೆ ಸಕಾರಾತ್ಮಕ ಚಿಂತನೆ, ಭಾವನೆ ಮತ್ತು ರೂಢಿಗಳ ಮೂಲಕ ಸಕಾರಾತ್ಮಕ ವ್ಯಕ್ತಿತ್ವವನ್ನು ಹೊಂದುತ್ತೇವೆ. ಇದು ಸಕಾರಾತ್ಮಕ ಕರ್ಮವನ್ನು ಉಂಟುಮಾಡಲು ಒಂದು ಚೌಕಟ್ಟನ್ನು ಒಡಗಿಸುತ್ತದೆ. ಆದರೆ ಈ ನಿಯಮ ಎಷ್ಟು ಕ್ಲಿಷ್ಟವಾದದ್ದೆಂದರೆ ಸಕಾರಾತ್ಮಕ ವಿಚಾರಗಳ ವ್ಯಕ್ತಿಯೂ ಕೂಡ ನಕಾರಾತ್ಮಕ ಕರ್ಮಗಳ

ಸಾಗರದಲ್ಲಿ ಮುಳುಗಿ ಹೋಗಬಹುದು. ಇದು ನಮ್ಮ ಸಂಕಲ್ಪ ಶಕ್ತಿ, ಬುದ್ಧಿಮತ್ತೆ ಮತ್ತು ಕರ್ಮದ ಖಾತೆಯಿಂದ ರೂಪಿತವಾದ ಮುಕ್ತಮನಸ್ಸಿನ ಆಯ್ಕೆಯಾಗಿರುತ್ತದೆ. ಕರ್ಮದ ನಿಯಮಗಳ ಈ ಎಲ್ಲಾ ಲಕ್ಷಣಗಳನ್ನು ತಿಳಿದುಕೊಳ್ಳುವುದು ಒಳ್ಳೆಯ ಜೀವನ ಮತ್ತು ಭವಿಷ್ಯಕ್ಕೆ ಮುಖ್ಯವಾಗುತ್ತದೆ.

ಕೆಲವೊಮ್ಮೆ ನಾವು ಕಷ್ಟಪಡಬಹುದು. ಇದು ನಕಾರಾತ್ಮಕ ಕರ್ಮದ ಫಲ ಎಂದು ತಿಳಿಯುವುದರ ಬದಲು ನಾವು ಮಾಡಿರುವ ತಪ್ಪಾದರೂ ಏನು? ನಾನು ಏಕೆ ಕಷ್ಟಪಡಬೇಕು? ಇಷ್ಟು ಒಳ್ಳೆಯವನಾಗಿ ಜೀವನವನ್ನು ನಡೆಸಿದ ನನಗೆ ಏಕೆ ಹೀಗಾಗಬೇಕು? ಎಂದು ಸೃಷ್ಟಿಕರ್ತನನ್ನು ದೂರುತ್ತೇವೆ. ಆದರೆ, ಈ ಪ್ರಶ್ನೆಗಳು ಅಪ್ರಸ್ತುತ. ಕಾರಣ, ಸತ್ಯವೇನೆಂದರೆ, ನಮಗೆ ಕಷ್ಟಗಳು ಯಕಃಶ್ಚಿತವಾಗಿ ಬರುವುದಿಲ್ಲ. ಅವು ನಮ್ಮದೇ ಕರ್ಮಗಳ ಫಲವಾಗಿರುತ್ತವೆ. ನಾವು ಅಜ್ಞಾನಿಗಳಾಗದೆ ಈ ಸತ್ಯವನ್ನು ಒಪ್ಪಿ ಬದುಕಬೇಕು. ನಾವು ಅಜ್ಞಾನದಿಂದ ಈ ನಿಯಮಗಳನ್ನು ದೂರಿದರೆ ನಮ್ಮ ಕೃತ್ಯಗಳು ಹೆಚ್ಚಾಗುತ್ತವೆಯೇ ಹೊರತು ಕಡಿಮೆಯಾಗುವುದಿಲ್ಲ. ಕರ್ಮದ ನಿಯಮಗಳು ಹೇಗೆ ಕೆಲಸ ಮಾಡುತ್ತವೆಂಬುದನ್ನು ತಿಳಿದಿದ್ದು ನೋವನ್ನು ಒಪ್ಪಿಕೊಂಡರೆ ಅದನ್ನು ತಡೆದುಕೊಳ್ಳಲು ಮತ್ತು ಮೀರಲು ಸುಲಭವಾಗುತ್ತದೆ. ಆದರೆ, ಕೇವಲ ಕೇಲವೇಕೆಲವು ಜನ ಅದೃಷ್ಟವಂತರು ಮಾತ್ರ ಇದನ್ನು ಅರ್ಥ ಮಾಡಿಕೊಂಡಿರುತ್ತಾರೆ. ಅವರು ತಮ್ಮ ಪೂರ್ವಜನ್ಮದ ಪಾಪಗಳ ಕರ್ಮವನ್ನು ಕಳೆದುಕೊಂಡು ಸಂತೋಷಪಡುತ್ತಾರೆ.

ಈ ಕರ್ಮಗಳನ್ನು ನಿರ್ಮಿಸುತ್ತಿರುವವರು ಯಾರು? ಅದು ನಮ್ಮ ಮನಸ್ಸು ಮತ್ತು ಅಹಂ. ನಮ್ಮ ಮನಸ್ಸು ವಿಚಾರಗಳನ್ನು ಹುಟ್ಟುಹಾಕಿ ಆ ಮೂಲಕ ಕ್ರಿಯೆಗಳಲ್ಲಿ ತೊಡಗುವಂತೆ ಮಾಡುತ್ತದೆ ಮತ್ತು ಆ ಮೂಲಕ ಕರ್ಮಗಳನ್ನು ನಿರ್ಮಿಸುತ್ತವೆ ಎಂಬುದನ್ನು ನಾವು

ಬಲ್ಲೆವು. ನಮ್ಮ ಅಹಂ ಅದು ನಮ್ಮ ದೇಹ, ನಮ್ಮ ಮನಸ್ಸು ಮತ್ತು ನಮ್ಮ ಕ್ರಿಯೆ ಎಂದು ಸಾರುತ್ತದೆ. ಎಲ್ಲವೂ ಸಂಭವಿಸುವುದು ನಾನು ಮಾಡುವುದರಿಂದ. ಹಾಗಾಗಿ ಮನಸ್ಸು ಮತ್ತು ಅಹಂಗಳು ಕರ್ಮಗಳನ್ನು ನಿರ್ಮಿಸುವುದರಲ್ಲಿ ಮತ್ತು ಅವುಗಳನ್ನು ಸಂಗ್ರಹಗೊಳಿಸುವುದರಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತವೆ.

ಕರ್ಮವು ಪ್ರಕಟಗೊಂಡು ದುಃಖವನ್ನು ಉಂಟುಮಾಡಿದಾಗ ಕಷ್ಟಪಡುವವರು ಯಾರು? ನಿಸ್ಸಂಶಯವಾಗಿ ಅದು ನಮ್ಮ ದೇಹವೇ ಆಗಿರುತ್ತದೆ. ನೋವು ಮೊಟ್ಟಮೊದಲು ಕಾಣಿಸಿಕೊಳ್ಳುವುದು ದೇಹದಲ್ಲಿಯೇ. ಅಂತಿಮವಾಗಿ ದೇಹ, ಮನಸ್ಸು ಮತ್ತು ಅಹಂ ಎಲ್ಲವೂ ಒಟ್ಟಿಗೇ ಈ ನೋವನ್ನು ಅನುಭವಿಸಿದಾಗ, ಅಂದರೆ ದೈಹಿಕ ಮತ್ತು ಭಾವನಾತ್ಮಕವಾಗಿ ನೋವನ್ನು ಅನುಭವಿಸುತ್ತವೆ. ನಮ್ಮ ದೇಹದ ಮೂಲಕವೇ ಕ್ರಿಯೆಯನ್ನು ಕೈಗೊಳ್ಳುವುದರಿಂದ ಕರ್ಮವು ನಮಗೇ ಹಿಂದಿರುಗಿ ಬರುತ್ತದೆ.

ವ್ಯಕ್ತಿಗಳಾಗಿ ನಮ್ಮೆದುರು ಇರುವ ಸವಾಲು ಸರಳವಾಗಿದೆ. ನಾವು ದೈವಸಂಕಲ್ಪವನ್ನು ಒಪ್ಪಿಕೊಂಡು ಅದು ನಮಗೆ ಅನ್ಯಾಯವನ್ನು ಎಸಗಿಲ್ಲ ಎಂಬುದನ್ನು ತಿಳಿಯಬೇಕು. ನಮ್ಮ ಕ್ರಿಯೆಗಳೆ ನಮಗೆ ಹಿಂದಿರುಗಿ ಬರುತ್ತವೆ ಎಂಬುದನ್ನು ತಿಳಿಯಬೇಕು. ದೈವಸಂಕಲ್ಪವನ್ನು ಸಂತೋಷದಿಂದ ಒಪ್ಪಿಕೊಳ್ಳುವ ಮೂಲಕ ನಾವು ನಮ್ಮ ಪೂರ್ವಜನ್ಮದ ಕರ್ಮಗಳನ್ನು ತೊಡೆದುಕೊಳ್ಳಬಹುದು. ನಾವು ಕಷ್ಟವನ್ನೆದುರಿಸಿದಾಗಲೆಲ್ಲಾ ಹಾಗೆ ಮಾಡುವುದು ಅಗತ್ಯವಾದರೂ ನಾವು ನಮ್ಮ ಕ್ರಿಯೆಗಳ ಮೂಲಕ ಸಕಾರಾತ್ಮಕ ಕರ್ಮಗಳನ್ನು ನಿರ್ಮಿಸಲು ನಿರಂತರವಾಗಿ ಪ್ರಯತ್ನಿಸುತ್ತಿರಬೇಕು. ಸಕಾರಾತ್ಮಕ ಕರ್ಮಗಳಿಂದಾಗಿ ನಾವು ಈ ಜನ್ಮದಲ್ಲಿ ನಮ್ಮ ಪಾಪಗಳನ್ನು ತೊಡೆದುಕೊಳ್ಳುವ ಅದೃಷ್ಟವನ್ನು ಹೊಂದಿದ್ದರೆ ಅದಕ್ಕೆ ಕಾರಣನಾದ ದೈವನಿಗೆ ನಾವು ಕೃತಜ್ಞರಾಗಿರಬೇಕು. ನಮ್ಮ ಜೀವನವು

ಉತ್ತಮವಾಗಿದ್ದರೂ ನಾವು ಅಹಂಕಾರದಿಂದ ನಡೆದುಕೊಂಡು ತಪ್ಪುಗಳನ್ನು ಮಾಡಿದರೆ ಆ ಪಾಪಕರ್ಮದ ಫಲ ಕೂಡ ನಮ್ಮನ್ನು ಬೆನ್ನಟ್ಟಿ ಬರುತ್ತದೆ. ಆದ್ದರಿಂದ ಜೀವನ ಪೂರ್ತಿ ಕರ್ಮದ ನಿಯಗಳು ಅಸ್ತಿತ್ವದಲ್ಲಿರುವುದರ ಬಗ್ಗೆ ನಾವು ಅರಿತಿರಬೇಕು.

ನಾವು ಒಳ್ಳೆಯದನ್ನೇ ಮಾಡಿರಲಿ ಅಥವಾ ಕೆಟ್ಟದ್ದನ್ನೇ ಮಾಡಿರಲಿ ಅದಕ್ಕೆ ತಕ್ಕ ಪ್ರತಿಫಲವನ್ನು ಸಾವಿನ ನಂತರ ಪಡೆಯಲೇಬೇಕು. ನಾವೆಲ್ಲರೂ ಮುಪ್ಪು, ರೋಗ ಮತ್ತು ಸಾವನ್ನು ಅನುಭವಿಸಲೇಬೇಕಾಗುತ್ತದೆ. ಯಾರಿಗೂ ಸಾವಿನಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಸಾವು ಎನ್ನುವುದು ಬಹಳ ದುಃಖದಾಯಕವಾದುದು. ಕಾರಣ, ಅದು ಎಲ್ಲಾ ರೀತಿಯ ಸಂಬಂಧಗಳನ್ನೂ ಕಡಿದುಹಾಕುತ್ತದೆ. ಆದ್ದರಿಂದ ಕರ್ಮದ ನಿಯಮಗಳನ್ನು ಅರಿತುಕೊಂಡು ಬಾಳುವುದು ನಮ್ಮ ಕರ್ತವ್ಯವಾದರೂ ಈ ನಿರಂತರ ಹುಟ್ಟು, ಸಾವು ಮತ್ತು ಮರುಹುಟ್ಟುಗಳ ಚಕ್ರದಿಂದ ಮುಕ್ತಿ ಪಡೆಯುವುದೇ ನಮ್ಮ ಧ್ಯೇಯವಾಗಬೇಕು. ಇದು ಅಷ್ಟು ಸುಲಭವಲ್ಲ. ಕೇವಲ ಕೆಲವೇ ಕೆಲವು ಅದೃಷ್ಟಶಾಲಿಗಳಿಗೆ ಮಾತ್ರ ಈ ಹಾದಿಯಲ್ಲಿ ಸಾಗುವುದು ಸಾಧ್ಯವಾಗುತ್ತದೆ.

ನಾವು ಸತ್ಯವನ್ನು ಅರಿತು ಹುಟ್ಟು-ಸಾವುಗಳ ನಿರಂತರ ಚಕ್ರದಿಂದ ಮುಕ್ತಿಯನ್ನು ಹೊಂದುವುದು ನಮ್ಮ ಜೀವನದ ಅಂತಿಮ ಗುರಿಯಾಗಿರುತ್ತದೆ. ಆದರೆ, ಇದು ಸಾಧ್ಯವೇ? ನಾವು ಹುಟ್ಟು-ಸಾವುಗಳ ಬಗ್ಗೆ ಕೂಲಂಕಶವಾಗಿ ವಿಶ್ಲೇಷಿಸಿದಾಗ ನಮಗೆ ಸತ್ಯ ತಿಳಿಯುತ್ತದೆ. ಹಾಗಾದಾಗ ನಾವು ಅರಿವಿನ ಹಾದಿಯಲ್ಲಿ ನಡೆಯಬಹುದು. ಈ ಅರಿವು ನಾವು ಎಲ್ಲಾ ಕರ್ಮಗಳಿಂದ, ದುಃಖ ಮತ್ತು ನೋವುಗಳಿಂದ ಬಿಡುಗಡೆ ಹೊಂದಲು ಅವಕಾಶ ಮಾಡುತ್ತದೆ.

ನಿಮಗೆ ಕಷ್ಟ ಎದುರಾದಾಗ ಅಳಬೇಡಿ.
ಕಷ್ಟ, ನೋವು ಎದುರಾದಾಗ ಏಕೆ? ಎಂದು ಕೇಳಬೇಡಿ.
ಕರ್ಮವು ನೀವು ಮಾಡಿರುವ ಕೆಟ್ಟದ್ದನ್ನು ತೊಡೆದು ಹಾಕುತ್ತದೆ.
ಒಮ್ಮೆ ನಿಮ್ಮ ಕರ್ಮವನ್ನು ತೊಡೆದುಹಾಕಿದ ಮೇಲೆ
ನೀವು ಜೀವನದಲ್ಲಿ ಖುಷಿಪಡಬಹುದು.

# ಸಾರಾಂಶ:

# ನಮ್ಮ ಬದುಕಿನಲ್ಲಿ ಕರ್ಮ

ನಾವು ಕ್ರಿಯೆಯಿಂದ ತಪ್ಪಿಸಿಕೊಳ್ಳಲಾಗುವುದಿಲ್ಲ.
ನಮ್ಮ ಬದುಕು ಮತ್ತು ಕ್ರಿಯೆಗಳಿಂದ ನಾವು ಕರ್ಮವನ್ನು ನಿರ್ಮಿಸುತ್ತೇವೆ.

ಆದ್ದರಿಂದ ಉತ್ತಮವಾಗಿ ಬದುಕುವುದೆಂದರೆ-

ಒಳ್ಳೆಯ ಕ್ರಿಯೆಗಳಲ್ಲಷ್ಟೇ ತೊಡಗಿ ಸಕಾರಾತ್ಮಕ ಕರ್ಮಗಳನ್ನು ನಿರ್ಮಿಸುವುದು.
ನಕಾರಾತ್ಮಕವಾದುದು ಸಂಭವಿಸಿದಾಗ ಸಂತೋಷಪಡಿ.
ಕಾರಣ ನಿಮ್ಮ ಹಳೆಯ ನಕಾರಾತ್ಮಕ
ಕರ್ಮಗಳನ್ನು ನೀವು ಕಳೆದುಕೊಳ್ಳುತ್ತಿದ್ದೀರಿ.

ನೀವು ನಿಮ್ಮ ಖಾತೆಯಿಂದ ನಕಾರಾತ್ಮಕ ಕರ್ಮಗಳ ಹೊರೆಯನ್ನು
ಕಡಿಮೆ ಮಾಡಿಕೊಳ್ಳುತ್ತಿದ್ದೀರಿ.

ಕರ್ಮಗಳ ನಿಯಮಗಳನ್ನು ಒಪ್ಪಿ ಬದುಕಿ.
ನಿಮ್ಮ ಕರ್ಮಕ್ಕೆ ನೀವು ಒಪ್ಪಿಸಿಕೊಳ್ಳಿ.

ನಿಮ್ಮ ಕರ್ಮಗಳು ನಿಮ್ಮನ್ನು ಬೆನ್ನಟ್ಟಿ ಬರುತ್ತವೆ ಎಂಬುದನ್ನು ತಿಳಿಯಿರಿ ಮತ್ತು ಆದಷ್ಟೂ
ಸಕಾರಾತ್ಮಕವಾದ ಕರ್ಮವನ್ನು ನಿರ್ಮಿಸಲು ನಿರಂತರವಾಗಿ ಪ್ರಯತ್ನಿಸುತ್ತಿರಿ.

# 6

# ಕರ್ಮ, ಸಾವು ಮತ್ತು ಪುನರ್ಜನ್ಮ

ಕರ್ಮವು ದೇಹಕ್ಕಂಟ್ಟಿದ್ದಲ್ಲ ಎಂಬ ವಿಚಾರವು ಬಹಳ ಸರಳವಾದುದಾದರೂ ಅದನ್ನು ಅರ್ಥಮಾಡಿಕೊಳ್ಳದೆ ನಾವು ಅಜ್ಞಾನದಲ್ಲಿ ಬದುಕುತ್ತೇವೆ. ನಾವು ನಮ್ಮ ದೇಹ, ಮನಸ್ಸು ಮತ್ತು ಆತ್ಮದ ಮೂಲಕ ಕರ್ಮವನ್ನು ಅನುಭವಿಸುತ್ತೇವೆ ಎಂದು ತಿಳಿದುಕೊಂಡಿದ್ದೇವೆ. ಆದರೆ ಮುಂದಿನ ಜನ್ಮದಲ್ಲಿನ ಕರ್ಮವನ್ನು ದೇಹವು ಅನುಭವಿಸಲಾಗುವುದಿಲ್ಲ, ಕಾರಣ, ಅದು ಮೃತಪಟ್ಟಿರುತ್ತದೆ. ಜೀವಂತವಿರುವಾಗ ಅದು ಮನಸ್ಸು ಕೊಂಡುತಂದಿರುವ ಪೂರ್ವಜನ್ಮದ ಕರ್ಮದ ಒಟ್ಟು ನಿಧಿಯನ್ನು ಅನುಭವಿಸುತ್ತದೆ. ಆದ್ದರಿಂದ ನಾವು ಕರ್ಮವನ್ನು ಅರ್ಥಮಾಡಿಕೊಳ್ಳುವ ಮುನ್ನ ಸಾವನ್ನು ಕುರಿತು ವಿಶ್ಲೇಷಿಸಬೇಕು.

ಕರ್ಮದ ನಿಯಮಗಳಿವೆ ಎಂಬುದನ್ನು ನಾವು ಚೆನ್ನಾಗಿಯೇ ತಿಳಿದುಕೊಂಡಿದ್ದೇವೆ. ಮತ್ತು ಅದನ್ನು ನಾವು ಮೀರಲಾಗುವುದಿಲ್ಲ ಎಂಬುದನ್ನೂ ತಿಳಿದುಕೊಂಡಿದ್ದೇವೆ. ನಾವು ಯಾರು ಕೂಡ ಮಾಡಿರುವ ಒಳ್ಳೆಯ ಮತ್ತು ಕೆಟ್ಟ ಕೃತ್ಯಗಳಿಂದ ತಪ್ಪಿಸಿಕೊಳ್ಳಲಾಗುವುದಿಲ್ಲ. ಕರ್ಮದ ಖಾತೆಯು ಸಾವಿನೊಂದಿಗೆ ಅಂತ್ಯವಾಗುವುದಿಲ್ಲ ಎಂಬುದನ್ನೂ ನಾವು ಬಲ್ಲೆವು. ಅದು ಜನ್ಮದಿಂದ ಜನ್ಮಕ್ಕೆ ಮುಂದುವರೆಯುತ್ತಲೇ ಇರುತ್ತದೆ. ದೇಹ ಮೃತಪಡುವುದಾದರೆ ಕರ್ಮ ಯಾರಿಗೆ ಸೇರಿದ್ದು? ಮನಸ್ಸು ಸೂಕ್ಷ್ಮವೂ ಅಗೋಚರವೂ ಆದುದು. ಹಾಗಿದ್ದರೆ ಅದು ಕರ್ಮವನ್ನು ಹೇಗೆ ಪಡೆದುಕೊಳ್ಳಬಲ್ಲದು? ದೇಹ ಮೃತಪಟ್ಟಿದೆ ಮತ್ತು ಅದಕ್ಕೆ ಬೆಂಕಿ

ಇಟ್ಟಾಗಿದೆ ಅಥವಾ ಮಣ್ಣು ಮಾಡಲಾಗಿದೆ. ಆದರೆ ಅದು ಸಾವಿನ ನಂತರವೂ ಕೂಡ ತನ್ನ ಕರ್ಮವನ್ನು ಕಳೆದುಕೊಳ್ಳಲಾಗುವುದಿಲ್ಲ. ಇದಕ್ಕಿರುವ ಒಂದೇ ಒಂದು ಸಾಧ್ಯತೆ ಎಂದರೆ ಪುನರ್ಜನ್ಮ.

ಈ ಪುನರ್ಜನ್ಮ ಪಡೆಯುವುದು ಯಾವುದು? ಬಹಳ ಸೂಕ್ಷ್ಮ ಸಾಧನವಾದ ಮನಸ್ಸು ಮತ್ತು ಅಹಂಗಳು ಮತ್ತೊಂದು ದೇಹದಲ್ಲಿ ಪುನರ್ಜನ್ಮ ಪಡೆಯುತ್ತವೆ. ಪುನರ್ಜನ್ಮವಾದಾಗ ಅದು ನಾವೇ ಆಗಿರುತ್ತೇವೆ- ನಮ್ಮ ಮನಸ್ಸು ಮತ್ತು ಅಹಂ. ಆದರೆ ಮತ್ತೊಂದು ದೇಹದಲ್ಲಿ ಮರುಹುಟ್ಟು ಪಡೆಯುತ್ತೇವೆ. ದೇಹ ಬದಲಾದರೂ ನಾವು ನಾವೇ ಆಗಿರುತ್ತೇವೆ. ನಾವು ಉಡುಗೆಗಳನ್ನು ಬದಲಿಸಬಹುದು. ಆದರೆ ದೇಹ ನಮ್ಮದೇ ಆಗಿರುತ್ತದೆ. ಇದೂ ಕೂಡ ಹಾಗೆಯೆ ಉಡುಪು ಬದಲಿಸಿದಂತೆ. ನಾವು ಗಳಿಸಿರುವ ಕರ್ಮವು ಅದರ ಪ್ರಾರಂಭಿಕ ಮೊತ್ತದೊಂದಿಗೆ ನಮ್ಮ ಒಟ್ಟು ಕರ್ಮದ ನಿಧಿಗೆ ರವಾನೆಯಾಗುತ್ತದೆ. ಇದು ನಮ್ಮ ಕರ್ಮದ ಉಗ್ರಾಣವಾಗಿದೆ.

ಕರ್ಮವು ಈ ಕೆಳಗಿನಂತೆ ಕಾರ್ಯನಿರ್ವಹಿಸುತ್ತದೆ. ನಾವು ಮತ್ತೆ ಹುಟ್ಟುವ ಮುನ್ನ ಮುಂದಿನ ಜನ್ಮಕ್ಕೆ ಸಿದ್ಧತೆಯನ್ನು ಮಾಡಿಕೊಳ್ಳುತ್ತೇವೆ. ಕೆಲವರು ಈ ಸೂಕ್ಷ್ಮವಾದ ದೇಹವು ಪರಲೋಕಕ್ಕೆ ಹೋಗಿ ಮತ್ತೆ ಇಹಲೋಕಕ್ಕೆ ಬಂದು, ಪುನಃ ಜೀವ ತಳೆಯುತ್ತದೆ ಎಂದು ನಂಬಿದ್ದಾರೆ. ಮತ್ತೆ ಕೆಲವರು ಮನಸ್ಸು ವಿನಾಕಾರಣ ಲೋಕವನ್ನೆಲ್ಲಾ ಸುತ್ತಾಡಿ ಕರ್ಮದ ಫಲ ಮತ್ತು ಶಾಪಗಳನ್ನು ಅನುಭವಿಸುತ್ತದೆ ಎಂದು ನಂಬಿಕೊಂಡಿದ್ದಾರೆ. ಆದರೆ ಒಂದು ಜೀವದಿಂದ ಮತ್ತೊಂದು ಜೀವಕ್ಕೆ ರವಾನೆಯಾಗುತ್ತಿರುವವರಿಗೆ ದೇಹವಾಗಲಿ, ಪಂಚೇದ್ರಿಯಗಳಾಗಲಿ ಇರುವುದಿಲ್ಲ ಎಂಬ ಕಾರಣಕ್ಕೆ ಮೇಲಿನದನ್ನು ಹಲವರು ಪ್ರಶ್ನಿಸುತ್ತಾರೆ. ಹಾಗಾದರೆ ಸೂಕ್ಷ್ಮವಾದ ದೇಹವು ಅನುಭವಿಸುವುದಾದರೂ ಹೇಗೆ? ಸತ್ಯ

ಅದೇನೇ ಇರಲಿ, ಈ ಯಾವ ತತ್ವಗಳೂ ಅಂತಿಮವಾದ ಫಲಿತಾಂಶವನ್ನೇನೂ ಬದಲಿಸುವುದಿಲ್ಲ. ಹಿಂದಿನ ಜನ್ಮದ ಅಥವಾ ಜನ್ಮಗಳ ಕರ್ಮವು ಮನಸ್ಸು ಮತ್ತು ಅಹಂನ ಮೂಲಕ ಹೊಸ ಗರ್ಭದಲ್ಲಿ ಪುನರ್ಜನ್ಮ ಪಡೆದು ತನ್ನ ಹಿಂದಿನ ಎಲ್ಲಾ ಕರ್ಮವನ್ನು ಹೊತ್ತುಕೊಂಡು, ಹೊಸ ಬದುಕನ್ನು ಪ್ರಾರಂಭಿಸುತ್ತದೆ.

ನಾವು ಜೀವತಳೆಯುವ ದೇಹ ಅಪ್ರಸ್ತುತ. ಅದು ನೋವು ನಲಿವನ್ನು ಅನುಭವಿಸುವ ಒಂದು ಸಾಧನ ಅಷ್ಟ. ದೇಹವು ನೋವನ್ನು ಅನುಭವಿಸುವಂತೆ ಕಂಡರೂ ನಿಜವಾಗಿಯೂ ಕರ್ಮದ ನೋವು ದುಃಖದುಮ್ಮಾನಗಳನ್ನು ಹೊಸ ದೇಹದ ಮೂಲಕ ಅನುಭವಿಸುವುದು ಮನಸ್ಸು ಮತ್ತು ಅಹಂ. ಕರ್ಮದ ಒಟ್ಟು ನಿಧಿಯಿಂದ ಕೇವಲ ಒಂದು ಭಾಗವನ್ನು ಮಾತ್ರ ಮುಂದಿನ ಜನ್ಮಕ್ಕೆ ಕೊಂಡೊಯ್ಯಲಾಗುತ್ತದೆ. ನಿಧಿಯಲ್ಲಿ ಒಂದಷ್ಟು ಭಾಗವನ್ನು ಉಳಿಸಿಕೊಂಡು ಅದನ್ನು ಹೊಸ ದೇಹದ ಮೂಲಕ ಪ್ರಕಟಗೊಳಿಸಲಾಗುತ್ತದೆ. ಹಾಗಾಗಿ ನಾವು ಹುಟ್ಟಿದಾಗ ಕರ್ಮದ ಪ್ರಾರಂಭಿಕ ಮೊತ್ತವನ್ನು ಹೊತ್ತುಕೊಂಡೇ ಹುಟ್ಟುತ್ತೇವೆ ಮತ್ತು ಒಳ್ಳೆಯ ಕರ್ಮಗಳಿಗೆ ಉತ್ತಮ ಫಲಗಳನ್ನೂ ಕೆಟ್ಟ ಕರ್ಮಗಳಿಗೆ ಕೆಟ್ಟ ಫಲಗಳನ್ನೂ ಅನುಭವಿಸುತ್ತೇವೆ.

ನಾವು ಹುಟ್ಟಿದಾಗ ಕರ್ಮವನ್ನು ನಿರ್ಮಿಸುವುದಿಲ್ಲ. ಕಾರಣ, ನಾವು ಮಕ್ಕಳಾದ್ದರಿಂದ ಮತ್ತು ಮುಗ್ಧರಾಗಿರುವುದರಿಂದ ನಮ್ಮ ಸುತ್ತಲಿನ ಜಗತ್ತಿನ ಬಗ್ಗೆ ನಾವು ಏನನ್ನೂ ತಿಳಿದಿರುವುದಿಲ್ಲ. ನಮಗೆ ಜೀವನ ಅರ್ಥವಾಗತೊಡಗಿದೊಡನೆ ನಾವು ನಮ್ಮ ಕರ್ಮವನ್ನು ನಿರ್ಮಿಸತೊಡಗುತ್ತೇವೆ. ಕೆಲವೊಮ್ಮೆ ಚಿಕ್ಕ ಮಕ್ಕಳು ಕಷ್ಟಪಡುವುದನ್ನು ನೋಡಿ ಅವರು ತಮ್ಮ ಹಿಂದಿನ ಜನ್ಮದ ನಕಾರಾತ್ಮಕ ಕರ್ಮವನ್ನು ತೊಡೆದುಕೊಳ್ಳುತ್ತಿದ್ದಾರೆಂದು ಹೇಳಲಾಗುತ್ತದೆ. ಈ ತೊಡೆದುಕೊಳ್ಳುವಿಕೆ ಕೇವಲ ಮಕ್ಕಳಿಗಷ್ಟೇ ಸೀಮಿತವಲ್ಲ ಅವರ

ತಂದೆ-ತಾಯಿಗಳಿಗೂ ಕೂಡ. ನಾವು ಬೆಳೆಯುತ್ತಿದ್ದಂತೆ ಕರ್ಮವು ಪೂರ್ಣ ಪ್ರಮಾಣದಲ್ಲಿ ಕೆಲಸ ಮಾಡಲು ತೊಡಗುತ್ತದೆ. ಹಳೆಯ ಕರ್ಮವನ್ನು ತೊಡೆದುಕೊಳ್ಳುತ್ತಾ ಹೊಸ ಕರ್ಮವನ್ನು ನಿರ್ಮಿಸುತ್ತದೆ. ನಾವು ಸಾವನ್ನಪ್ಪಿದಾಗ ನಾವು ಈ ಜನ್ಮದಲ್ಲಿ ಗಳಿಸಿರುವ ಕರ್ಮವನ್ನು ಮುಂದಿನ ಜನ್ಮಕ್ಕೆ ಕೊಡೊಯ್ಯಲಾಗುತ್ತದೆ. ಕರ್ಮದ ಹುಟ್ಟು- ಸಾವಿನ ಚಕ್ರವು ಮತ್ತೆ-ಮತ್ತೆ ಉರುಳುತ್ತಿರುತ್ತದೆ. ಕಟ್ಟಕಡೆಯಲ್ಲಿ ನಾವು ಈ ಕರ್ಮದ ಚಕ್ರದಿಂದ ಬಿಡಿಸಿಕೊಂಡು ಸೃಷ್ಟಿಯಲ್ಲಿ ಲೀನವಾಗುತ್ತೇವೆಂದು ಹೇಳಲಾಗುತ್ತದೆ.

ಇವೆಲ್ಲವೂ ಬಹಳ ಸರಳವೆನ್ನಿಸಬಹುದು. ಆದರೆ, ನಮ್ಮ ದೇಹ ನಮ್ಮದಲ್ಲ; ದೇಹಕ್ಕೆ ಸಾವುಂಟು ಆದರೆ ನಮಗೆ ಸಾವಿಲ್ಲ; ಸಾವು ಕೊನೆಯಲ್ಲ. ಅದು ನಾವು ನಡೆಯುವ ಹಾದಿಯಲ್ಲಿನ ಒಂದು ತಿರುವು ಮಾತ್ರ ಎಂಬ ಸತ್ಯವನ್ನು ಅರಿಯುವುದು ಬಹಳ ಮುಖ್ಯ. ಇವು ಸರಳವಾಗಿ ಕಂಡರೂ ನಮ್ಮ ಮನಸ್ಸೇ ನಾವು ಕರ್ಮವನ್ನು ಮೀರಿ ಹೋಗಲು ಅಡ್ಡಿಯಾಗಿದೆ. ಕೆಲವರು ದೇಹ ತಮಗೆ ಸೇರಿದ್ದು ಎಂದು ತಿಳಿದುಕೊಂಡವರು ಕರ್ಮದ ನಿಯಮಗಳನ್ನು ಗಂಭೀರವಾಗಿ ಪರಿಗಣಿಸುವುದಿಲ್ಲ. ಕಾರಣ ಅವರು ದೇಹ ನಶಿಸಿಹೋಗಿ ಬೆಂಕಿಯಲ್ಲಿ ಬೆಂದು ಹೋಗುವುದನ್ನು ನೋಡಿರುತ್ತಾರೆ. ಅದು ದೇಹದ ಅಂತ್ಯವೆಂದು ತಿಳಿಯುತ್ತಾರೆ. ಆದರೆ ಇದೊಂದು ತಪ್ಪು ತಿಳಿವಳಿಕೆ. ನಮ್ಮ ದೇಹ ಸತ್ತರೂ ಕರ್ಮವು ನಮ್ಮ ಮುಂದಿನ ಜನ್ಮಕ್ಕೆ ಮುಂದುವರಿಯುತ್ತದೆ. ಇದನ್ನು ಅರಿತವರಷ್ಟೇ ನೈತಿಕತೆಯಿಂದ ಬದುಕಲು ಪ್ರಯತ್ನಿಸುತ್ತಾರೆ. ಇನ್ನುಳಿದವರು ತಮ್ಮ ಜೀವನದಲ್ಲಿ ಸುಖಪಟ್ಟೆವೆಂದುಕೊಂಡರೂ ಊಹಿಸಲೂ ಸಾಧ್ಯವಾಗದಷ್ಟು ಕಷ್ಟ, ನೋವುಗಳನ್ನು ಅನುಭವಿಸುತ್ತಾರೆ. ಅವರು ಈ ಜೀವನದಲ್ಲಿ ಕಷ್ಟಪಡುವುದಷ್ಟೇ ಅಲ್ಲದೇ ಮುಂದಿನ ಜನ್ಮದಲ್ಲಿ ಕೂಡ ಕಷ್ಟದ ಬೀಜಗಳನ್ನು ಬಿತ್ತಿರುತ್ತಾರೆ.

ಕರ್ಮದ ನಿಯಮಗಳನ್ನು ಅರಿತವರು ಕರ್ಮವು ಮತ್ತೆ-ಮತ್ತೆ ಜನ್ಮ ತಾಳುವಂತೆ ಮಾಡುತ್ತದೆ ಮತ್ತು ಇದು ಎಂದೂ ಕೊನೆಯಾಗುವುದಿಲ್ಲ ಎಂಬುದನ್ನು ತಿಳಿದಿರುತ್ತಾರೆ. ಇದು ಒಂದು ಬಾಗಿಲಿನಿಂದ ಹೊರಹೋಗಿ ಮತ್ತೊಂದು ಬಾಗಿಲಿನಿಂದ ಒಳಬಂದಂತೆ. ಕರ್ಮವಿರುವತನಕವೂ ನಾವು ಮತ್ತೆ-ಮತ್ತೆ ಹುಟ್ಟುತ್ತಲೇ ಇರುತ್ತೇವೆ. ನಾವು ಜೀವಂತವಾಗಿರುವ ಕಾಲವಷ್ಟೂ ಕರ್ಮವನ್ನು ನಿರ್ಮಿಸಿರುತ್ತೇವೆ.

ಬುದ್ಧಿವಂತರಾದವರು ದೇಹ ಸಾಯುತ್ತದೆ ಎಂಬುದನ್ನು ತಿಳಿದುಕೊಂಡಿರುತ್ತಾರೆ. ಅವರು ಹೊಸ ದೇಹದಲ್ಲಿ ಮರುಹುಟ್ಟಿ ತಮ್ಮ ಹಿಂದಿನ ಜನ್ಮದ ಫಲಗಳನ್ನು ಅನುಭವಿಸುತ್ತಾರೆ. ಇದನ್ನು ಅರಿತುಕೊಳ್ಳುವುದು ಮುಖ್ಯವಾದರೂ ಇದಷ್ಟೇ ಸಂಪೂರ್ಣವಾದ ಅರಿವು ಅಲ್ಲ. ಸತ್ಯವನ್ನು ಅರಸುವವರು ಒಂದು ಸರಳ ಪ್ರಶ್ನೆಯನ್ನು ಕೇಳಿಕೊಳ್ಳುತ್ತಾರೆ. ನಾವು ಸಾಯುತ್ತೇವೆ, ಮತ್ತೆ ಹುಟ್ಟುತ್ತೇವೆ, ಮತ್ತೆ ಸಾಯುತ್ತೇವೆ, ಮತ್ತೆ ಹುಟ್ಟುತ್ತೇವೆ. ಆದರೆ ಇದು ಎಷ್ಟು ಕಾಲ ನಡೆಯುತ್ತದೆ? ಎಂದು. ಈ ಹುಟ್ಟು-ಸಾವಿನ ಚಕ್ರ ಎಂದು ಕೊನೆಗೊಳ್ಳುತ್ತದೆ ಎಂದು. ಈ ಕಷ್ಟ, ನೋವು, ದುಃಖ ಇವೆಲ್ಲವುಗಳಿಂದ ನಾವು ಮುಕ್ತರಾಗುವುದು ನಾವು ಕರ್ಮವನ್ನು ಕಳಚಿಕೊಂಡಾಗ. ಅದು ಸಾಧ್ಯವೇ?

**ಕರ್ಮ ಮತ್ತು ಪುನರ್ಜನ್ಮ ಒಂದಕ್ಕೊಂದು ಸಂಬಧಿಸಿವೆ**
**ಎಂಬುದನ್ನು ನಾವು ತಿಳಿದುಕೊಳ್ಳಬೇಕು.**
**ನಾವು ಸತ್ತ ನಂತರವೂ ನಮ್ಮ ಕ್ರಿಯೆಗಳಿಗೆ ನಾವು ಪ್ರತಿಫಲಗಳನ್ನು ಅನುಭವಿಸುತ್ತೇವೆ.**
**ನಾವು ಸತ್ತಾಗ ಕರ್ಮಗಳು ಮರೆಯಾಗುತ್ತವೆ,**
**ಮತ್ತೆ ಹೊಸ ದೇಹದಲ್ಲಿ ಪ್ರಕಟಗೊಳ್ಳುತ್ತವೆ.**

# ಸಾರಾಂಶ:

# ಕರ್ಮ, ಸಾವು ಮತ್ತು ಪುನರ್ಜನ್ಮ

ಸತ್ತ ಕೂಡಲೇ ಕರ್ಮದ ಖಾತೆ ಮುಗಿಯುವುದಿಲ್ಲ.
ಅದು ಜನ್ಮಜನ್ಮಾಂತರಗಳಿಗೆ ಮುಂದುವರಿಯುತ್ತದೆ.

ಸತ್ತಾಗ ದೇಹ ಮೃತಪಡುತ್ತದೆ ಆದರೆ ಮನಸ್ಸು ಮತ್ತು
ಅಹಂ ಕರ್ಮದೊಂದಿಗೆ ಪುನರ್ಜನ್ಮ ಪಡೆಯುತ್ತವೆ.

ಸಾವು ದಾರಿಯ ಕೊನೆಯಲ್ಲ, ಅದು ಕೇವಲ ಒಂದು ತಿರುವು ಮಾತ್ರ.

ನಮ್ಮ ಕರ್ಮಗಳ ಕಾರಣದಿಂದಾಗಿ ನಾವು ಮತ್ತೆ-ಮತ್ತೆ ಹುಟ್ಟುತ್ತೇವೆ.
ಈ ಚಕ್ರ ಮುಂದುವರಿಯುತ್ತಲೇ ಇರುತ್ತದೆ.

ಕರ್ಮ ಇರುವವರೆಗೂ ನಾವು ಪುನರ್ಜನ್ಮ ಪಡೆಯುತ್ತಲೇ ಇರುತ್ತೇವೆ.
ನಾವು ಜೀವಂತ ಇರುವವರೆಗೂ ಕರ್ಮವನ್ನು ನಿರ್ಮಿಸುತ್ತಲೇ ಇರುತ್ತೇವೆ.

# 7

# ಕರ್ಮದಿಂದ ಬಿಡುಗಡೆ

ನಾವು ಕರ್ಮದಿಂದ ತಪ್ಪಿಸಿಕೊಳ್ಳಲಾರೆವು, ಹಾಗಾಗಿ ಅದರಿಂದ ಬಿಡುಗಡೆ ಹೊಂದುವುದು ಸಾಧ್ಯವಿಲ್ಲವೆಂದು ಜನರು ಸಾಮಾನ್ಯವಾಗಿ ತಿಳಿದುಕೊಂಡಿರುತ್ತಾರೆ. ಅದು ಖಂಡಿತವಾಗಿಯೂ ನಿಜ. ನಾವು ಎಲ್ಲಿಯವರೆಗೆ ನಮ್ಮನ್ನು ದೇಹ ಮತ್ತು ಮನಸ್ಸಿನಲ್ಲಿ ಬಂಧಿಸಿಕೊಂಡಿರುತ್ತೇವೆಯೋ ಅಲ್ಲಿಯವರೆಗೆ ನಮಗೆ ಕರ್ಮದಿಂದ ಬಿಡುಗಡೆ ಇರುವುದಿಲ್ಲ.

ಕರ್ಮದಿಂದ ಬಿಡುಗಡೆ ಹೊಂದುವ ಒಂದೇ ಒಂದು ಮಾರ್ಗವೆಂದರೆ ಅದು  ಅಹಂ ಅನ್ನು ಕಳೆದುಕೊಂಡು ನಿಜವಾದ ಅರಿವನ್ನು ಪಡೆದುಕೊಳ್ಳುವುದೊಂದೇ ಆಗಿದೆ. ಈ ದೇಹ ಮತ್ತು ಮನಸ್ಸುಗಳು ನಮ್ಮವಲ್ಲ. ಹಾಗಾಗಿ ಕ್ರಿಯೆಗಳು ಕೂಡ ನಮ್ಮವಲ್ಲ ಎಂಬುದನ್ನು ನಾವು ಎಂಬುದನ್ನು ನಾವು ಅರಿತುಕೊಳ್ಳುತ್ತೇವೆ. ಕ್ರಿಯೆಯಲ್ಲಿ ತೊಡಗಿದ್ದರೂ ಕ್ರಿಯೆಗಳು ನಮಗೆ ಸೇರಿದವಲ್ಲ ಎಂದು ತಿಳಿದರೆ ಕರ್ಮಗಳು ನಮಗೆ ಹೇಗೆ ಸೇರುತ್ತವೆ? ಈ ಮೇಲಿನದ್ದು ಓದಲು ಬಹಳ ಸರಳವಾಗಿ ಕಾಣಬಹುದು, ಆದರೆ ಅದನ್ನು ಅರಿತುಕೊಳ್ಳುವುದು ಅಷ್ಟು ಸರಳವಲ್ಲ. ಆದ್ದರಿಂದ ಸತ್ಯವನ್ನರಸುವ ಮುನ್ನ ನಾವು ಸತ್ಯವನ್ನು ಕುರಿತು ಕೊಂಚ ಚಿಂತಿಸಬೇಕಾಗುತ್ತದೆ.

ನಾವು ಯಾರು? ಸಾಮಾನ್ಯ ತಿಳಿವಳಿಕೆಯೆಂದರೆ ನಾವು ಎಂದರೆ ದೇಹ, ಮನಸ್ಸು ಮತ್ತು

ಆತ್ಮ. ಅಂದರೆ ಇದರ ಅರ್ಥವೇನು? ಇದನ್ನು ಜನರು ಭಿನ್ನಭಿನ್ನವಾಗಿ ಅರ್ಥಮಾಡಿಕೊಳ್ಳುತ್ತಾರೆ. ಆದರೆ, ಹೆಚ್ಚುಕಡಿಮೆ ಎಲ್ಲಾ ವ್ಯಕ್ತಿಗಳೂ ಅವರು ತಾವು ಯಾರೆಂದುಕೊಂಡಿರುತ್ತಾರೋ ಅವರೇ ಆಗಿರುತ್ತಾರೆ ಎಂದು ತಿಳಿದಿರುತ್ತಾರೆ. ಅವರಿಗೊಂದು ಹೆಸರು, ಕುಟುಂಬ, ವೃತ್ತಿ, ದೇಶ, ಸಂಬಂಧಗಳು ಮತ್ತು ಆಸ್ತಿ ಇವೆಲ್ಲವೂ ಇರುತ್ತವೆ. ಇವೆಲ್ಲವೂ ಒಬ್ಬ ವ್ಯಕ್ತಿಯನ್ನು ಅವನ ಜೀವಿತದ ಕಾಲದಲ್ಲಿ ಅವನೆಂದು ಗುರುತಿಸುತ್ತವೆ.

ನಮ್ಮಲ್ಲಿ ಇದು ಎಷ್ಟು ಆಳವಾಗಿ ಬೇರೂರಿದೆಯೆಂದರೆ ನಾವು ಬೇರೆ ರೀತಿಯಲ್ಲಿ ಯೋಚಿಸುವುದೇ ಇಲ್ಲ. ನಾವು ಯಾರು? ಎಲ್ಲಿಂದ ಬಂದೆವು? ಸಾವಿನ ನಂತರ ಎಲ್ಲಿಗೆ ಹೋಗುತ್ತೇವೆ? ಎಂಬ ಸತ್ಯವನ್ನು ನಾವು ವಿಶ್ಲೇಶಿಸಲು ಸೋತಿದ್ದೇವೆ. ನಾವು ಅಜ್ಞಾನಿಗಳಾಗಿರುವುದರಿಂದ ಕರ್ಮದ ಚಕ್ರ ಉರುಳುತ್ತಲೇ ಇರುತ್ತದೆ ಎಂಬ ಸತ್ಯವನ್ನು ತಿಳಿಯದೆ ಹೂಗುತ್ತೇವೆ.

ನಿಜ, ನಮಗೊಂದು ದೇಹ, ಕೈಗಳು, ಕಾಲುಗಳು, ತಲೆ ಮತ್ತು ಹೃದಯಗಳಿವೆ ಎಂದು ನಮಗೆ ಗೊತ್ತು. ಅವು ನಮ್ಮ ಹತ್ತಿರ ಕಾರು ಇದ್ದಂತೆ. ನಮ್ಮ ಬಳಿ ಅಂಗಿ ಇದ್ದಂತೆ. ಆದರೆ ನಾವು ಕಾರು, ಅಂಗಿ ಆಗುವುದಿಲ್ಲ. ಅಲ್ಲವೇ? ಹಾಗೆಯೇ ನಮಗೆ ದೇಹವಿದ್ದರೂ ನಾವೇ ಆ ದೇಹ ಆಗುವುದಿಲ್ಲ. ಭೂಮಿಯ ಮೇಲೆ ಈ ದೇಹವು ಜೀವ ತಳೆದಾಗ ನಾವು ಎಂಬ ಅಲೌಕಿಕ ಶಕ್ತಿಯ ಸುತ್ತ ರೂಪುಗೊಂಡಿರುತ್ತದೆ. ಅನೇಕ ವರ್ಷಗಳ ದೇಹ ಸತ್ತ ನಂತರ ದೇಹದೊಳಗಿನ ಪ್ರಾಣವು ಹೊರಟು ಹೋಗುತ್ತದೆ. ಇದು ನಮಗೆ ಗೊತ್ತು. ಇದನ್ನು ನಾವು ಪ್ರತಿದಿನವೂ ನೋಡುತ್ತಿರುತ್ತೇವೆ. ಆದರೂ ನಾವು ದೇಹವಲ್ಲವೆಂಬ ವಿಚಾರವನ್ನು ತಿಳಿದುಕೊಳ್ಳುವುದಿಲ್ಲ.

ನಮ್ಮ ಮನಸ್ಸು, ನಾವೇ ಆ ಮನಸ್ಸು ಎಂದು ನಂಬಿಸುತ್ತದೆ. ಅದು ನಾವು ವಿಚಾರ ಮಾಡುವಂತೆ ಮಾಡುತ್ತದೆ ಮತ್ತು ಈ ವಿಚಾರಗಳು ನಮನ್ನು ಕ್ರಿಯೆಯಲ್ಲಿ ತೊಡಗುವಂತೆ ಮಾಡುತ್ತವೆ. ಕರ್ಮದ ನಿಯಮಗಳನ್ನು ಒಪ್ಪುವವರೂ ಕೂಡ ದೇಹ ತಮ್ಮದಲ್ಲವೆಂದು ತಿಳಿದಿರುತ್ತಾರೆ. ಆದರೆ ಮನಸ್ಸು ತಮ್ಮದಲ್ಲವೆಂದು ಅವರಿಗೆ ತಿಳಿದಿರುವುದಿಲ್ಲ. ದೇಹ ಸಾಯುತ್ತದೆ ಮತ್ತು ನಶಿಸಿ ಹೋಗುತ್ತದೆ. ಆದರೆ ಮನಸ್ಸು ಜೀವಂತವಾಗಿದ್ದು ಕರ್ಮವನ್ನು ಸಂಗ್ರಹಿಸುತ್ತಿರುತ್ತದೆ. ಈ ತತ್ವವನ್ನು ಒಪ್ಪುವವರು ದೇಹ ಬದಲಾಗುತ್ತಿರುತ್ತದೆ ಆದರೆ ನಮ್ಮ ಮನಸ್ಸು ಬದಲಾಗುವುದಿಲ್ಲ ಎಂದು ನಂಬುತ್ತಾರೆ. ಮನಸ್ಸು ಕರ್ಮವನ್ನು ಒಟ್ಟುಗೂಡಿಸಿಕೊಂಡು ಮತ್ತೆ-ಮತ್ತೆ ಜೀವತಳೆಯುತ್ತದೆ. ದೇಹ ಸತ್ತರೂ ಮನಸ್ಸು ಜೀವಂತವಾಗಿರುತ್ತದೆ, ಮತ್ತಷ್ಟು ಕರ್ಮವನ್ನು ಗಳಿಸುತ್ತದೆ.

ನಿಮಗೆ ಆಶ್ಚರ್ಯವೆನಿಸಬಹುದು, ನಾವು ಮನಸ್ಸನ್ನು ವಿಶ್ಲೇಶಿಸಿದರೆ ನಿಜವಾಗಿಯು ಮನಸ್ಸೆಂಬುದು ಇಲ್ಲವೆಂದು ತಿಳಿಯುತ್ತದೆ. ಕೆಲಕಾಲ ಸುಮ್ಮನೆ ಕುಳಿತುಕೊಂಡು ನಿಮ್ಮ ಮನಸ್ಸನ್ನು ಅರಿಯಲು ಪ್ರಯತ್ನಿಸಿ. ಅದು ಎಲ್ಲಿದೆ? ನಿಮ್ಮ ವಿಚಾರಗಳು ನಿಮ್ಮ ಮೆದುಳಿನಲ್ಲಿ ಹುಟ್ಟುತ್ತವೆ. ಆದರೆ ನಿಮ್ಮ ಮನಸ್ಸು ನಿಮ್ಮ ದೇಹದ ಪ್ರತಿ ಜೀವಕೋಶದಲ್ಲೂ ಇರುವಂತೆ ಕಂಡುಬರುತ್ತದೆ. ನೀವು ನಿಮ್ಮನ್ನು ಸುಲಿದರೆ ಚರ್ಮ, ಮಾಂಸಖಂಡಗಳು, ರಕ್ತ, ಎಲುಬುಗಳು ಮತ್ತು ಮೂಳೆಮಜ್ಜೆಯನ್ನು ಕಾಣಬಹುದೆ ಹೊರತು ನಿಮ್ಮ ಮನಸ್ಸನ್ನಲ್ಲ. ನಿಮ್ಮ ಮೆದುಳು, ಹೃದಯ, ಶ್ವಾಸಕೋಶ ಮತ್ತು ಮೂತ್ರಪಿಂಡಗಳನ್ನು ಇನ್ನಿತರ ಅಂಗಾಗಗಳ ಜೊತೆ ಗುರುತಿಸಬಹುದು. ಆದರೆ, ನಿಮ್ಮ ಮನಸ್ಸನ್ನು ಗುರುತಿಸಲಾಗುವುದಿಲ್ಲ. ಮೆದುಳಿನ ಕೆಲಸ ವಿಚಾರ ಮಾಡುವುದಾದರೆ, ಬಾಯಿಯ ಕೆಲಸ ಮಾತನಾಡುವುದು. ಕಾಲುಗಳ ಕೆಲಸ ನಡೆದಾಡುವುದು. ಮನಸ್ಸು ತನ್ನದೇ ಆದ ಅಸ್ತಿತ್ವವನ್ನು ಹೊಂದಿರುವುದಿಲ್ಲ. ಮನಸ್ಸಿಗೆ ಅಸ್ತಿತ್ವವೇ ಇಲ್ಲದಿದ್ದರೆ ಸತ್ತ ನಂತರ ಮತ್ತೆ

ಪುನರ್ಜನ್ಮ ಪಡೆದು ಹಿಂದಿನ ಕರ್ಮವನ್ನು ಮುಂದುವರೆಸುವ ಪ್ರಶ್ನೆಯಾದರೂ ಎಲ್ಲಿ ಬರುತ್ತದೆ? ಆದರೆ ಇದೊಂದು ಭೂಮಿಯ ಮೇಲೆ ನಡೆಯುತ್ತಿರುವ ಬೃಹತ್ ಮಾಯೆ ಅಷ್ಟೆ.

ನಾವು ದೇಹವಾಗಲಿ ಅಥವಾ ಮನಸ್ಸಾಗಲಿ ಅಲ್ಲ, ಪ್ರಾಣ ಅಥವಾ ಆತ್ಮವೆಂಬ ಸತ್ಯವನ್ನು ತಿಳಿಯಬೇಕಾದರೆ ನಾವು ಮತ್ತಷ್ಟು ಆಳವಾಗಿ ಅರಿಯಬೇಕಾಗಿದೆ. ಪ್ರಾಣವು ನಮ್ಮನ್ನು ಉಸಿರಾಟದ ಮೂಲಕ ಜೀವಂತವಿರಿಸುತ್ತದೆ. ಪ್ರಾಣವು ಹಾರಿಹೋದಾಗ ದೇಹ ಮೃತಪಡುತ್ತದೆ. ಇದು ಯಾವುದೋ ಆಧ್ಯಾತ್ಮದ ಮರುಳು ಮಾತಲ್ಲ. ವಿಜ್ಞಾನದಿಂದ ನಿರೂಪಿತವಾದ ವಿಚಾರ ಕೂಡ. ಹಲವಾರು ದಶಕಗಳ ಹಿಂದೆ ವಿಜ್ಞಾನಿಗಳು ಶಕ್ತಿಯನ್ನು ಸೃಷ್ಟಿಲಾಗಲಿ ಅದನ್ನು ಧ್ವಂಸ ಮಾಡಲಾಗಲಿ ಸಾಧ್ಯವಿಲ್ಲ, ಆದರೆ ಶಕ್ತಿಯು ಒಂದು ರೂಪದಿಂದ ಮತ್ತೊಂದು ರೂಪಕ್ಕೆ ಮಾರ್ಪಡುತ್ತದೆ ಎಂಬ ಒಂದು ನಿಯಮವನ್ನು ಕಂಡುಹಿಡಿದರು. ಆ ಕಾಲದಲ್ಲೇ ಈ ತತ್ವವನ್ನು ಒಪ್ಪಿಕೊಳ್ಳಲಾಯಿತಾದರೂ ಇತ್ತೀಚೆಗಷ್ಟೇ ಇದರ ದೂರಗಾಮಿ ಪರಿಣಾಮಗಳು ಗೋಚರಿಸತೊಡಗಿವೆ. ಪ್ರಯೋಗಾಲಯಗಳಲ್ಲಿ ವಿಜ್ಞಾನಿಗಳು ಅಣುವಿಗಿಂತ ಚಿಕ್ಕದಾದ ಪ್ರೋಟಾನ್, ನ್ಯೂಟ್ರಾನ್, ಎಲೆಕ್ಟ್ರಾನ್ ಕಣಗಳ ಬಗ್ಗೆ ಅಧ್ಯಯನಗಳನ್ನು ಕೈಗೊಂಡಿದ್ದಾರೆ. ಅವರು ಬಹಳ ಸುಕ್ಷ್ಮವಾದ ಸೂಕ್ಷ್ಮದರ್ಶಕದ ಮೂಲಕ ಕ್ವಾರ್ಕ್  ಎಂಬ ಒಂದು ಕಣ ಕಳೆದುಹೋದದ್ದರ ಬಗ್ಗೆ ಪ್ರಯೋಗಗಳನ್ನು ಕೈಗೊಂಡರು. ಅಧ್ಯಯನದ ಮೂಲಕ ಕಂಡುಬಂದ ವಿಚಾರಗಳು ಅವರನ್ನು ದಂಗುಬಡಿಸಿದವು. ಆ ಬಗ್ಗೆ ಚರ್ಚೆಗಳನ್ನು ಕೈಗೊಂಡರು. ಆದರೆ ಅದು ಬಹಳ ಕ್ಲಿಷ್ಟವಾಗಿಯೇನೂ ಇರಲಿಲ್ಲ. ಕಾರಣ ಈಗಾಗಲೆ ವಿಜ್ಞಾನ ಇದು ವಸ್ತುಶಕ್ತಿಯಾಗಿ ಮಾರ್ಪಡುತ್ತದೆ ಎಂಬ ಅಂಶವನ್ನು ವಿವರಿಸಿತ್ತು. ಇಲ್ಲಿ ಆಗಿದ್ದು ಕೂಡ ಇದೆ ಅವರು ತಾವು ಕಂಡದ್ದನ್ನು ದಾಖಲು ಮಾಡುತ್ತಿರಬೇಕಾದರೆ ಇದ್ದಕ್ಕಿದ್ದಂತೆ ಆ ಕಣಗಳು ಮತ್ತೆ ಕಾಣಿಸಿಕೊಂಡವು. ಇದನ್ನು ತರಂಗ-ಕಣಗಳ ದ್ವಂದವೆಂದು ಕರೆಯಲಾಗುತ್ತದೆ. ಅಂದರೆ

ಒಂದು ಕಣ ತರಂಗದ ರೂಪ ಪಡೆಯಬಹುದು, ಇಲ್ಲವೇ ತರಂಗವು ಕಣದ ರೂಪ ಪಡೆಯಬಹುದು. ಆದರೆ ಈ ವೈಜ್ಞಾನಿಕ ಸಂಶೋಧನೆಗೂ ಕರ್ಮಕ್ಕೂ ಎಲ್ಲಿಂದೆಲ್ಲಿಯ ಸಂಬಂಧ? ಸಂಬಂಧ ಇದೆ. ಅದೇಂದರೆ, ನಾವು ವಸ್ತುವಿನಂತೆ ಕಾಣಿಸಿಕೊಳ್ಳಬಹುದು, ಆದರೆ ನಿಜವಾಗಿಯೂ ನಾವು ಶಕ್ತಿಯ ರೂಪವಷ್ಟೆ ಎಂಬುದನ್ನು ವಿಜ್ಞಾನವೂ ಕೂಡ ಸಾಬೀತುಪಡಿಸುತ್ತದೆ. ನಾವು ಕೆವಲ ಸಹಸ್ರಾರು ಕೋಟಿ ಕಣಗಳು ಅಷ್ಟೆ. ನಾವು ಕೇವಲ ಶಕ್ತಿಯ ರೂಪ, ಪ್ರಾಣವು ಈ ಭೂಮಿಯ ಮೇಲೆ ದೇಹ ಮತ್ತು ಮನಸ್ಸಿನ ರೂಪವನ್ನು ಪಡೆಯುತ್ತದೆ.

ಶಕ್ತಿಯು ನಮ್ಮ-ನಿಮ್ಮ ರೂಪವನ್ನು ಹೇಗೆ ಪಡೆದುಕೊಳ್ಳುತ್ತದೆ? ನೀವು ಸಿನೆಮಾವನ್ನು ನೋಡಿರುತ್ತೀರಿ. ಸಿನೆಮಾದಲ್ಲಿ ಏನು ನಡೆಯುತ್ತದೆ? ಸಿನೆಮಾದಲ್ಲಿ ನಟಿಸುತ್ತಿರುವ ನಟರು ನಮ್ಮ ಮುಂದೆ ಪ್ರತ್ಯಕ್ಷ ನಟಿಸುತ್ತಿದ್ದಾರೆಯೇ? ಇಲ್ಲ. ಸಿನೆಮಾ ಥಿಯೇಟರಿನಲ್ಲಿ ಒಂದು ಪರದೆಯ ಮೇಲೆ ಶಕ್ತಿಯನ್ನು ಹರಿಸಿ, ಅದು ಚಿತ್ರವಾಗಿ ನಮ್ಮ ಮುಂದೆ ಮೂಡುತ್ತದೆಂದು ನಮಗೆ ತಿಳಿದಿದೆ. ಅದು ನಿಜವಲ್ಲ ಕೇವಲ ಪರದೆಯ ಮೇಲೆ ಮೂಡುತ್ತಿರುವ ಚಿತ್ರಗಳು ಅಷ್ಟೆ.

ಭೂಮಿಯ ಮೇಲಿನ ಮಾನವ ಕೂಡ ಇಂತಹ ಪರದೆಯ ಮೇಲೆ ಮೂಡುವ ಬಹಳ ಸೂಕ್ಷ್ಮ ರೀತಿಯ ಚಿತ್ರದಂತೆ. ಇತ್ತೀಚಿನ ದಿನಗಳಲ್ಲಿ ಸಿನೆಮಾವನ್ನು 3ಡಿ ಮತ್ತು ವರ್ಚುವಲ್ ರಿಯಾಲಿಟಿಗಳಂತಹ ಅತ್ಯಾಧುನಿಕ ಸಾಧನಗಳ ಮೂಲಕ ನಿಜಜೀವನದ ಅನುಭವಗಳನ್ನು ತೆರೆಯ ಮೇಲೆ ಮೂಡಿಸಬಹುದಾಗಿದೆ. ನಾವು ಸಿನೆಮಾ ನೋಡಿ ಸಂತೋಷಪಟ್ಟರೂ ನಮಗೆ ಈ ಭೂಮಿಯ ಮೇಲಿನ ಮಾನವನ ಬದುಕು ಸೃಷ್ಟಿಕರ್ತನು ನಿರ್ಮಿಸಿ, ನಿರ್ದೇಶಿಸಿರುವ ಮಾಯೆಯೆಂಬ ಶಕ್ತಿಯ ಮೂಲಕ ನಿಯಂತ್ರಣಗೊಂಡಿರುವ ತೆರೆಯಮೇಲೆ

ಮೂಡುವ ಅದ್ಭುತ ಸಿನೆಮಾ ಎಂದು ತಿಳಿಯುವುದಿಲ್ಲ. ನಾವು ಈ ದೇಹವನ್ನು ನಮ್ಮ ದೇಹ ಮತು ಮನಸ್ಸು ಎಂದು ಬಗೆದು ಅದೊಂದು ಮಾಯೆ ಎಂಬುದನ್ನು ಮರೆತುಬಿಡುತ್ತೇವೆ. ಹಾಗಾಗಿ ಕರ್ಮವನ್ನು ಹೊತ್ತುಕೊಳ್ಳುತ್ತೇವೆ. ಮತ್ತೆ-ಮತ್ತೆ ಹುಟ್ಟು-ಸಾವುಗಳ ಮೂಲಕ ಕಷ್ಟ, ನೋವುಗಳನ್ನು ಅನುಭವಿಸುತ್ತೇವೆ. ಈ ಸತ್ಯವನ್ನು ತಿಳಿದ ಕೆಲವೇ ಕೆಲವು ಮಂದಿ ಮಾತ್ರ ಈ ದೇಹವಾಗಲಿ, ಮನಸ್ಸಾಗಲಿ ನಮ್ಮದಲ್ಲವೆಂದು ತಿಳಿಯುತ್ತಾರೆ. ಆದ್ದರಿಂದ ಅವರು ಕರ್ಮದಿಂದ ಬಿಡುಗಡೆ ಹೊಂದುತ್ತಾರೆ.

ಅವರು ಕರ್ಮದಿಂದ ಹೇಗೆ ಬಿಡುಗಡೆ ಹೊಂದುತ್ತಾರೆ? ಕರ್ಮವು ದೇಹ ಮತ್ತು ಮಸ್ಸುಗಳಿಗೆ ಸಂಬಂಧಿಸಿದ್ದು. ಹಾಗಾಗಿ ಅವು ಕರ್ಮವನ್ನು ಒಟ್ಟುಗೂಡಿಸುವ ಪ್ರಶ್ನೆಯೇ ಏಳುವುದಿಲ್ಲ. ಈ ಸತ್ಯವನ್ನು ನಾವು ಅರಿತುಕೊಂಡರೆ ನಾವು ಈ ದೇಹವಾಗಲಿ, ಮನಸ್ಸಾಗಲಿ ಅಲ್ಲ, ಈ ಕ್ರಿಯೆಗಳು ನಮ್ಮವಲ್ಲ, ಈ ಕರ್ಮವೂ ನಮ್ಮದಲ್ಲ, ಹೊಸ ಕರ್ಮಗಳನ್ನು ನಾವು ಗಳಿಸುವುದಿಲ್ಲವಷ್ಟೇ ಅಲ್ಲ ಪೂರ್ವಕರ್ಮದ ನಿಧಿಯೂ ಕೂಡ ಕರಗಿ ಸಾಗರದಲ್ಲಿನ ಕಲ್ಲಿನಂತೆ ಮುಳುಗಿ ಹೋಗುತ್ತದೆ. ಆದರೆ ಇದು ನಾವು ಸತ್ಯವನ್ನರಿತಾಗಷ್ಟೇ ನಡೆಯುವಂಥದ್ದು. ಇದನ್ನು ನಾವು ತಿಳಿಯದಿದ್ದರೆ ಕರ್ಮವನ್ನು ಒಟ್ಟುಗೂಡಿಸುತ್ತಾ ಹೋಗುತ್ತೇವೆ.

ಆದರೆ ಈ ಸತ್ಯವನ್ನು ಅರಿತುಕೊಳ್ಳುವುದು ಅಷ್ಟು ಕಷ್ಟದ ವಿಷಯವಲ್ಲ. ಆದರೆ ಅದಕ್ಕೆ ಬದ್ಧತೆ ಬೇಕು. ಮನಸ್ಸು ಮರ್ಕಟವಿದ್ದಂತೆ. ಅದು ವಿಚಾರದಿಂದ ವಿಚಾರಕ್ಕೆ ಹಾರಾಡುತ್ತಿರುತ್ತದೆ. ಅದು ಹಲವಾರು ವಿಚಾರಗಳನ್ನು ಹುಟ್ಟು ಹಾಕುತ್ತದೆ. ಅದನ್ನು ತಟಸ್ಥಗೊಳಿಸಿ ಧ್ಯಾನಸ್ಥವಾಗಿರಿಸಲು ಬಹಳ ಕಷ್ಟಪಡುತ್ತೇವೆ. ಸತ್ಯವನ್ನು ಅರಿಯಲು ನಾವು ಈ ಮನಸ್ಸೆಂಬ ಮರ್ಕಟವನ್ನು ಒಬ್ಬ ಸನ್ಯಾಸಿಯ ಹಾಗೆ ಶಾಂತಗೊಳಿಸಬೇಕಾಗುತ್ತದೆ. ಆಗ ನಾವು ಅನಗತ್ಯ ವಿಚಾರಗಳನ್ನು ಕೈಬಿಟ್ಟು ಮನಸ್ಸಿನಲ್ಲಿನ ಸದ್ದನ್ನು ಅಡಗಿಸುತ್ತೇವೆ. ಈಗ ನಾವು

ಸತ್ಯದ ಮೇಲೆ ನಮ್ಮ ಗಮನವನ್ನು ಕೇಂದ್ರೀಕರಿಸಬಹುದು. ಹಾಗೆ ಮಾಡದಿದ್ದರೆ ಮನಸ್ಸು ವಿಚಾರದಿಂದ ವಿಚಾರಕ್ಕೆ, ಭೂತದಿಂದ ಭವಿಷ್ಯಕ್ಕೆ ಹಾರಾಡುತ್ತಲೇ ಇರುತ್ತದೆ. ಮನಸ್ಸನ್ನು ಶಾಂತಗೊಳಿಸಲು ಬಲ್ಲವರು ದೇಹ ಮತ್ತೆ-ಮತ್ತೆ ಹೊಸ ರೂಪವನ್ನು ಪಡೆಯುತ್ತದೆ ಎಂಬುದನ್ನು ತಿಳಿದಿರುತ್ತಾರೆ. ನಮ್ಮ ಜೀವಕೋಶಗಳು ಸಾಯುತ್ತಿದ್ದಂತೆ ಹೊಸ ಜೀವಕೋಶಗಳು ಹುಟ್ಟಿ ದೇಹವು ಹೊಸತನವನ್ನು ಪಡೆದುಕೊಳ್ಳುತ್ತವೆ. ಪ್ರತಿ 5 ರಿಂದ 7 ವರ್ಷಗಳಿಗೆ ನಾವು ಹೊಸದಾದ ದೇಹವನ್ನು ಪಡೆದುಕೊಳ್ಳುತ್ತದೆ. ಹಾಗಾಗಿ 35 ವರ್ಷ ವಯಸ್ಸಿನ ವ್ಯಕ್ತಿಯೊಬ್ಬನು 5 ದೇಹಗಳನ್ನು ಹೊಂದಿರುತ್ತಾನೆ. 70 ವರ್ಷಗಳನ್ನು ಮೀರಿದ ವ್ಯಕ್ತಿಯು 11ನೇ ದೇಹದಲ್ಲಿ ಜೀವಿಸುತ್ತಿರುತ್ತಾನೆ. ಹೀಗೆ ಬದಲಾಗುತ್ತಿರುವ ದೇಹದಲ್ಲಿ ನಾವು ಜೀವಿಸುವುದಾದರೂ ಹೇಗೆ? ಹಾಗಾಗಲು ಸಾಧ್ಯವಿಲ್ಲ. ಬದಲಾಗುತ್ತಿರುವ ದೇಹ ಮತ್ತು ಮನಸ್ಸುಗಳು ನಾಶವಾಗಲು ಸಾಧ್ಯವಿಲ್ಲ. ನಾವು ಗೋಚರವಾಗಿರುವ ದೇಹ ಮತ್ತು ಸೂಕ್ಷ್ಮ ಮನಸ್ಸುಗಳಿಗೆ ಪ್ರಾಣ ನೀಡುವ ಶಕ್ತಿ ಮಾತ್ರ ಆಗಲು ಸಾಧ್ಯ. ಒಮ್ಮೆ ನಾವು ಇದನ್ನು ಅರಿತುಕೊಂಡರೆ ನಮ್ಮ ಅಹಂನ್ನು ಮೀರಿ ಬೆಳೆಯಲು ಸಾಧ್ಯವಾಗುತ್ತದೆ. ಅಹಂ ಇರುವುದೇ ನಾವು ದೇಹ ಮತ್ತು ಮನಸ್ಸುಗಳು ನಮ್ಮವು ಎಂದು ಭಾವಿಸುವುದರಿಂದ. ಎಲ್ಲಿ ದೇಹ ಮತ್ತು ಮನಸ್ಸು ನಮ್ಮದು ಎಂಬ ಭಾವನೆ ಇರುವುದಿಲ್ಲವೋ ಅಲ್ಲಿ 'ನಾನು' ಎಂಬ ಅಹಂ ಇರುವುದಿಲ್ಲ.

ಎಲ್ಲಿ ದೇಹ, ಮನಸ್ಸು ಮತ್ತು ಅಹಂ ಇರುವುದಿಲ್ಲವೋ ಅಲ್ಲಿ ಕರ್ತೃವು ಕೂಡ ಇರುವುದಿಲ್ಲ. ಇಲ್ಲಿ ಯಾವ ಕ್ರಿಯೆಯೂ ನಡೆಯುವುದಿಲ್ಲ. ಅದೊಂದೆ ಮಾಯೆ. ಅದು ನಿಜವೆಂದು ತೋರುತ್ತದೆ ಆದರೆ ನಿಜವಲ್ಲ.

*ಒಂದಾನೊಂದು ಕಾಲದಲ್ಲಿ ರಾಜನೊಬ್ಬನ ಆಸ್ಥಾನದಲ್ಲಿ ನಾಟಕವೊಂದನ್ನು*

ಏರ್ಪಡಿಸಲಾಗಿತ್ತು. ಅನೇಕ ನಟರು ಪಾತ್ರ ವಹಿಸಿದ್ದ ಆ ನಾಟಕವನ್ನು ನೋಡಲು ರಾಜ ರಾಣಿಯರು ಕಾಯುತ್ತಿದ್ದರು. ಆದರೆ ಆ ನಾಟಕದಲ್ಲಿ ಸುಂದರ ರಾಜಕುಮಾರಿಯ ಪಾತ್ರವನ್ನು ಮಾಡಲು 10 ವರ್ಷ ವಯಸ್ಸಿನ ಸುಂದರ ಹುಡುಗಿಯೊಬ್ಬಳ ಅಗತ್ಯವಿತ್ತು. ಆದರೆ ಅಂತಹ ಹುಡುಗಿ ಯಾರೂ ಸಿಗಲಿಲ್ಲ. ಆಗ ರಾಣಿಗೆ ಒಂದು ವಿಚಾರ ಹೊಳೆಯಿತು. ಅಷ್ಟೇ ವರ್ಷ ವಯಸ್ಸಿನ, ಸುಂದರವಾಗಿದ್ದ ತನ್ನ ಮಗನೇ ಈ ಪಾತ್ರವಹಿಸಿದರೆ ಹೇಗೆ ಎಂದು ಅವಳು ಯೋಚಿಸಿದಳು. ರಾಜಕುಮಾರನನ್ನು ರಾಜಕುಮಾರಿಯನ್ನಾಗಿ ಪರಿವರ್ತಿಸಲಾಯಿತು. ಮತ್ತೆ ನಾಟಕವನ್ನು ಆಡುವ ಎಲ್ಲ ಸಿದ್ಧತೆಗಳು ನಡೆದವು. ನಾಟಕವು ನಡೆಯುತ್ತಿದ್ದಂತೆ ನಾಟಕದಲ್ಲಿನ ರಾಜಕುಮಾರಿಯು ಆ ನಾಟಕದಲ್ಲಿನ ಪಾತ್ರಗಳೆಲ್ಲದರ ಪೈಕಿ ಅತ್ಯಂತ ಸುಂದರಿಯಾಗಿದ್ದಾಳೆ ಎಂಬುದರಲ್ಲಿ ಯಾರಿಗೂ ಯಾವುದೇ ಸಂಶಯವಿರಲಿಲ್ಲ. ರಾಣಿಗೆ ಎಷ್ಟು ಖುಷಿಯಾಯಿತೆಂದರೆ ಇದರ ಚಿತ್ರವನ್ನು ಸೆರೆಹಿಡಿಯಬೇಕೆಂದೆನಿಸಿತು. ಒಬ್ಬ ಚಿತ್ರಕಾರನನ್ನು ಕರೆಸಿ ಆ ಸುಂದರ ರಾಜಕುಮಾರಿಯ ಸೌಂದರ್ಯವನ್ನು ಸೆರೆಹಿಡಿಯಲಾಯಿತು.

10-15 ವರ್ಷಗಳ ನಂತರ ಯುವಕನಾಗಿ ಬೆಳೆದಿದ್ದ ರಾಜಕುಮಾರನು ರಾಜ್ಯವನ್ನಾಳುತ್ತಿದ್ದನು. ಅವನು ವಿವಾಹವಾಗಲು ನಿರ್ಧರಿಸಿದನು. ಆದರೆ ಅವನಿಗೆ ಯಾವೊಬ್ಬ ಸುಂದರ ಹುಡುಗಿಯೂ ಸಿಗಲಿಲ್ಲ. ಒಂದು ದಿನ ಅಟ್ಟದಲ್ಲಿ ಯಾವುದೋ ಶಸ್ತ್ರಾಸ್ತ್ರಗಳಿಗಾಗಿ ಹುಡುಕಾಡುತ್ತಿದ್ದಾಗ ಅವನಿಗೆ ಸುಂದರ ಹುಡುಗಿಯ ಭಾವಚಿತ್ರವೊಂದು ಕಣ್ಣಿಗೆ ಬಿತ್ತು. ಅವನು ಆ ಹುಡುಗಿಯನ್ನು ಮದುವೆಯಾಗುತ್ತೇನೆ ಎಂದು ಹೇಳಿದ. ಆ ಸುಂದರಿಯನ್ನರಸಿ ತನ್ನ ರಾಜ್ಯವನ್ನೆಲ್ಲಾ ಸುತ್ತಾಡಿದ. ಇದನ್ನು ಅವನು ತನ್ನ ತಂದೆ ತಾಯಿಗಳಲ್ಲಿ ಹೇಳಿಕೊಂಡ. ಅವನಿಗೆ ಸುಂದರಿಯ ಮೇಲೆ ಬಹಳವಾಗಿ ಮನಸ್ಸಾಗಿದೆ ಎಂದು ಅವರು ತಿಳಿದುಕೊಂಡರು. ಅವರು ಅವನಿಗೆ ನಡೆದದ್ದರ ಬಗ್ಗೆ ಹೇಗೆ ತಿಳಿಸುವುದೆಂದು ಯೋಚಿಸಿದರು.

ರಾಜಕುಮಾರನಿಗೆ ಹತ್ತಿರದ ಸ್ನೇಹಿತನಾದ ಬುದ್ಧಿವಂತನೊಬ್ಬನಿದ್ದನು. ಅವನು ರಾಜಕುಮಾರನನ್ನು ನಿನಗೆ ಇರುವ ಸಮಸ್ಯೆ ಏನು? ಎಂದು ಕೇಳಿದನು. ಅದಕ್ಕೆ ರಾಜಕುಮಾರನು ಆ ಸುಂದರಿಯನ್ನು ವಿವಾಹವಾಗಬೇಕೆಂದು ಹೇಳಿದನು. ಹಾಗಿದ್ದರೆ ಒಳ್ಳೆಯದು. ಎಂದು ಆ ವ್ಯಕ್ತಿಯು ಉದ್ಗಾರ ತೆಗೆದನು. ಆದರೆ ಅವಳನ್ನು ನೀನು ಭೇಟಿಯಾಗಿದ್ದೀಯಾ? ಅವಳಿ ಎಲ್ಲಿದ್ದಾಳೆ? ಎಂದು ಕೇಳಿದನು. ಅದಕ್ಕೆ ರಾಜಕುಮಾರನು ಇಲ್ಲ ನಾನು ಅವಳನ್ನು ನೋಡಿಲ್ಲ, ಭೇಟಿಯೂ ಆಗಿಲ್ಲವೆಂದು ಉತ್ತರಿಸಿದನು. ಅವನು ಆ ಬುದ್ಧಿವಂತನನ್ನು ಅಟ್ಟಕ್ಕೆ ಕರೆದುಕೊಂಡು ಹೋಗಿ ಆ ಭಾವಚಿತ್ರವನ್ನು ಅವನಿಗೆ ತೋರಿಸಿದನು. ಅದನ್ನು ತೋರಿಸಿ ನಾನು ಈ ಸುಂದರಿಯನ್ನು ಮದುವೆಯಾಗಬೇಕೆಂದು ಹೇಳಿದನು. ಆಗ ಬುದ್ಧಿವಂತನು ರಾಜಕುಮಾರನಿಗೆ "ಆ ಭಾವಚಿತ್ರದಲ್ಲಿರುವುದು ನೀನೇ" ಎಂದು ಹೇಳಿದನು. ಮತ್ತು ನಡೆದ ಎಲ್ಲಾ ಕಥೆಯನ್ನೂ ಅವನಿಗೆ ಹೇಳಿದನು. ಆಗ ರಾಜಕುಮಾರನಿಗೆ ಭಾವಚಿತ್ರದಲ್ಲಿರುವ ಸುಂದರಿಯನ್ನು ತಾನು ಮದುವೆಯಾಗಲು ಸಾಧ್ಯವಿಲ್ಲ ಎಂದು ಅರಿವಾಯಿತು. ಕಾರಣ, ಆ ಚಿತ್ರದಲ್ಲಿರುವುದು ತಾನೇ ಎಂದು ಅವನಿಗೆ ತಿಳಿಯಿತು. ರಾಜಕುಮಾರಿಯು ಭಾವಚಿತ್ರದಲ್ಲಿದ್ದರೂ ನಿಜವಾಗಿಯೂ ಅಸ್ತಿತ್ವದಲ್ಲಿಲ್ಲ ಎಂಬುದು ತಿಳಿಯಿತು. ಸತ್ಯದ ವಿಷಯವೆಂದರೆ, ಆ ಭಾವಚಿತ್ರದಲ್ಲಿರುವ ಸುಂದರಿಯ ಚಿತ್ರ ತನ್ನದೇ ಆಗಿದ್ದು, ತಾನು ತನ್ನನ್ನೇ ಮದುವೆಯಾಗಲು ಸಾಧ್ಯವಿಲ್ಲ ಎಂದು ಅವನಿಗೆ ಅರಿವಾಯಿತು.

ಸುಂದರಿಯೆಂಬುದು ಕೇವಲ ಒಂದು ಮಿಥ್ಯೆ. ಭಾವಚಿತ್ರದಲ್ಲಿ ಅವಳಿದ್ದರೂ, ನಿಜಜೀವನದಲ್ಲಿ ಅವಳು ಇಲ್ಲ. ರಾಜಕುಮಾರನಿಗೆ ಈ ಸತ್ಯ ಅರಿವಾಗುತ್ತಿದ್ದಂತೆ ತನ್ನ ಅಜ್ಞಾನದ ಬಗ್ಗೆ ತಾನೇ ನಗತೊಡಗಿದನು. ಈ ದೇಹ ಮತ್ತು ಮನಸ್ಸುಗಳು ನಮ್ಮವಲ್ಲ ಎಂದು ತಿಳಿದುಕೊಂಡ ಕೂಡಲೇ ಕರ್ಮವನ್ನು ನಿರ್ಮಿಸುವ ಪ್ರಶ್ನೆಯೇ ಏಳುವುದಿಲ್ಲ.

*ಪ್ರಕಟಗೊಳ್ಳುವ ಎಲ್ಲವನ್ನೂ ನಾವು ನೋಡಬಹುದು. ಆದರೆ ಎಲ್ಲೆಡೆಯೂ ಸರ್ವಾಂತರ್ಯಾಮಿಯಾದ ಶಕ್ತಿಯನ್ನು ನೋಡಲಾಗುವುದಿಲ್ಲ. ನಾವು ಅಜ್ಞಾನದಲ್ಲಿ ಬದುಕುತ್ತಿದ್ದೇವೆ.*

ಸತ್ಯವನ್ನು ಅರಿಯದೆ ದೇಹ ಮತ್ತು ಮನಸ್ಸುಗಳು ಸತ್ತು ಮರುಹುಟ್ಟು ಪಡೆಯುತ್ತಿದ್ದಂತೆ ಕರ್ಮವನ್ನು ಅನುಭವಿಸುತ್ತಿದ್ದೇವೆ. ಈ ಸತ್ಯವನ್ನು ನಾವು ಅರಿತುಕೊಂಡರೆ ನಾವು ಕರ್ಮದಿಂದ ಬಿಡುಗಡೆ ಪಡೆಯಬಹುದು. ನಾವು ಕರ್ತೃಗಳಾಗದೆ ಕೇವಲ ನೋಡುಗರಾಗಿ ದೇಹ ಮತ್ತು ಮನಸ್ಸುಗಳ ಎಲ್ಲಾ ರೀತಿಯ ಕರ್ಮಗಳಿಂದಲೂ ಬಿಡುಗಡೆಯನ್ನು ಹೊಂದಬಹುದು. ಇದೊಂದು ಭೂಮಿಯ ಮೇಲೆ ಸೃಷ್ಟಿಕರ್ತನು ನಿರ್ಮಿಸಿ, ನಿರ್ದೇಶಿಸುತ್ತಿರುವ ಬೃಹತ್ ನಾಟಕವಾಗಿದ್ದು, ಈ ಅಲೌಕಿಕ ನಾಟಕವನ್ನು ಅನುಭವಿಸುತ್ತೇವೆ.

**ಕರ್ಮದಿಂದ ತಪ್ಪಿಸಿಕೊಳ್ಳಲು ಸಾಧ್ಯವೆ?**
**ನಾವು ನಮ್ಮ ಧರ್ಮವನ್ನು ಪಾಲಿಸದೇ ಹೇಗೆ ಜೀವಿಸುವುದು?**
**ಈ ಜೀವನವು ನಿಜವಲ್ಲ,**
**ಒಂದು ನಾಟಕ ಎಂದು ನಮಗೆ ಅರಿವಾದೊಡನೆ**
**ನಾವು ಮುಕ್ತಿ ಹೊಂದಿ ನಿರ್ವಾಣ ಅಥವಾ ಮೋಕ್ಷವನ್ನು ಪಡೆಯುತ್ತೇವೆ.**

# ಸಾರಾಂಶ:

# ಕರ್ಮದಿಂದ ಬಿಡುಗಡೆ

ಕರ್ಮದಿಂದ ನಾವು ಹೇಗೆ ಬಿಡುಗಡೆ ಹೊಂದುತ್ತೇವೆ?
ನಾವು ದೇಹವಲ್ಲ ಎಂಬುದನ್ನು ಅರಿತಾಗ ಮಾತ್ರ
ಕರ್ಮದಿಂದ ಬಿಡುಗಡೆ ಹೊಂದಲು ಸಾಧ್ಯ.
ನಾವು ನಾವಲ್ಲ, ಅಂದರೆ ಮನಸ್ಸು ಮತ್ತು ಅಹಂ ಅಲ್ಲ.
ಮನಸ್ಸು ಮತ್ತು ಅಹಂಗಳು ನಮ್ಮ ಕರ್ಮವನ್ನು ಪೇರಿಸುತ್ತವೆ
ಮತ್ತು ಎಲ್ಲಾ ಒಳಿತುಕೆಡಕುಗಳನ್ನು ದೇಹದ ಮೂಲಕ ಅನುಭವಿಸುತ್ತವೆ.
ದೇಹ, ಮನಸ್ಸು ಮತ್ತು ಅಹಂ ಇಲ್ಲದಿರುವೆಡೆ ಕರ್ತೃವು ಕೂಡ ಇರುವುದಿಲ್ಲ.
ನಾವು ಮನಸ್ಸು ಮತ್ತು ಅಹಂ ಅಲ್ಲ, ಪ್ರಾಣ ಅಥವಾ ಆತ್ಮವೆಂದು ತಿಳಿದೊಡನೆ
ಸಾವಿನೊಂದಿಗೆ ಕರ್ಮದಿಂದ ಕೂಡ ಬಿಡುಗಡೆ ಹೊಂದುತ್ತೇವೆ.

8

# ಕರ್ಮದ ನಿಯಮಗಳನ್ನು ನಿರ್ವಹಿಸುವವರು ಯಾರು?

ಕರ್ಮವನ್ನು ಅರ್ಥ ಮಾಡಿಕೊಂಡು ದೈಹಿಕ ಮತ್ತು ಮಾನಸಿಕ ನೋವುಗಳನ್ನು ಮೀರಬಯಸುವವರು ಈ ಜಗತ್ತಿನಲ್ಲಿನ ಬದುಕಿನ ಸತ್ಯವನ್ನು ಅರಿಯದೆ ಕರ್ಮವನ್ನು ಮೀರಲಾರರು. ನಮಗೆ ತಿಳಿದಿರುವುದಾದರೂ ಏನು? ನಾವು ಇದ್ದೇವೆಂಬುದು ನಮಗೆ ತಿಳಿದಿದೆ. ಜೀವನದಲ್ಲಿ ಸುಖ-ದುಃಖಗಳನ್ನು ಅನುಭವಿಸುತ್ತೇವೆ ಎಂಬುದನ್ನೂ ತಿಳಿದಿದ್ದೇವೆ. ಆದರೆ ಇದರಾಚೆಗೆ ನಮಗೇನೂ ತಿಳಿದಿಲ್ಲ. ನಾವು ಸ್ವಲ್ಪ ನಿಂತು ಪ್ರಶ್ನೆಗಳನ್ನು ಕೇಳಿಕೊಳ್ಳುವುದಿಲ್ಲ. ಬದುಕಿನ ಬಹು ಮುಖ್ಯ ಪ್ರಶ್ನೆಗಳಿಗೆ ಉತ್ತರವನ್ನು ಕಂಡುಕೊಳ್ಳಲು ಹೋಗುವುದಿಲ್ಲ. ನಾವು ಹುಟ್ಟುತ್ತೇವೆ, ಸಾಯುತ್ತೇವೆ, ಅಳುತ್ತೇವೆ, ಆದರೆ ಏಕೆ ಎಂಬ ಪ್ರಶ್ನೆಯನ್ನು ಕೇಳಿಕೊಳ್ಳುವುದಿಲ್ಲ. ನಾವು ಆಕಾಶದತ್ತ ನೋಡುತ್ತೇವೆ. ಅಲ್ಲಿ ಸೂರ್ಯ, ಚಂದ್ರ ತಾರೆಗಳನ್ನು ಕಾಣುತ್ತೇವೆ. ಆದರೆ ಅವು ಹೇಗೆ ಬಂದವು, ಎಲ್ಲಿಂದ ಬಂದವು ಎಂಬ ಪ್ರಶ್ನೆಗಳನ್ನು ಕೇಳಿಕೊಳ್ಳುವುದಿಲ್ಲ. ಪರ್ವತ, ನದಿ, ಸಾಗರ, ಮರ-ಗಿಡಗಳನ್ನು, ದುಂಬಿ-ಪಾತರಗಿತ್ತಿಗಳನ್ನು ಸೃಷ್ಟಿಸಿದವರು ಯಾರು? ಎಂಬ ಪ್ರಶ್ನೆಯನ್ನು ಕೇಳಿಕೊಳ್ಳುವುದಿಲ್ಲ. ಅವುಗಳೆಲ್ಲಾ ಹಾಗೆಯೇ ಅಸ್ತಿತ್ವಕ್ಕೆ ಬಂದವೆ? ಖಂಡಿತ ಇಲ್ಲ. ಇದಕ್ಕೆಲ್ಲಾ ಕಾರಣ ಯಾವುದೋ ಅಗೋಚರ ಶಕ್ತಿ, ಅವನನ್ನು ಸೃಷ್ಟಿಕರ್ತ ಎಂದೆನ್ನಿ. ಅವನು ಇವೆಲ್ಲವನ್ನೂ ಸೃಷ್ಟಿಸಿ ನಿರ್ವಹಿಸುತ್ತಿದ್ದಾನೆ.

ಕರ್ಮದ ನಿಯಮಗಳೆಂಬ ಲೋಕ ನೀತಿಯು ಈ ಅಲೌಕಿಕ ನಾಟಕವು ನಡೆಯುತ್ತಲೇ

ಇರುವಂತೆ ನೋಡಿಕೊಳ್ಳುತ್ತದೆ. ಯಾವುದೋ ಒಂದು ಶಕ್ತಿ ಕರ್ಮವನ್ನು ನಿರ್ವಹಿಸುತ್ತಿದೆ. ಅದು ಯಾವುದೆಂದು ನಮಗೆ ತಿಳಿದಿಲ್ಲ. ಅದು ಎಲ್ಲಿದೆ? ಎಂಬುದೂ ತಿಳಿದಿಲ್ಲ. ಆದರೆ ಅದು ಇರುವುದು ನಮಗೆ ತಿಳಿದಿದೆ. ಈ ಶಕ್ತಿ ಇಲ್ಲದೆ ಈ ಜಗತ್ತು ಮತ್ತು ಅದರಾಚೆಗಿನ ಎಲ್ಲವೂ ಅಸ್ತಿತ್ವದಲ್ಲೇ ಇರುವುದಿಲ್ಲ. ಸರ್ವಶಕ್ತನಾದ ಈ ಶಕ್ತಿಯಿಲ್ಲದೆ ಈ ಲೋಕದಲ್ಲಿ ಬದುಕು ಸಾಧ್ಯವಿಲ್ಲ. ನಾವು ಇದನ್ನು ಸ್ವಲ್ಪ ಆಳವಾಗಿ ವಿಶ್ಲೇಷಿಸಿದರೆ ಈ ಜಗತ್ತು ಕೇವಲ ಒಂದು ಬೃಹತ್ ನಾಟಕವೆಂದು ತಿಳಿಯುತ್ತದೆ. ಈ ಭೂಮಿ ಒಂದು ರಂಗಶಾಲೆ. ನಾವು ಕೇವಲ ನಾಟಕದಲ್ಲಿ ಬಂದುಹೋಗುವ ಪಾತ್ರಗಳನ್ನು ನಿರ್ವಹಿಸುವ ನಟರು ಮಾತ್ರ. ನಾವು ಇದನ್ನು ನಾಟಕವೆಂದು ತಿಳಿಯದೆ ಇರುವುದರಿಂದ ಇದೆಲ್ಲವೂ ನಿಜವೆಂದು ತಿಳಿಯುತ್ತೇವೆ. ನಾವು ನಮ್ಮನ್ನು ದೇಹ ಮತ್ತು ಮನಸ್ಸುಗಳೆಂದು ತಿಳಿಯುವುದರಿಂದ ನಾವು ಕರ್ಮವನ್ನು ಗಳಿಸಿ ಮತ್ತೆ-ಮತ್ತೆ ಹುಟ್ಟುತ್ತೇವೆ. ಆದರೆ ಈ ಜಗತ್ತನ್ನು ಸೃಷ್ಟಿಸಿರುವ ನಾನು ಮತ್ತು ನೀವುಗಳು ನಮ್ಮೊಳಗೇ ಇರುವ ಶಕ್ತಿ ಎಂಬುದನ್ನು ಅರಿತಿಲ್ಲ. ದುರದೃಷ್ಟವಶಾತ್, ನಾವು ಈ ನಾಟಕದ ನಿರ್ಮಾತ ಮತ್ತು ನಿರ್ದೇಶಕನನ್ನು ಮರೆತು ಕೇವಲ ದೇಹ-ಮನಸ್ಸುಗಳ ಸಂಕೀರ್ಣದ ಬಗ್ಗೆ ಮಾತ್ರ ಯೋಚಿಸುತ್ತೇವೆ. ಹಾಗಾಗಿ ಮತ್ತೆ-ಮತ್ತೆ ದುಃಖ ನೋವುಗಳನ್ನು ಅನುಭವಿಸುತ್ತೇವೆ. ಸತ್ಯವನ್ನು ತಿಳಿದವರು ಕರ್ಮದಿಂದ ಮುಕ್ತಿ ಪಡೆಯುತ್ತಾರೆ. ಅವರಿಗೆ ಅವರು ಯಾರು ಎಂದು ತಿಳಿದಿರುತ್ತದೆ. ಹಾಗಾಗಿ ಅವರು ಅಹಂನ್ನು ಮೀರಲು ಸಾಧ್ಯವಾಗುತ್ತದೆ. ಅವರು ಹುಟ್ಟು, ಸಾವು, ಪುನರ್ಜನ್ಮಗಳ ಚಕ್ರದಿಂದ ಬಿಡಿಸಿಕೊಂಡು ಸುಖ, ಸಂತೋಷ, ನೆಮ್ಮದಿಗಳಿಂದ ಬದುಕುತ್ತಾರೆ.

ಇದನ್ನು ಮತ್ತಷ್ಟು ಆಳವಾಗಿ ನೋಡೋಣ. ಈ ಜಗತ್ತು ಒಂದು ಬೃಹತ್ ರಂಗಮಂಚ. ಅದು 8 ಶತಕೋಟಿ ನಟರನ್ನು ಮತ್ತು ಸಹಸ್ರಾರು ಕೋಟಿ ಕೀಟ, ಪ್ರಾಣಿ ಮತ್ತು ಸಸ್ಯಗಳನ್ನು ಹೊಂದಿದೆ. ಇದೆಲ್ಲವೂ ಸಂಭವಿಸಿದ್ದು ಹೇಗೆ? ಇದು ಸೃಷ್ಟಿಕರ್ತನು ತನ್ನ ಶಕ್ತಿಯನ್ನು ಬಳಸಿ

ನಿರ್ಮಿಸಿರುವ ವಿಷಯವಾಗಿದೆ. ಈ ಲೋಕ ಶಕ್ತಿಯು ಈ ನಾಟಕವನ್ನು ನಿರ್ವಹಿಸುತ್ತದೆ. ಇದು ಕರ್ಮದ ನಿಯಗಳಿಂದ ಹಿಡಿದು ಗುರುತ್ವಾಕರ್ಷಣೆಯಂತಹ ಮತ್ತು ಸಮತೂಕದ ನಿಯಮ, ಚಕ್ರಗಳ ನಿಯಮ ಮತ್ತು ಇನ್ನಿತರ ಎಲ್ಲ ಲೋಕ ನಿಯಮಗಳನ್ನೂ ನಿರ್ವಹಿಸುತ್ತದೆ. ಈ ಶಕ್ತಿಯು ಈ ನಾಟಕದ ಎಲ್ಲಾ ವಿವರಗಳನ್ನೂ ನಿರ್ವಹಿಸುವುದಿಲ್ಲ. ಈ ಶಕ್ತಿಯು ನಮ್ಮ ಎಲ್ಲಾ ಕ್ರಿಯೆಗಳನ್ನೂ, ಸಂದರ್ಭಗಳನ್ನೂ ನೇರವಾಗಿ ನಿಯಂತ್ರಿಸುವುದಿಲ್ಲ. ಈ ಶಕ್ತಿಯು ನಮಗೆ ಮುಕ್ತ ಆಯ್ಕೆಯನ್ನು ನೀಡಿದೆ. ನಾವು ನಮಗೆ ಬೇಕೆನಿಸುವಂತೆ ಮಾಡಬಹುದು. ಆದರೆ ಒಮ್ಮೆ ನಾವು ಕ್ರಿಯೆಯಲ್ಲಿ ತೊಡಗಿಸಿಕೊಂಡ ಕೂಡಲೇ ಕರ್ಮದ ನಿಯಮಗಳ ಪ್ರಕಾರ ಅದಕ್ಕೆ ಒಳ್ಳೆಯ ಅಥವಾ ಕೆಟ್ಟ ಪ್ರತಿಫಲವನ್ನು ನಾವು ಪಡೆದುಕೊಳ್ಳಲೇಬೇಕಾಗುತ್ತದೆ. ನಾವು ಕರುಣಾಮಯಿಗಳಾಗಿದ್ದು ಒಳ್ಳೆಯದನ್ನು ಮಾಡಿದ್ದರೆ ನಿಯಮವು ನಮಗೆ ಸಂತೋಷವನ್ನು ನೀಡುತ್ತದೆ. ಆದರೆ ನಾವು ಕ್ರೂರಿಗಳಾಗಿದ್ದು ಕೆಟ್ಟ ಕೆಲಸಗಳನ್ನು ಮಾಡಿದ್ದರೆ ಮತ್ತು ನಕಾರಾತ್ಮಕವಾಗಿ ಬದುಕಿದರೆ ನಾವು ಅದಕ್ಕೆ ತಕ್ಕ ಪ್ರತಿಫಲ ಪಡೆಯದೆ ತಪ್ಪಿಸಿಕೊಳ್ಳಲಾಗುವುದಿಲ್ಲ. ಲೋಕದ ಶಕ್ತಿಯು ಇವೆಲ್ಲವನ್ನೂ ಬಹಳ ಸುಂದರವಾಗಿ ಸಂಯೋಜಿಸಿ, ನಿರ್ಮಿಸಿ, ನಿರ್ದೇಶಿಸಿರುತ್ತದೆ.

ಈ ಶಕ್ತಿಯನ್ನು ದೇವರೆಂದು ಕರೆಯುತ್ತಾರೆ. ಮತ್ತು ಇದನ್ನು ಹೆಸರು ಮತ್ತು ರೂಪಗಳಿಂದ ತಪ್ಪಾಗಿ ಅರ್ಥ ಮಾಡಿಕೊಳ್ಳುತ್ತೇವೆ. ನಿಜ ಹೇಳಬೇಕೆಂದರೆ ಈ ಲೋಕ ಶಕ್ತಿಯು ಮಾನವನ ತಿಳಿವಳಿಕೆ ಮತ್ತು ಕಲ್ಪನೆಗಳಿಗೆ ಮೀರಿದ್ದು. ಶಕ್ತಿಯು ಅಗೋಚರ ಮತ್ತು ನಾಶವಾಗದಂಥದ್ದು. ಈ ಶಕ್ತಿಯು ಸರ್ವಾಂತರ್ಯಾಮಿಯಾಗಿದ್ದು ಎಲ್ಲೆಡೆ ಪಸರಿಸಿದೆ. ಅದು ಸರ್ವಾಂತರ್ಯಾಮಿಯೂ ಬಹಳ ಪ್ರಭಾವಶಾಲಿಯೂ ಆಗಿದೆ. ಅಷ್ಟಕ್ಕೂ ಈ ಜಗತ್ತೆಂಬುದು ಈ ಶಕ್ತಿಯು ನಿರ್ಮಿಸಿ ಆಡಿಸುತ್ತಿರುವ ನಾಟಕವಲ್ಲವೇ? ಈ ನಾಟಕದ ನಿರ್ಮಾತ ಮತ್ತು ನಿರ್ದೇಶಕ ಶಕ್ತಿ. ನಾವು ಈ ನಾಟಕದಲ್ಲಿ ಪಾತ್ರ ವಹಿಸುವ ನಟರು ಮತ್ತು

ಪ್ರೇಕ್ಷಕ ವರ್ಗ. ನಾವು ಕರ್ಮದ ನಿಯಮಗಳ ಪ್ರಕಾರ ಈ ಜಗತ್ತೆಂಬ ರಂಗಮಂಚದ ಮೇಲೆ ಮತ್ತೆ-ಮತ್ತೆ ಕಾಣಿಸಿಕೊಳ್ಳುತ್ತೇವೆ. ಈ ನಾಟಕದ ಪರ್ಯವನ್ನು ಯೋಜಿಸಿರುವುದೇ ಹಾಗೆ. ಇದೊಂದು ನಾಟಕ ಮತ್ತು ನಾವು ಈ ಲೋಕದ ಧೂಳಿನ ಸಣ್ಣ ಕಣ ಮತ್ತು ಈ ಲೋಕ ಶಕ್ತಿಯಲ್ಲಿ ನಾವೊಂದು ದಿನ ಲೀನವಾಗುತ್ತೇವೆ ಎಂಬ ಸತ್ಯವನ್ನು ನಾವು ಅರಿಯಬೇಕು. ಇಲ್ಲದಿದ್ದರೆ ನಾವು ನಾಟಕದ ಮತ್ತೊಂದು ದೃಶ್ಯದಲ್ಲಿ ಮತ್ತೊಂದು ದೇಹ ಧರಿಸಿ ಮತ್ತೆ-ಮತ್ತೆ ಹುಟ್ಟುತ್ತಲೇ ಇರುತ್ತೇವೆ. ಮತ್ತೆ-ಮತ್ತೆ ದುಃಖ ನೋವುಗಳನ್ನು ಅನುಭವಿಸುತ್ತಲೇ ಇರುತ್ತೇವೆ.

ಜಗತ್ತಿನಲ್ಲಿನ ಎಲ್ಲಾ ಧರ್ಮಗಳೂ ದೇವರ ಬಗ್ಗೆ ಮಾತನಾಡುತ್ತವೆ. ಅವುಗಳ ಸಮಸ್ಯೆ ಎಂದರೆ ಅವರ ಧರ್ಮದ ದೇವರೇ ದೊಡ್ಡವನೆಂದು ಭಾವಿಸುತ್ತವೆ. ಇದು ಹಲವಾರು ದೇವರುಗಳಿದ್ದಾರೆ ಎಂದು ನಾವು ನಂಬುವಂತೆ ಮಾಡುತ್ತದೆ. ಹಿಂದೂಗಳು 33 ಶತಕೋಟಿ ದೆವರುಗಳಿದ್ದಾರೆಂದು ನಂಬುತ್ತಾರೆ. ನಾವು ನಮ್ಮ ಸಾಮಾನ್ಯ ಜ್ಞಾನವನ್ನು ಬಳಸಿದರೆ ಸೃಷ್ಟಿಕರ್ತನನ್ನೇ ದೇವರೆಂದು ಕರೆಯುತ್ತೇವೆ ಎಂದು ತಿಳಿಯುತ್ತದೆ. ಈ ಜಗತ್ತನ್ನು ಸೃಷ್ಟಿಸುವ ಮತ್ತು ಕೆಡವುವ ಶಕ್ತಿ ಇರುವುದು ಅದೊಂದೇ ಶಕ್ತಿಗೆ.

ಬಹುತೇಕ ಧರ್ಮಗಳು ಕರ್ಮದ ಇರಿವಿಕೆಯನ್ನು ನಂಬಿಕೊಂಡಿವೆ. ಆದರೆ ಅವು ಕರ್ಮದ ನಿಯಮಗಳ ಬಗ್ಗೆ ಆಳವಾದ ತಿಳಿವಳಿಕೆಯನ್ನು ಹೊಂದಿದ್ದು ತಮ್ಮ ಅನುಯಾಯಿಗಳಿಗೆ ಸೂಕ್ತ ಮಾರ್ಗದರ್ಶನವನ್ನು ನೀಡುವುದಿಲ್ಲ. ಬಹುತೇಕ ಧರ್ಮಗಳು ಜೀವನದ ಗುರಿ ಮೋಕ್ಷ, ನಿರ್ವಾಣ ಮುಕ್ತಿ ಎಂದು ಸಾರುತ್ತವೆ. ಆದರೆ ಅವುಗಳು ತಮ್ಮ ಅನುಯಾಯಿಗಳಿಗೆ ತಮ್ಮ ದೇಹ, ಮನಸ್ಸು ಮತ್ತು ಅಹಂಗಳಿಂದ ಮುಕ್ತಿ ಪಡೆದುಕೊಳ್ಳಲು ಸಹಾಯ ಮಾಡುವುದಿಲ್ಲ. ಎಲ್ಲಾ ಧರ್ಮಗಳೂ ಒಟ್ಟಾಗಿ ನಾಮ ರೂಪಗಳನ್ನು ಮೀರಿದ

ಸರ್ವಶಕ್ತ ದೇವರ ಬಗ್ಗೆ, ನಮ್ಮೊಳಗೇ ಅಂತರ್ಗತವಾಗಿರುವ ದೈವಿಕ ಶಕ್ತಿಯ ಬಗ್ಗೆ ಅರಿವನ್ನು ಮೂಡಿಸದಿದ್ದರೆ ಇದೊಂದು ಬಹಳ ದೊಡ್ಡ ಸವಾಲಾಗುತ್ತದೆ.

ಈ ಜಗತ್ತನ್ನು ಮತ್ತು ಅದರೊಳಗಿನ ಎಲ್ಲವನ್ನೂ ಸೃಷ್ಟಿಸಿದ ದೇವರು ನಮ್ಮೊಳಗೆ ಮತ್ತು ಪ್ರತಿಯೊಬ್ಬರ ಒಳಗೇ ಇದ್ದಾನೆ. ಇದು ಹೇಗೆ ಸಾಧ್ಯ? ನೀವು ಒಂದು ಬಕೆಟಿನಲ್ಲಿರುವ ನೀರಿನಲ್ಲಿ ಸೂರ್ಯನ ಪ್ರತಿಬಿಂಬವನ್ನು ನೋಡಿದರೆ ಸೂರ್ಯನೇ ತನ್ನೆಲ್ಲಾ ಶಕ್ತಿಯೊಂದಿಗೆ ಬಕೆಟಿನಲ್ಲಿರುವಂತೆ ಭಾಸವಾಗುತ್ತದೆ. ನಿಮ್ಮ ಬಳಿ ಹತ್ತು ಬಕೆಟುಗಳಿದ್ದರೆ ಹತ್ತು ಸೂರ್ಯ ಕಾಣುತ್ತವೆ. ದೇವರ ಎಲ್ಲಾ ಸೃಷ್ಟಿಯೂ ಕೇವಲ ಅವನ ಪ್ರತಿಬಿಂಬಗಳು ಮಾತ್ರ. ಅವನು ನಮ್ಮಲ್ಲಿ, ನಿಮ್ಮಲ್ಲಿ ಎಲ್ಲೆಲ್ಲೂ ಪ್ರಕಟಗೊಳ್ಳುತ್ತಾನೆ. ಆದರೆ ನಮಗೆ ಈ ಸತ್ಯ ತಿಳಿದಿಲ್ಲ. ನಾವು ಅಜ್ಞಾನದಲ್ಲೇ ಬದುಕಿ ಸಾಯುತ್ತೇವೆ. ಜೇಡ ತನ್ನ ಬಲೆಯನ್ನು ಹೇಗೆ ಕಟ್ಟುತ್ತದೆ? ಅದು ತನ್ನ ಒಡಲ ನೂಲಿನಿಂದ ತನ್ನ ಬಲೆಯನ್ನು ನೇಯುತ್ತದೆ. ಒಂದು ಜೇಡ ತನ್ನ ಜಗತ್ತನ್ನು ನಿರ್ಮಿಸಿಕೊಳ್ಳಬಹುದಾದರೆ, ಸೃಷ್ಟಿಕರ್ತನಿಗೆ ಅದು ಸಾಧ್ಯವಿಲ್ಲವೇ?

ಈ ಇಡೀ ಲೋಕ ಕರ್ಮಭೂಮಿ ಇದ್ದ ಹಾಗೆ. ಕರ್ಮ ತನ್ನ ಜಾದೂವನ್ನು ಪ್ರಕಟಗೊಳಿಸುವ ತಾಣವಾಗಿ. ಇದು ಹೇಗೆ ಸಂಭವಿಸುತ್ತದೆ? ಈಗ ನಮಗೆ ಕರ್ಮ ಎಂದರೇನು? ಅದು ಹೇಗೆ ಕೆಲಸ ಮಾಡುತ್ತದೆ ಎಂದು ತಿಳಿದಿದೆ. ಆದರೆ ಈ ಕರ್ಮದ ನಾಟಕ ಹೇಗೆ ನಡೆಯುತ್ತದೆ ಎಂಬುದರ ಬಗ್ಗೆ, ಅದರ ಕಾರಣಗಳ ಬಗ್ಗೆ ನಾವು ತಿಳಿದುಕೊಳ್ಳಬೇಕಾಗಿದೆ. ಮಾಯೆ ಎಂಬುದು ದೇವರ ಬಳಿ ಇರುವ ವಿಶೇಷ ಶಕ್ತಿಯಾಗಿದೆ. ಅದು ಶಕ್ತಿಯನ್ನು ಪ್ರಕಟಗೊಳಿಸುವ ಅಥವಾ ಅದನ್ನು ಮರೆ ಮಾಡುವ ವಿಷೇಷ ಲಕ್ಷಣಗಳನ್ನು ಹೊಂದಿದೆ.

ಒಂದು ಚಲನಚಿತ್ರದ ಪ್ರೊಜೆಕ್ಟರ್ ಯಾವ ಕೆಲಸವನ್ನು ಮಾಡುತ್ತದೆ? ಅದು ಚಿತ್ರಪಟವನ್ನು

ಪ್ರದರ್ಶಿಸಿ ತೆರೆಯನ್ನು ಮರೆ ಮಾಡುತ್ತದೆ. ಮಾಯೆ ಎಂಬುದು ಅಂತಹ ಬೃಹತ್ತಾದ ಪ್ರೊಜೆಕ್ಟರ್. ಅದು ಭೂಮಿಯ ಮೇಲೆ ಮತ್ತು ಅದರಾಚೆ ಇರುವ ಮಾಯೆಯನ್ನು ಪ್ರದರ್ಶಿಸುತ್ತದೆ. ನಾವು ಹುಲುಮಾನವರು ಈ ಭ್ರಮಾಲೋಕದಲ್ಲಿ ಸಿಲುಕಿ ಅಜ್ಞಾನದಿಂದ ಬದುಕುತ್ತಿದ್ದೇವೆ. ಮಾಯೆ ಈ ಕನಸಿನ ಲೋಕವನ್ನು ಪ್ರದರ್ಶಿಸುವುದಷ್ಟೇ ಅಲ್ಲ ಅದು ಅದನ್ನು ಸೃಷ್ಟಿಸಿದ ಸೃಷ್ಟಿಕರ್ತನನ್ನು ಮರೆ ಮಾಡುತ್ತದೆ. ನಾವು ಮಾಯೆಯ ಭ್ರಮಾಲೋಕದಲ್ಲಿ ಮುಳುಗಿ ಮರೆಯಲ್ಲಿರುವ ಸೃಷ್ಟಿಕರ್ತನನ್ನು ಮರೆತುಬಿಡುತ್ತೇವೆ.

ನೀವು ಕನಸಿನಲ್ಲಿ ಕಂಡದ್ದು ನಿಜವೆಂದು ಭಾವಿಸುವುದಿಲ್ಲ ಅಲ್ಲವೇ? ನೀವು ವಿಮಾನವೊಂದನ್ನು ಚಾಲನೆ ಮಾಡುತ್ತಿರುವ ವಿಮಾನ ಚಾಲಕನೆಂದು ಕನಸು ಕಾಣುತ್ತೀರಿ. ಇದ್ದಕ್ಕಿದ್ದಂತೆ ಆಕಾಶದಲ್ಲಿ ಬಿರುಗಾಳಿಯಲ್ಲಿ ನಿಮ್ಮ ವಿಮಾನ ಸಿಲುಕಿಕೊಂಡಿದೆ. ನೀವು ಬೆಚ್ಚಿಬಿದ್ದು ಎಚ್ಚರಾಗುತ್ತೀರಿ. ಆಗ ನೀವೇನು ಮಾಡುತ್ತೀರಿ? ನೀವೊಬ್ಬ ವಿಮಾನ ಚಾಲಕನಾಗಿ ವಿಮಾನವನ್ನು ಅಪಾಯದಿಂದ ಪಾರುಮಾಡಿ ಸುರಕ್ಷತೆಯೆಡೆಗೆ ತೆಗೆದುಕೊಂಡು ಹೋಗುತ್ತೀರೋ ಅಥವಾ ಅದೊಂದು ಕನಸೆಂದು ತಿಳಿದು ಎಚ್ಚರಾಗುತ್ತೀರೋ? ಎಷ್ಟೇ ಆದರೂ ಅದೊಂದು ಕನಸು. ಈ ಜಗತ್ತು ಕೂಡ ಸಾವಿನೊಂದಿಗೆ ಅಂತ್ಯವಾಗುವ ಒಂದು ಕನಸು. ದುರಾದೃಷ್ಟವಶಾತ್ ನಾವು ಈ ಕನಸಿನ ರೂಪದ ಮಾಯಾಲೋಕವನ್ನು ಅರಿಯದೆ ಭ್ರಮೆಯಲ್ಲೇ ಬದುಕಿ ಸಾಯುತ್ತೇವೆ. ಮಾಯೆ ಈ ಜಗತ್ತನ್ನು ನಿಜವೆನ್ನುವಂತೆ ಮಾಡುತ್ತದೆ. ಇದನ್ನು ನಂಬದೆ ನಮಗೆ ವಿಧಿಯಿಲ್ಲ. ಸಾವನ್ನಪ್ಪಿದಾಗ ನಮ್ಮದು ಎಂಬುದು ಏನೂ ಉಳಿಯುವುದಿಲ್ಲ, ದೇಹ ನಶಿಸಿ ಮನಸ್ಸು ಇಲ್ಲವಾಗುತ್ತದೆ, ನಮ್ಮೊಳಗಿನ ಶಕ್ತಿಯು ಹೊಗಿ ಶಕ್ತಿಯೊಂದಿಗೆ ಲೀನವಾಗುತ್ತದೆ ಎಂಬುದನ್ನು ನಾವು ಬಲ್ಲೆವು. ಹಾಗಿದ್ದರೆ ಪುನರ್ಜನ್ಮದ ಪ್ರಶ್ನೆ ಎಲ್ಲಿಂದ ಬಂತು? ಪುನರ್ಜನ್ಮ ಎನ್ನುವುದು ಮಾಯೆ ಸೃಷ್ಟಿಸಿರುವ ಒಂದು ಭ್ರಮೆ. ಎಲ್ಲಿಯವರೆಗೆ ನಾವು ಈ

ಸುಳ್ಳನ್ನು ನಂಬಿಕೊಂಡಿರುತ್ತೇವೆಯೋ ಅಲ್ಲಿಯವರೆಗೆ ಕರ್ಮವನ್ನು ಗಳಿಸಿ ಸಾವನ್ನಪ್ಪಿ ಮತ್ತೆ ಹುಟ್ಟಿಬರುತ್ತೇವೆ. ಈ ವಿಷಯದಲ್ಲಿ ನಮಗೆ ಬೇರಾವ ಆಯ್ಕೆಯೂ ಇರುವುದಿಲ್ಲ. ನಾವು ದೇಹ, ಮನಸ್ಸು, ಅಹಂಗಳ ಸಂಕೀರ್ಣವಲ್ಲವೆಂದು ಎಂದು ಅರಿಯುತ್ತೇವೆಯೋ ಅಂದು ನಾವು ಮಾಯೆಯಿಂದ ಬಿಡಿಸಿಕೊಂಡು ಹೊರಬರುತ್ತೇವೆ. ಆಗ ಕರ್ಮವಿರುವುದಿಲ್ಲ. ಪುನರ್ಜನ್ಮವೂ ಇರುವುದಿಲ್ಲ. ಇಲ್ಲಿ ಲೋಕ ಶಕ್ತಿಯ ಅದ್ಭುತ ಶಕ್ತಿ ಪ್ರದರ್ಶನವೊಂದನ್ನು ಮಾತ್ರ ಕಾಣುತ್ತೇವೆ. ಸೂರ್ಯನ ಕಿರಣಗಳು ಚಲಿಸುತ್ತಿರುವ ಮೋಡಗಳನ್ನು ಹೊಳೆಯುವಂತೆ ಮಾಡುತ್ತವೆ. ಸಾಗರದ ಮೇಲೆ ಕಾಮನಬಿಲ್ಲು ಮೂಡುತ್ತದೆ. ಈ ಭೂಮಿ ಎಂಬ ರಂಗಮಂಚವು 8 ಶತಕೋಟಿ ಜನರು, ಸಹಸ್ರಾರು ಕೀಟ, ಪ್ರಾಣಿ ಮತ್ತು ಸಸ್ಯಗಳಿಂದ ಕೂಡಿದ್ದು 7 ಖಂಡಗಳ ಮೇಲೆ ಹರಡಿರುವ 200 ದೇಶಗಳ ಕಡಲಕಿನಾರೆಗಳನ್ನು ಈ ಸಾಗರದ ಅಲೆಗಳು ಬಂದು ಮುತ್ತುತ್ತಿವೆ. ಇದು ಈ ಅಲೌಕಿಕ ಶಕ್ತಿಯನ್ನು ನಿಜವೆಂದು ಭಾಸವಾಗುವಂತೆ ಮಾಡುತ್ತದೆ. ಆದರೆ ಇದು ನಿಜವಲ್ಲ. ಅದೊಂದು ಶಕ್ತಿ ಪ್ರದರ್ಶನವಷ್ಟೆ. ನಾವು ಅಜ್ಞಾನವೆಂಬ ಪಂಜರದಲ್ಲಿ ಬಂಧಿಗಳಾಗಿದ್ದು ಕರ್ಮದ ಫಲದ ಕಾರಣದಿಂದಾಗಿ ಸತ್ತು ಪುನರ್ಜನ್ಮ ಪಡೆಯುತ್ತೇವೆ. ನಾವು ಸತ್ಯವನ್ನು ಅರಿತುಕೊಂಡರೆ ಸ್ವತಂತ್ರರಾಗಿ ಮುಕ್ತಿ ಪಡೆದು ಈ ಜಗತ್ತಿನ ನಾಟಕವನ್ನು ಆನಂದದಿಂದ ವೀಕ್ಷಿಸಬಹುದು.

ನಾವು ನಮ್ಮ ಅಲ್ಪ ಜ್ಞಾನ ಮತ್ತು ಕಲ್ಪನಾಶಕ್ತಿಯ ಮೂಲಕ ಸೃಷ್ಟಿಕರ್ತನನ್ನು ಮತ್ತು ಅವನ ಶಕ್ತಿಯನ್ನು ಗ್ರಹಿಸಲು ಪ್ರಯತ್ನಿಸಿದರೆ ಅದು ಒಂದು ಬಕೆಟ್ಟಿನಲ್ಲಿ ಇಡಿಯ ಸಾಗರವನ್ನು ಹಿಡಿದಿಡಲು ಪ್ರಯತ್ನಿಸಿದಂತೆ. ನಾವು ಸೃಷ್ಟಿಯ ಒಂದು ಕಿರು ಕಣವಷ್ಟೇ. ಸರ್ವಶಕ್ತನಾದ ಸೃಷ್ಟಿಕರ್ತನನ್ನು, ಮತ್ತು ಅವನ ಪ್ರಭಾವವನ್ನು ಅರಿಯುವುದು ನಮ್ಮಂತಹ ಹುಲುಮಾನವರ ಸಾಮರ್ಥ್ಯಕ್ಕೆ ಮೀರಿದ್ದು. ನಾವು ದೇವರ ಸಂಕಲ್ಪಶಕ್ತಿಯನ್ನು ಒಪ್ಪಿ ಅವನಿಗೆ ಸಂಪೂರ್ಣವಾಗಿ ಶರಣಾಗಿ ವಿನಯ, ನಮ್ರತೆಗಳಿಂದ ಬದುಕುವುದನ್ನು ಬಿಟ್ಟರೆ

ಬೇರೆ ದಾರಿಯಿಲ್ಲ. ಅದಕ್ಕಿಂತಲೂ ಹೆಚ್ಚಿನ ಸಾಮರ್ಥ್ಯವನ್ನು ನಾವು ಪಡೆದಿರುವುದಿಲ್ಲ. ನಾವು ದೇಹವಾಗಲಿ, ಮನಸ್ಸಾಗಲಿ, ಅಹಂ ಆಗಲಿ ಅಲ್ಲ ಕೇವಲ ಸೃಷ್ಟಿಯ ಧೂಳಿನ ಕಿರುಕಣ ಎಂಬುದನ್ನಷ್ಟೇ ಅರಿಯಬೇಕು. ಇದನ್ನು ತಿಳಿದು ನಾವು ಬದುಕಿದರೆ ಸಾವನ್ನಪ್ಪಿದಾಗ ದೇವರ ಕೃಪೆ ನಮ್ಮ ಮೇಲಿರುತ್ತದೆ. ನಾವು ಕರ್ಮದ ನಿಯಮವನ್ನು ಮೀರಿ ಮಾಯೆ ಎಂಬ ಅಜ್ಞಾನವನ್ನು ಕಳಚಿಕೊಂಡು ಮುಕ್ತಿ ಪಡೆಯುತ್ತೇವೆ. ಆಗ ನಾವು ದೇಹ, ಮನಸ್ಸು ಮತ್ತು ಅಹಂಗಳನ್ನು ಕಳೆದುಕೊಂಡು ಕರ್ಮದಿಂದ ಬಿಡುಗಡೆ ಹೊಂದುತ್ತೇವೆ. ಪುನರ್ಜನ್ಮದಿಂದಲೂ ಪಾರಾಗುತ್ತೇವೆ. ಸೃಷ್ಟಿಕರ್ತನಲ್ಲಿ ಒಂದಾಗುತ್ತೇವೆ. ನಮ್ಮಲ್ಲಿರುವ ಲೋಕದ ಕಿರುಕಣ ಸೃಷ್ಟಿಯಲ್ಲಿ ಲೀನವಾಗುತ್ತದೆ.

**ಕರ್ಮವೆಂಬುದು ಎಲ್ಲವನ್ನೂ ನಡೆಸುವ**
**ಲೋಕದ ನಿಯಮ.**
**ಅದನ್ನು ನಿರ್ವಹಿಸುತ್ತಿರುವವರು ಯಾರು?**
**ಅದನ್ನು ನಿರ್ವಹಿಸುತ್ತಿರುವವನು ಸೃಷ್ಟಿಕರ್ತ.**
**ನಮ್ಮ ಹುಟ್ಟು ಸಾವುಗಳಿಗೆ**
**ಕಾರಣನಾದವನು.**

## ಸಾರಾಂಶ:

# ಕರ್ಮದ ನಿಯಮಗಳನ್ನು ನಿರ್ವಹಿಸುವವರು ಯಾರು?

ಕರ್ಮವನ್ನು ನಿರ್ವಹಿಸುವ ಶಕ್ತಿಯೊಂದಿದೆ.
ಆದರೆ, ಆ ಶಕ್ತಿ ಯಾವುದೆಂದು ನಮಗೆ ತಿಳಿದಿಲ್ಲ.
ಆ ಶಕ್ತಿಯನ್ನು ಅರಿಯಲು ನಾವು ಅಶಕ್ತರಾಗಿದ್ದೇವೆ.
ನಮ್ಮ ಸೀಮಿತ ಅರಿವಿನಿಂದಾಗಿ

ಅದನ್ನು ಸೃಷ್ಟಿಕರ್ತ ಅಥವಾ ದೇವರು ಎಂದು ಕರೆಯುತ್ತೇವೆ.
ಆ ಸರ್ವಶಕ್ತನ ಶಕ್ತಿಗೆ ಶರಣಾಗಿ ಒಪ್ಪಿಕೊಳ್ಳುವುದಷ್ಟೇ ನಮಗುಳಿದಿರುವ ದಾರಿ.

ದೈವ ಕೃಪೆ ಇದ್ದರೆ ನಾವು ಕರ್ಮದ ನಿಯಮಗಳಿಂದ ಬಿಡುಗಡೆ ಹೊಂದಿ
ಮುಕ್ತಿ ಪಡೆಯುತ್ತೇವೆ.

9

# ಅರಿವಿನಿಂದ ಕರ್ಮವನ್ನು ಮೀರಬಹುದು

ಕರ್ಮದಿಂದ ಉಂಟಾಗುವ ದುಃಖ ನೋವುಗಳಿಂದ ಬಿಡುಗಡೆ ಪಡೆಯಲು ಒಂದು ದಿವ್ಯಶಕ್ತಿ ಇದೆ ಎಂಬುದನ್ನು ಒಪ್ಪಿಕೊಳ್ಳುವುದು ಮೊದಲ ಹೆಜ್ಜೆ. ನಾವು ಅಜ್ಞಾನದಲ್ಲಿ ಬದುಕುತ್ತಿದ್ದೇವೆ. ಈ ಮಾಯೆಯಿಂದ ಹೊರಬಂದು ದೇಹ, ಮನಸ್ಸು ಮತ್ತು ಅಹಂಗಳನ್ನು ಮೀರುವುದು ಅಷ್ಟು ಸುಲಭವಲ್ಲ. ಆದರೆ ನಾವು ಸತ್ಯವನ್ನು ಅರಿಯುವ ಮನಸ್ಸು ಹೊಂದಿದ್ದರೆ, ಶಿಸ್ತು ಮತ್ತು ಏಕಾಗ್ರ ಮನಸ್ಸಿನಿಂದ ಅದಕ್ಕಾಗಿ ಶ್ರಮ ವಹಿಸಿದರೆ ದೇವರ ದಯೆಯಿಂದ ನಮಗೆ ಸತ್ಯದ ಅರಿವಾಗಿ ಮುಕ್ತಿ ದೊರಕಬಹುದು. ಇಲ್ಲದಿದ್ದರೆ ನಾವು ಹುಟ್ಟುತ್ತೇವೆ, ಸಾಯುತ್ತೇವೆ ಮತ್ತು ನಮ್ಮ ಕರ್ಮದ ಆಧಾರದ ಮೇಲೆ ಈ ಮಾಯಾ ಜಗತ್ತಿನಲ್ಲಿ ಮತ್ತೆ ಮತ್ತೆ ಜನ್ಮ ತಾಳುತ್ತೇವೆ.

ನಮ್ಮಲಿ ಅನೇಕರಿಗೆ ಕರ್ಮ ಏನೆಂಬುದು ಮತ್ತು ಅದನ್ನು ನಿರ್ವಹಿಸುವ ಬಗೆ ಕೂಡ ತಿಳಿದಿದೆ. ನಮಗೆ ಏನಾದರೂ ಆದರೆ ನಾವು ಅದು ನಮ್ಮ ಕರ್ಮ ಎಂದೆನ್ನುತ್ತೇವೆ. ಬೇರೆಯವರಿಗೆ ಏನಾದರೂ ಆದರೆ ಅದು ನಮ್ಮ ತಿಳಿವಿಗೆ ಮೀರಿದ್ದಾಗಿರುತ್ತದೆ. ಅದು ಅವರ ಕರ್ಮವೆಂದುಕೊಳ್ಳುತ್ತೇವೆ. ಈ ಪುಸ್ತಕವು ಕರ್ಮದ ಬಗ್ಗೆ ಸಂಪೂರ್ಣವಾಗಿ ಮತ್ತು ನೀವು ಕೊಟ್ಟದ್ದನ್ನು ಪಡೆದುಕೊಳ್ಳುತ್ತೀರಿ ಎಂಬ ಕರ್ಮದ ನಿಯಮದ ಬಗ್ಗೆ ತಿಳಿಸುತ್ತದೆ. ನೀವು ಎದುರಿಸಬೇಕಾದ ಬಹುಮುಖ್ಯ ಸವಾಲೇನು? ಅದು ಕರ್ಮದ ಬಗ್ಗೆ ಸಂಪೂಣವಾಗಿ

ತಿಳಿದುಕೊಳ್ಳುವುದಷ್ಟೇ ಅಲ್ಲ ಅದನ್ನು ಮೀರುವುದಾಗಿದೆ. ಸತ್ಯವನ್ನು ಅರಿತವನು ಮಾತ್ರ ಕರ್ಮವನ್ನು ಮೀರಬಲ್ಲ.

ನಾವು ಜೀವಂತವಿದ್ದು ಕ್ರಿಯೆಯಲ್ಲಿ ತೊಡಗಿರುವವರೆಗೂ ಕರ್ಮದ ನಿಯಮಗಳ ಪ್ರಕಾರ ಅವುಗಳೆಲ್ಲವನ್ನೂ ದಾಖಲು ಮಾಡಲಾಗುತ್ತದೆ. ನಮ್ಮ ಕ್ರಿಯೆಗಳು ಒಳ್ಳೆಯವೊ ಕೆಟ್ಟವೋ ಎಂಬ ಅಂಶ ಲೆಕ್ಕಕ್ಕೆ ಬರುವುದಿಲ್ಲ. ನಾವು ದೇಹ, ಮನಸ್ಸು ಮತ್ತು ಅಹಂಗಳಲ್ಲಿ ನಮ್ಮ ಕ್ರಿಯೆಗಳಿಗೆ ಜವಾಬ್ದಾರಿ ಹೊತ್ತು ಅಸ್ತಿತ್ವವನ್ನು ಪಡೆದುಕೊಳ್ಳುವುದು ಮುಖ್ಯವಾಗುತ್ತದೆ. ನಾವು ಒಳ್ಳೆಯ ಕ್ರಿಯೆಗಳಲ್ಲಿ ತೊಡಗಿದ್ದರೂ ಕರ್ಮದ ನಿಯಮಗಳ ಪ್ರಕಾರ ನಮ್ಮ ಸಕಾರಾತ್ಮಕ ಕರ್ಮದ ಫಲವನ್ನು ಪಡೆದುಕೊಳ್ಳಲು ಮತ್ತೆ ಹುಟ್ಟಿ ಬರಬೇಕಾಗುತ್ತದೆ. ನಾವು ದೇಹ, ಮನಸ್ಸು ಅಹಂಗಳ ಸಂಕೀರ್ಣವನ್ನು ಹೊತ್ತುಕೊಂಡು ಅದರ ಬಗ್ಗೆ ವಿಚಾರ ಮಾಡಬೇಕು, ಆಸೆಆಕಾಂಕ್ಷೆಗಳನ್ನು ಇರಿಸಿಕೊಂಡು ಹುಟ್ಟಿದ ಕೂಡಲೆ ನಮ್ಮ ದುಃಖ ನೋವುಗಳು ಕೂಡ ಪ್ರಾರಂಭವಾಗುತ್ತವೆ. ಆದ್ದರಿಂದ ನಮ್ಮ ಗುರಿ ಸಾವಿನ ನಂತರ ಮತ್ತೆ ಪುನರ್ಜನ್ಮ ಪಡೆಯುವುದರಿಂದ ಮುಕ್ತಿ. ಅಂದರೆ ಕರ್ಮದಿಂದ ಮುಕ್ತಿ ಪಡೆಯುವುದು.

ನಾನು, ನೀವುಗಳು ಬದುಕಿರುವುದು ದೇಹ, ಮನಸು ಮತ್ತು ಅಹಂಗಳ ಸಂಕೀರ್ಣದಲ್ಲಿ. ಆದರೆ ಈ ದೇಹ ಸಾಯುತ್ತದೆ. ಆದರೆ ಈ ದೇಹ ನಮ್ಮದಲ್ಲ ಎಂಬುದನ್ನು ನಾವು ತಿಳಿದರೆ ಮತ್ತು ಮನಸ್ಸು ಎಂಬುದು ಒಂದು ಭ್ರಮೆ ಎಂಬುದನ್ನು ತಿಳಿದುಕೊಂಡರೆ ನಾವು ಮತ್ತೆ ಹುಟ್ಟಿ ಬರುವುದಿಲ್ಲ. ನಾವು ಸತ್ಯವನ್ನು ಅರಿತು ಬದುಕಿದಾಗ ಮಾತ್ರ ಇದು ಸಾಧ್ಯವಾಗುತ್ತದೆ. ಆದರೆ, ಈ ಮರುಹುಟ್ಟಿನಿಂದ ಮುಕ್ತರಾಗಬೇಕಾದರೆ ನಾವು ಈ ದೇಹ, ಮನಸ್ಸುಗಳಲ್ಲವೆಂಬ ಸತ್ಯವನ್ನು ಅರಿತರಷ್ಟೇ ಸಾಲದು. ನಾವು ದೇಹ, ಮನಸ್ಸು ಮತ್ತು ಅಹಂಗಳ ಸಂಕೀರ್ಣದೊಂದಿಗೆ ಕ್ರಿಯೆಗಳಲ್ಲಿ ತೊಡಗಿದರೆ ನಾವು ಕರ್ಮವನ್ನುಂಟು

ಮಾಡುತ್ತೇವೆ. ಸವಾಲೆಂದರೆ ಈ ಕರ್ಮವನ್ನು ಉಂಟುಮಾಡುವುದನ್ನು ತಡೆಯುವುದು. ಇದು ಹೇಗೆ ಸಾಧ್ಯ?

ನಾವು ಕರ್ಮವನ್ನು ಉಂಟುಮಾಡುವುದನ್ನು ತಡೆಯಬೇಕಾದರೆ ನಾವು ದೇಹ, ಮನಸ್ಸು ಅಹಂಗಳ ಸಂಕೀರ್ಣವಲ್ಲ ಎಂಬುದನ್ನು ತಿಳಿದುಕೊಳ್ಳಬೇಕು. ಅರಿಯುವುದು ಎಂದರೆ ತಿಳಿವಳಿಕೆ ಅಷ್ಟೇ ಅಲ್ಲ ಹಾಗೆ ಬದುಕಬೇಕು ಕೂಡ. ದೇಹದ ಪಂಚೇಂದ್ರಿಯಗಳು ಆಸೆಗಳನ್ನು ಹುಟ್ಟಿಸುತ್ತವೆ. ನಾವು ಈ ಆಸೆಗಳ ಬಲೆಯಲ್ಲಿ ಸಿಕ್ಕಿಹಾಕಿಕೊಂಡರೆ, ಕಾಮನೆಗಳಿಗೆ ಶರಣಾದರೆ, ನಾವು ಕರ್ಮದ ಬಗ್ಗೆ ಸಂಪೂರ್ಣವಾಗಿ ತಿಳಿದುಕೊಂಡಿದ್ದರೂ ಅದರ ಬಗ್ಗೆ ಅರಿವನ್ನು ಪಡೆದಿರುವುದಿಲ್ಲ. ನಿಜವಾಗಿಯೂ ಅರಿವನ್ನು ಪಡೆದ ಜನ, ಆಸ್ತಿಗಳಿಂದ ನಿರ್ಲಿಪ್ತರಾಗಿ ದೂರ ಉಳಿಯುತ್ತಾರೆ. ಯಾವ ವಸ್ತುಗಳೂ ತಮಗೆ ಸೇರಿಲ್ಲವೆಂದು ಅವರಿಗೆ ಗೊತ್ತಿರುತ್ತದೆ. ಅವರು ದೇಹವನ್ನು ಹೊಂದಿದ್ದರೂ ಅದು ತಮ್ಮದಲ್ಲವೆಂದು ತಿಳಿದಿರುತ್ತಾರೆ. ದೇಹ ಕೇವಲ ಸತ್ಯವನ್ನು ತಿಳಿಯಲು ಇರುವ ಒಂದು ಸಾಧನ ಮಾತ್ರ. ದೇಹವನ್ನು ಮೀರಿದರೆ ಸಾಲದು. ಅರಿವು ಪಡೆದವನು ಮನಸ್ಸನ್ನು ಕೂಡ ಮೀರಬೇಕು. ಮನಸ್ಸನ್ನು ಮೀರುವುದು ಹೇಗೆ? ಮನಸ್ಸು ಸದಾ ವಿಚಾರಗಳನ್ನು ಹುಟ್ಟುಹಾಕುತ್ತಿರುತ್ತದೆ. ಈ ವಿಚಾರಗಳು ನಮಗೆ ಅಹಂ ಇದೆಯೆಂದು ನಂಬಿಸುತ್ತವೆ. ಈ ವಿಚಾರಗಳು ಭಾವನೆ, ಕ್ರಿಯೆಗಳನ್ನು ಹುಟ್ಟು ಹಾಕುತ್ತವೆ. ಇದರ ಪರಿಣಾಮವಾಗಿ ಕರ್ಮ ಉಂಟಾಗುತ್ತದೆ. ನಾವು ಮನಸ್ಸಲ್ಲ ಎಂದು ತಿಳಿದಾಗ ಸಾವಿರಾರು ವಿಚಾರಗಳನ್ನು ಹುಟ್ಟಿಸುವ ಮನಸ್ಸನ್ನು ಮುಚ್ಚಿಬಿಡುತ್ತೇವೆ. ಮನಸ್ಸು ಮರ್ಕಟನಂತೆ. ಅದನ್ನು ಒಬ್ಬ ಸಾಧುವನ್ನಾಗಿ ಪರಿವರ್ತಿಸಲು ಪ್ರಯತ್ನಿಸುತ್ತೇವೆ. ನಾವು ಮನಸ್ಸು ವಿಚಾರಗಳನ್ನು ಹುಟ್ಟಿಸುವ ವೇಗವನ್ನು ಕಡಿಮೆ ಮಾಡಿ, ಅದನ್ನು ಸಾಧುಗೊಳಿಸುತ್ತೇವೆ. ಮನಸ್ಸಿನಿಂದ ಭಿನ್ನವಾದ ಬುದ್ಧಿಮತ್ತೆಯನ್ನು ನಾವು ಹೊಂದಿರುತ್ತೇವೆ. ಅದು ಸೂಕ್ಷ್ಮವಾದ ದೇಹದ

ಮತ್ತೊಂದು ಭಾಗವಾಗಿದೆ. ಅದರೆ ನಮ್ಮ ಮನಸ್ಸು ಇದರ ಬಗ್ಗೆ ಗೊಂದಲಗಳನ್ನು ಹುಟ್ಟುಹಾಕುತ್ತದೆ. ನಮ್ಮ ಬುದ್ಧಿಮತ್ತೆಯನ್ನು ಬಳಸಿ ನಾವು ಮನಸ್ಸೆಂಬ ಮರ್ಕಟವನ್ನು ಬಂಧಿಸಿಡಬಹುದು. ಈ ಮೂಲಕ ಅದನ್ನು ಮೀರಬಹುದು. ನಾವು ನಮ್ಮ ಅಂಹ ಅನ್ನು ಕೂಡ ಮೀರಬೇಕು. ಮುಕ್ತಿಗಾಗಿ ನಾವು ನಡೆಯಬೇಕಾದ ಮಾರ್ಗ ಇದೇ.

ನಾವು ನಮ್ಮ ದೇಹ ಮನಸ್ಸುಗಳ ಮೇಲೆ ಸಂಪೂರ್ಣವಾದ ನಿಯಂತ್ರಣವನ್ನು ಹೊಂದಿರದಿದ್ದರೆ, ಅಹಂನ ದಾಸರಾಗುತ್ತೇವೆ. ನಾವು ಸತ್ಯವನ್ನು ಅರಿಯಲು ಪ್ರಯತ್ನಿಸಿದಾಗ ನಮ್ಮೊಳಗಿನ ನಿಜವಾದ ಶಕ್ತಿಯೊಂದಿಗೆ ಭ್ರಮಾತ್ಮಕವಾದ ಅಹಂನ ಜೊತೆಯಲ್ಲಿ ತುಮುಲ ಉಂಟಾಗುತ್ತದೆ. ಈ ಸಂದರ್ಭದಲ್ಲಿ ಸತ್ಯವನ್ನು ಅರಿಯಲು ನಮಗೆ ಬುದ್ಧಿಮತ್ತೆಯ ಸಹಾಯ ಬೇಕಾಗುತ್ತದೆ.

ನಾವು ಅಹಂ ಅಲ್ಲ. ಅದೊಂದು ಭ್ರಮೆ. ನಾವೊಂದು ಶಕ್ತಿ. ಅದೇ ಸತ್ಯ. ನಾವು ಸತ್ಯವನ್ನು ಅರಿತು ಬದುಕಿದಾಗ ಕರ್ಮವನ್ನು ಉಂಟುಮಾಡುವುದಿಲ್ಲ. ಆಗ ನಾವು ಕರ್ಮವನ್ನು ಗಳಿಸುವುದನ್ನಷ್ಟೇ ನಿಲ್ಲಿಸುವುದಿಲ್ಲ, ಬದಲು ನಮ್ಮ ಹಿಂದಿನ ಕರ್ಮಗಳೂ ಕೂಡ ಸಾಗರದಲ್ಲಿನ ಸಪಾಟು ಕಲ್ಲುಗಳಂತೆ ಕಳಚಿ ಬೀಳುತ್ತವೆ. ಇದು ಸಾಧ್ಯವಾಗುವುದು ನಾವು ದೇಹ, ಮನಸ್ಸು ಮತ್ತು ಅಹಂನ ಸಂಕೀರ್ಣವಲ್ಲ ಬದಲು ದೈವಿಕ ಶಕ್ತಿಯ ಒಂದು ತುಣುಕಾಗಿದ್ದು, ದೇಹಕ್ಕೆ ಜೀವ ನೀಡುವ ಪ್ರಾಣಶಕ್ತಿ ಎಂದು ಅರಿತಾಗ. ಇದಕ್ಕಿಂತಲೂ ಹೆಚ್ಚಿನದೇನನ್ನೂ ನಾವು ತಿಳಿದಿಲ್ಲ. ಆಚೆನದನ್ನು ಅರಿಯುವ ಶಕ್ತಿಯನ್ನು ನಾವು ಪಡೆದುಕೊಂಡಿಲ್ಲ.

ಅರಿವನ್ನು ಪಡೆಯುವುದು ಕೇವಲ ಸಾಮಾನ್ಯರಿಗೆ ಸಾಧ್ಯವಿಲ್ಲ. ಮಾನವಕೋಟಿಯ

ಕೇವಲ 0.00001% ಭಾಗ ಮಾತ್ರ ಈ ಸತ್ಯವನ್ನು ಅರಿತು ಅದರಂತೆ ಬದುಕಲು ಸಾಧ್ಯವಾಗುತ್ತದೆ. ಇದಕ್ಕೆ ಕಾರಣ ನಾವು ಮಾಯೆಯ ದಾಸರಾಗಿರುವುದು. ನಾವು ದೇಹ, ಮನಸ್ಸುಗಳನ್ನು ನಿಯಂತ್ರಿಸುವುದರ ಬದಲು ಅವುಗಳು ನಮ್ಮನ್ನು ನಿಯಂತ್ರಿಸುತ್ತವೆ.

ನಿಜವಾದ ಸಾಧಕರು ಕರ್ಮವನ್ನು ಮೀರಿ ಮುಕ್ತಿ ಪಡೆಯುವ ಸಲುವಾಗಿ ಸತ್ಯದ ಅನ್ವೇಷಣೆಯಲ್ಲಿ ತೊಡಗುತ್ತಾರೆ. ಆದರೆ, ಹಾಗೆ ಮುಕ್ತಿ ಪಡೆದವರು ಒಂದೇ ರಿತಿಯ ಮಾರ್ಗವನ್ನೇನೂ ಅನುಸರಿಸಿರುವುದಿಲ್ಲ.

ಅರಿವು ಎಂದರೆ ಜ್ಞಾನೋದಯ. ಇದು ಒಂದು ರಿತಿಯಲ್ಲಿ ಏನೂ ಕಾಣಿಸದ ಕತ್ತಲೆ ಕೋಣೆಯಲ್ಲಿದ್ದಂತೆ. ಸ್ವಿಚ್ ಹಾಕುತ್ತಿದ್ದಂತೆ ಬಲ್ಬ್ ಬೆಳಕು ಚೆಲ್ಲಿ, ಕತ್ತಲೆ ಮಾಯವಾಗುತ್ತದೆ. ಅರಿವು ಕೂಡ ಹಾಗೆಯೇ. ಅಜ್ಞಾನವನ್ನು ತೊಲಗಿಸಿ ನಿಮ್ಮನ್ನು ಮುಕ್ತಗೊಳಿಸುತ್ತದೆ. ಅಜ್ಞಾನದಲ್ಲಿ ಮುಳುಗಿರುವವರೆಗೂ ನಮಗೆ ಸತ್ಯ ಕಾಣಿಸುವುದಿಲ್ಲ. ಉದಾಹರಣೆಗೆ ನೀವು ಕತ್ತಲಲ್ಲಿ ಹಾವೊಂದನ್ನು ನೋಡುತ್ತೀರಿ ಎಂದಿಟ್ಟುಕೊಳ್ಳಿ. ಅದು ಹಾವಲ್ಲ ಎಂದು ಅರಿವಾಗುವವರೆಗೂ ನಿಮ್ಮ ಅಜ್ಞಾನ ನಿಮಗೆ ತಿಳಿಯುವುದಿಲ್ಲ. ಅದೊಂದು ಹಗ್ಗವಾಗಿದ್ದು ಕತ್ತಲಲ್ಲಿ ಹಾವಿನಂತೆ ಕಂಡಿತು ಎಂದು ತಿಳಿಯುವುದಿಲ್ಲ. ಒಮ್ಮೆ ಇದು ಅರಿವಾದೊಡನೆ ನಿಮ್ಮ ಭಯ ಹಾರಿ ಹೋಗುತ್ತದೆ.

ಎರಡು ಕಾರಣಗಳಿಗಾಗಿ ಈ ಅಜ್ಞಾನವುಂಟಾಗುತದೆ. ಮೊದಲನೆಯದು ನಮ್ಮ ಮನಸ್ಸು ಸುಳ್ಳು ಸುಳ್ಳೆ ಹಾವನ್ನು ಬಿಂಬಿಸುತ್ತದೆ. ಎರಡನೆಯದು ಹಗ್ಗವನ್ನು ನಾವು ಗಮನಿಸದೇ ಹೋದದ್ದು. ಅದು ಹಗ್ಗ ಎಂದು ಅರಿವಾದ ಕೂಡಲೇ ನಮ್ಮ ಅಜ್ಞಾನ ಹೊರಟು ಹೋಗುತ್ತದೆ. ಅದೇ ರಿತಿ ಸತ್ಯವನ್ನು ಅರಿತಾಗ ಜೀವ ಎನ್ನುವುದು ದೇಹ ಮನಸ್ಸುಗಳಲ್ಲ,

ಬದಲು ಪ್ರಾಣಶಕ್ತಿ ಎನ್ನುವುದು ತಿಳಿಯುತ್ತದೆ. ಅಜ್ಞಾನವನ್ನು ತೊಡೆದು ಹಾಕುವ ಮೂಲಕ ನಾವು ಕರ್ಮದಿಂದ ಮುಕ್ತಿಯನ್ನು ಪಡೆಯುತ್ತೇವೆ. ನಾವು ದೇಹ, ಮನಸ್ಸು ಮತ್ತು ಅಹಂಗಳಿಂದ ಬದುಕುವುದರಿಂದ ಕರ್ಮವನ್ನು ಉಂಟುಮಾಡುತ್ತೇವೆ. ನಾವು ದೈವಿಕ ಶಕ್ತಿ ಎಂಬುದನ್ನು ಅರಿತಾಗ ಕರ್ಮದಿಂದ ಮುಕ್ತಿ ಪಡೆಯುತ್ತೇವೆ. ಈ ರೀತಿ ಮುಕ್ತಿಯನ್ನು ಪಡೆಯುವ ಮಾರ್ಗವಾದರೂ ಯಾವುದು?

**ನಾವೇನೇ ಮಾಡಿದರೂ ಕೂಡ, ನಾವು ಯಾರೂ ಕೂಡ**
**ಕರ್ಮದಿಂದ ತಪ್ಪಿಸಿಕೊಳ್ಳಲಾಗುವುದಿಲ್ಲ.**
**ಕ್ರಿಯೆಯನ್ನು ಮಾಡುತ್ತಿರುವವನು ನಾನಲ್ಲ ಎಂದು**
**ಯಾರು ಅರಿವನ್ನು ಪಡೆಯುತ್ತಾರೆಯೋ**
**ಅವರು ಕರ್ಮದಿಂದ ಮುಕ್ತಿ ಪಡೆಯುತ್ತಾರೆ.**

# ಸಾರಾಂಶ:

# ಅರಿವಿನಿಂದ ಕರ್ಮವನ್ನು ಮೀರಬಹುದು

ಅರಿವನ್ನು ಪಡೆದಾಗ ನಾವು ಕರ್ಮವನ್ನು ಉಂಟುಮಾಡುವುದಿಲ್ಲ.

ಕರ್ಮಗಳನ್ನು ಕಳಚಿಕೊಳ್ಳುತ್ತೇವೆ.
ನಾವು ದೇಹ, ಮನಸ್ಸು, ಅಹಂ ಅಲ್ಲ ಎಂಬುದನ್ನು
ಯಾವಾಗ ತಿಳಿಯುತ್ತೇವೆಯೋ
ಆಗ ಕರ್ಮವನ್ನು ಮೀರುತ್ತೇವೆ.

ನಮ್ಮ ಒಳ್ಳೆಯ ಕ್ರಿಯೆಗಳಾಗಲಿ, ಕೆಟ್ಟ ಕ್ರಿಯೆಗಳಾಗಲಿ ನಮಗೆ ಸೇರಿದವಲ್ಲ

ಎಂಬುದನ್ನು ನಾವು ತಿಳಿಯಬೇಕು.

ನಮ್ಮೊಳಗೆ ದೈವಿಕ ಶಕ್ತಿಯೊಂದು ಇದೆ ಎಂಬುದನ್ನು ತಿಳಿಯಬೇಕು.
ಇದು ಅರಿವಾದಾಗ ಕರ್ಮದ ಎಲ್ಲಾ ಖಾತೆಗಳು ಕಳಚಿಹೋಗಿ ಮುಕ್ತಿ ಸಿಗುತ್ತದೆ.

ಕರ್ಮದ ಬಗ್ಗೆ ಸಂಪೂರ್ಣ ತಿಳಿವಳಿಕೆ ಇದ್ದರೆ ಸಾಲದು
ದೇಹ, ಮನಸ್ಸು, ಅಹಂ ಆಗಿ ಬಾಳದೆ ಆತ್ಮವಾಗಿ ಬಾಳಬೇಕು.

# 10

# ಅರಿವಿನ ವಿಧಾನಗಳು

ಕರ್ಮಕ್ಕೂ ಅರಿವಿಗೂ ಇರುವ ನಂಟೇನು? ಇವೆರಡಕ್ಕೂ ನೇರವಾದ ನಂಟಿದೆ. ಅರಿವಿನೊಂದಿಗೆ ಕರ್ಮವು ಕೊನೆಗೊಳ್ಳುತ್ತದೆ. ಅರಿವನ್ನು ಪಡೆಯದೇ ಹೋದರೆ ಕರ್ಮ ಮುಂದುವರೆಯುತ್ತದೆ.

ಕರ್ಮವು ಯಾವುದಕ್ಕೆ ಸೇರಿದ್ದು? ದೇಹಕ್ಕೊ ಅಥವಾ ಮನಸ್ಸಿಗೊ? ಅರಿವು ನಮಗೆ ನಾವು ದೇಹವಾಗಲಿ, ಮನಸ್ಸಾಗಲಿ ಅಲ್ಲವೆಂಬ ತಿಳಿವಳಿಕೆಯನ್ನು ಮೂಡಿಸುತ್ತದೆ. ನಿಜ ಹೇಳಬೇಕೆಂದರೆ, ಕರ್ಮ ನಮಗೆ ಸೇರಿದ್ದಲ್ಲ, ನಾವು ಕ್ರಿಯೆಗಳಲ್ಲಿ ತೊಡಗಿಕೊಳ್ಳುವ ಮತ್ತು ಕರ್ಮವನ್ನು ಉಂಟುಮಾಡುವ ದೇಹ, ಮನಸ್ಸು ಮತ್ತು ಆತ್ಮಗಳಿಗೆ ಜೀವ ನೀಡುವ ಪ್ರಾಣಶಕ್ತಿ ಎಂಬ ಸತ್ಯವನ್ನು ಅರಿತಾಗ ಕರ್ಮದಿಂದ ಮುಕ್ತರಾಗುತ್ತೇವೆ. ನಮ್ಮ ದುಃಖ, ನೋವುಗಳು, ಸಾವು, ಮರು ಹುಟ್ಟುಗಳಿಂದ ಉಂಟಾಗುತ್ತವೆ.

ಈ ಅರಿವನ್ನು ಪಡೆಯುವ ಹಲವಾರು ವಿಧಾನಗಳಿವೆ.

**ವಿಧಾನ 1: ಒಳಗನ್ನು ಧ್ಯಾನಿಸುವ ವಿಧಾನ**

ನಮ್ಮ ಒಳಗನ್ನು ಧ್ಯಾನಿಸುವುದು ಮೊದಲ ವಿಧಾನ. ಒಬ್ಬ ರಾಜನಿಗೆ ತಾನು ಒಬ್ಬ ಬಿಕಾರಿ

ಎಂಬಂತೆ ಕನಸು ಬಿತ್ತು. ಯುದ್ಧದಲ್ಲಿ ಸೋತು ತನ್ನ ರಾಜ್ಯವನ್ನು ಕಳೆದುಕೊಂಡು ದುಃಖ, ನೋವು, ಹಸಿವೆಗಳಿಂದ ಬಳಲುತ್ತಿರುವಂತೆ ಅವನಿಗೆ ಕನಸಿನಲ್ಲಿ ಭಾಸವಾಗಿತ್ತು. ಅವನಿಗೆ ಎಷ್ಟು ನೋವಾಗಿತ್ತೆಂದರೆ, ಅವನಿಗೆ ಭಿಕ್ಷೆ ಬೇಡಲಾಗಲಿ, ಅಳಲಾಗಲಿ ಶಕ್ತಿಯೇ ಉಳಿದಿರಲಿಲ್ಲ.

ಈ ನಿಸ್ಸಹಾಯಕ ಸ್ಥಿತಿಯಲ್ಲಿದ್ದಾಗ ಅವನಿಗೆ ಕನಸಿನಿಂದ ಎಚ್ಚರವಾಗಿ, ತಾನು ಅರಮನೆಯಲ್ಲಿಯೇ ಇರುವುದು ಗೊತ್ತಾಗುತ್ತದೆ. ಆದರೆ ಅವನು ಕಂಡ ಕೆಟ್ಟ ಕನಸು ಎಷ್ಟು ಪ್ರಭಾವ ಬೀರಿತ್ತೆಂದರೆ, ನಾನು ರಾಜನಾಗಿರುವೆನೆಂದು ಕನಸು ಕಾಣುತ್ತಿರುವ ಭಿಕ್ಷುಕನೇ ಅಥವಾ ಭಿಕ್ಷುಕನೆಂದು ಕನಸು ಕಾಣುತ್ತಿರುವ ರಾಜನೇ ಎಂದು ಗೊಂದಲವಾಯಿತು. ಅವನು ತನಗೆ ತಾನೇ ಪ್ರಶ್ನೆಯನ್ನು ಕೇಳಿಕೊಳ್ಳತೊಡಗಿದ. ನಾನು ರಾಜನೆ ಅಥವಾ ಭಿಕ್ಷುಕನೆ? ಆಗ ಅರಮನೆಯ ಮಾರ್ಗವಾಗಿ ಹಾದು ಹೋಗುತ್ತಿದ್ದ ಸಾಧು ಒಬ್ಬನು ಚಿಂತಾಕ್ರಾಂತನಾಗಿದ್ದ ರಾಜನ ಬಳಿ ಬಂದು ನೀನು ರಾಜನೂ ಅಲ್ಲ, ಬಿಕ್ಷುಕನೂ ಅಲ್ಲ. ಆದರೆ ನೀನು ನಿನ್ನ ಮನಸ್ಸಿನ ಎರಡು ಜಾಗೃತ ಸ್ಥಿತಿಗಳನ್ನು- ಎಚ್ಚರದ ಸ್ಥಿತಿ ಮತ್ತು ಕನಸಿನ ಸ್ಥಿತಿಗಳನ್ನು- ಗಮನಿಸುತ್ತಿರುವೆ ಎಂದು ಹೇಳಿದನು.

ಈ ಅಂಶವನ್ನೇ ತೆಗೆದುಕೊಳ್ಳುವುದಾದರೆ, ನಾವು ಸತ್ಯವನ್ನು ಅರಿಯಲು ನಮ್ಮೊಳಗೆ ನೋಡಿಕೊಂಡು ಧ್ಯಾನಿಸಬೇಕಾಗುತ್ತದೆ. ಜಾಗೃತ ಸ್ಥಿತಿಯಲ್ಲಿ ನಮ್ಮ ದೇಹ ಮನಸ್ಸುಗಳು ಎಚ್ಚರವಿದ್ದು, ನಾವು ಯಾರು ಎಂಬುದು ನಮಗೆ ತಿಳಿದಿರುತ್ತದೆ. ಕನಸಿನ ಸ್ಥಿತಿಯಲ್ಲಿ ದೇಹವು ನಿದ್ರಿಸಿದ್ದು ಮನಸ್ಸು ಎಚ್ಚರವಾಗಿರುತ್ತದೆ. ಹಾಗಾಗಿ ಮನಸ್ಸು ಕಲ್ಪಿಸಿದ್ದನ್ನು ನಾವು ಕಾಣುತ್ತೇವೆ. ನಾವು ಆಳವಾದ ನಿದ್ರೆಗೆ ಜಾರಿದಾಗ ದೇಹ ಮತ್ತು ಮನಸ್ಸುಗಳೆರಡೂ ನಿದ್ರಿಸಿದ್ದು ನಾವು ತಿಳಿಯಾಗುತ್ತೇವೆ. ಈ ಸ್ಥಿಯಲ್ಲಿ ಆನಂದವನ್ನು ಅನುಭವಿಸುತ್ತೇವೆ.

ಮನಸ್ಸಿನ ಈ ಮೂರೂ ಸ್ಥಿತಿಗಳು ಅಂದರೆ ಎಚ್ಚರ, ಕನಸು ಮತ್ತು ಆಳ ನಿದ್ರೆಯನ್ನು ನಾವು, ಅಂದರೆ ನಮ್ಮ ನಿಜವಾದ ಆತ್ಮ ಅನುಭವಿಸುತ್ತದೆ.

ಈ ಮೂರೂ ಸ್ಥಿತಿಗಳನ್ನು ಕಾಣುವ ನಾಲ್ಕನೆಯ ಆಯಾಮ ನಾವಾಗಿದ್ದೇವೆ. ನಾವು ಎಚ್ಚರ, ಕನಸು, ನಿದ್ರೆ ಈ ಯಾವುದೂ ಆಗುವುದಿಲ್ಲ. ನಾವು ಈ ಮೂರೂ ಸ್ಥಿತಿಗಳನ್ನು ಅನುಭವಿಸುತ್ತೇವೆ ಅಷ್ಟೆ. ಈ ಮೂರೂ ಸ್ಥಿತಿಗಳ ಮೂಲಕ ಹಾದು ಹೋಗುತ್ತಿರುವವರು ಯಾರು? ನಾವು, ಅಂದರೆ ಪ್ರಾಣಶಕ್ತಿ-ಈ ಮೂರೂ ಸ್ಥಿತಿಗಳ ಸತ್ಯವನ್ನು ಅರಿಯುತ್ತೇವೆ. ಹೇಗೆ ರಾಜನು ಕನಸಿನಲ್ಲಿ ಕಂಡದ್ದು ತಾನು ರಾಜನೂ ಅಲ್ಲ ಭಿಕ್ಷುಕನೂ ಅಲ್ಲವೆಂಬುದನ್ನು ಅರಿತನೋ ಹಾಗೆ. ರಾಜ ಮತ್ತು ಭಿಕ್ಷುಕನ ಪಾತ್ರಗಳನ್ನು ಅನುಭವಿಸಿದ ರಾಜನ ಮಾನಸಿಕ ಸ್ಥಿತಿ ಮಾತ್ರ. ಈ ಅನುಭವಗಳನ್ನು ಪಡೆದ ಪ್ರಾಣಶಕ್ತಿ ಮಾತ್ರ.

ನಾವು ನಿಜವಾಗಿ ಯಾರು ಎಂಬುದರ ಬಗ್ಗೆ ಧ್ಯಾನಿಸಿದಾಗ, ನಾವೊಬ್ಬ ಕೇವಲ ನೋಡುಗ -ನಾಲ್ಕನೆಯ ಆಯಾಮ ಎಂಬುದು ಅರಿವಾಗುತ್ತದೆಯೇ ಹೊರತು ಎಚ್ಚರ, ಕನಸು, ನಿದ್ರೆಗಳ ಮೂರು ಸ್ಥಿತಿಗಳಲ್ಲ. ನಾವು ಪ್ರಾಣಶಕ್ತಿ. ಇದನ್ನು ಅರಿತವರು ಕರ್ಮದಿಂದ ಮುಕ್ತಿ ಪಡೆಯುತ್ತಾರೆ.

**ವಿಧಾನ 2: ಪ್ರಶ್ನಿಸುವ ವಿಧಾನ**

ಪ್ರಶ್ನಿಸುವುದು ಅರಿಯುವ ಒಂದು ಸರಳ ವಿಧಾನ. ಈ ಜಗತ್ತು, ಸೂರ್ಯ-ಚಂದ್ರ, ತಾರೆ, ಹೂಗಳು, ಪಕ್ಷಿಗಳು, ಪ್ರಾಣಿಗಳು ಇವೆಲ್ಲವುಗಳು ಎಲ್ಲಿಂದ ಬಂದವು ಎಂಬ ಪ್ರಶ್ನೆಯನ್ನು ನಾವು ಕೇಳಿಕೊಳ್ಳಬಹುದು. ನಾವು ಸೃಷ್ಟಿಯಾದದ್ದು ಹೇಗೆ? ಜೈವಿಕವಾಗಿ ಗಂಡು ಹೆಣ್ಣಿನ

ಭ್ರೂಣಗಳು ಒಂದಾಗಿ ಮಿಳಿತವಾದಾಗ ನಾನು ಒಂದು ಮಗುವಾಗಿ ಹುಟ್ಟಿ ಜೀವ ತಾಳಿದೆ. ಆದರೆ, ಇವೆಲ್ಲಾ ನಡೆದದ್ದು ಹೇಗೆ? ಸೃಷ್ಟಿಯ ಗುಟ್ಟಾದರೂ ಏನು? ಮೊದಲು ಬಂದದ್ದು ಯಾವುದು? ಮೊಟ್ಟೆಯೋ ಅಥವಾ ಕೋಳಿ ಮರಿಯೊ? ಮೊಟ್ಟೆಯು ತಾನೇ ಮೊದಲೆನ್ನುತ್ತದೆ. ನಾನಿಲ್ಲದೆ ಕೋಳಿಮರಿ ಹೇಗೆ ಬಂದೀತು? ಎಂದು ಅದು ಕೇಳುತ್ತದೆ. ಆದರೆ, ಕೋಳಿ ಮರಿಯು ತಾನೆ ಮೊದಲು ಎನ್ನುತ್ತದೆ. ನಾನಿಲ್ಲದೆ ಮೊಟ್ಟೆ ಎಲ್ಲಿ? ಎಂದು ಅದು ಕೇಳುತ್ತದೆ. ಈ ಪ್ರಶ್ನೆಯನ್ನು ಸ್ವಲ್ಪ ಆಳವಾಗಿ ನೋಡಿ. ಇವೆರಡೂ ಮೊದಲು ಬರಲಿಲ್ಲವೆಂದು ನಿಮಗೆ ಗೊತ್ತಾಗುತ್ತದೆ. ಅವೆರಡೂ ಒಂದೇ ಸಮಯದಲ್ಲಿ ಹುಟ್ಟಿಕೊಂಡದ್ದು ಎಂದು ತಿಳಿಯುತ್ತದೆ. ಅಂದರೆ ಇಡೀ ಜಗತ್ತಿನಲ್ಲಿರುವುದೆಲ್ಲವೂ ಅವುಗಳ ರೂಪ ಆಕಾರಗಳನ್ನು ಹೊರತುಪಡಿಸಿ ಒಂದೇ ಪ್ರಾಣಶಕ್ತಿಯ ಭಿನ್ನ ಭಿನ್ನ ರೂಪಗಳೆಂದು ತಿಳಿಯುತ್ತದೆ. ಉತ್ತರವನ್ನು ಅರಸುವವರು ಬಹಳ ತಾಳ್ಮೆಯಿಂದಿರಬೇಕಾಗುತ್ತದೆ. ಅವರು ಈ ಜಗತ್ತಿನಲ್ಲಿರುವ ಸಕಲ ವಸ್ತುಗಳ ಬಗ್ಗೆ ಇವು ಎಲ್ಲಿಂದ ಬಂದವು ಎಂಬ ಪ್ರಶ್ನೆಯನ್ನು ಕೇಳುತ್ತಾರೆ. ಉತ್ತರ ಸಿಗುವವರೆಗೂ ನಿರಂತರವಾಗಿ ಪ್ರಶ್ನೆಗಳನ್ನು ಕೇಳುತ್ತಲೇ ಇರುತ್ತಾರೆ.

ನಾವು ಜೀವ ತಳೆದಾಗ ಕೇವಲ ಒಂದು ಭ್ರೂಣವಷ್ಟೆ? ಅದರಿಂದ ಜೀವ ಬೆಳೆಯುತ್ತದೆ. ಈ ಪ್ರಾಣಶಕ್ತಿಯ ಮೂಲಕ ನಮ್ಮ ದೇಹ ಬೆಳೆದು, ನಾವು ಈ ಜಗತ್ತಿನಲ್ಲಿ ಹುಟ್ಟಿ ಬರುತ್ತೇವೆ.

ಹಾಗಿದ್ದರೆ ನಿಜವಾಗಿಯೂ ನಾವು ಯಾರು? ಹುಟ್ಟಿದ ಮಗುವೋ ಅಥವಾ ಭ್ರೂಣವೋ? ಮಗುವಾಗಿ ಹುಟ್ಟಿದ ನಾವು ಭ್ರೂಣವೂ ಅಲ್ಲ, ಮಗುವೂ ಅಲ್ಲ, ಒಂದು ಪ್ರಾಣಶಕ್ತಿ ಎಂದು ಯಾರು ತಿಳಿದಿರುತ್ತಾರೆಯೋ ಅವರು ಅರಿವನ್ನು ಪಡೆದುಕೊಂಡಿರುತ್ತಾರೆ.

ಹಾಗಾದರೆ ನಂತರ ಏನು ನಡೆಯುತ್ತದೆ? ನಮ್ಮ ದೇಹ ಬೆಳೆದು ದೊಡ್ಡದಾಗುತ್ತದೆ. ಅದು

ಹೇಗೆ ಬೆಳೆಯುತ್ತದೆ? ನಾವು ತಿನ್ನುವ ಆಹಾರದಿಂದಾಗಿ ಅದು ಬೆಳೆಯುತ್ತದೆ. ಹಾಗಿದ್ದರೆ ಈ ದೇಹ ಬೆಳೆಯಲು ಕಾರಣವಾದ ಆಹಾರವೇ ನಾವು? ಇಲ್ಲ ಅದೇ ದೇಹ, ಮನಸ್ಸು, ಅಹಂ ಬೆಳೆಯುತ್ತದೆ, ಅದಕ್ಕೆ ವಯಸ್ಸಾಗುತ್ತದೆ ಮತ್ತು ಸತ್ತು ಕೊಳೆಯುತ್ತದೆ. ಸಾವಿನ ನಂತರ?

ದೇಹ ಸತ್ತಾಗ ಅದು ಹಾಗೆಯೇ ಇರುತ್ತದೆ. ದೇಹದ ರೂಪದಲ್ಲಿ ಯಾವುದೇ ಬದಲಾವಣೆಗಳಿರುವುದಿಲ್ಲ. ಹಾಗಿದ್ದರೆ ಸತ್ತವರು ಯಾರು? ಎಂಬ ಪ್ರಶ್ನೆ ಏಳುತ್ತದೆ. ಪ್ರಾಣಶಕ್ತಿಯನ್ನು ಹೊಂದಿದ್ದ ದೇಹವು ಆ ಶಕ್ತಿಯನ್ನು ಕಳೆದುಕೊಂಡು ಮೃತ ಪಡುತ್ತದೆ. ಹಾಗಿದ್ದರೆ ನಾವು ಯಾರು? ನೆಲದ ಮೇಲೆ ನಿಶ್ಚಲವಾಗಿ ಮಲಗಿರುವ ದೇಹವೋ, ಇಲ್ಲ ಪ್ರಾಣಶಕ್ತಿಯೋ? ಸಾವನ್ನಪ್ಪಿದಾಗ ಈ ದೇಹ ನಮ್ಮದಾಗಿರುವುದಿಲ್ಲ. ಈ ಸತ್ಯವನ್ನು ನಾವು ತಿಳಿದುಕೊಂಡಿರುವುದಿಲ್ಲ.

ದೇಹ ಬೆಳೆದು ಮುಪ್ಪಾಗಬಹುದು, ನಂತರ ಸಾಯಬಹುದು. ಆದರೆ ನಾವು ಸಾಯುವುದಿಲ್ಲ. ಇದಕ್ಕೆ ಕಾರಣ ಆ ದೇಹ ನಾವಲ್ಲ. ಸತ್ಯವನ್ನು ಅರಸುವವರು ತಾವು ದೇಹ, ಮನಸ್ಸು ಮತ್ತು ಅಹಂನ ಸಂಕೀರ್ಣವಲ್ಲ ಎಂಬುದನ್ನು ಆಳವಾದ ವಿಮರ್ಶೆಯ ನಂತರ ಕಂಡುಕೊಳ್ಳುತ್ತಾರೆ. ಮೊದಲು ಮನಸ್ಸು ಇದನ್ನು ಒಪ್ಪಿಕೊಳ್ಳಲು ನಿರಾಕರಿಸುತ್ತದೆ. ಆದರೆ ನಾವು ನಮ್ಮ ಬುದ್ಧಿಮತ್ತೆಯನ್ನು ಹೆಚ್ಚು ಹೆಚ್ಚಾಗಿ ಬಳಸಿದಂತೆ ಅಜ್ಞಾನ ತೊಲಗಿ ಅರಿವು ಮೂಡುತ್ತದೆ. ಆಗ ನಾವು ನಮ್ಮೆಲ್ಲಾ ಕರ್ಮಗಳಿಂದ ಮುಕ್ತರಾಗುತ್ತೇವೆ.

**ವಿಧಾನ 3: ಧ್ಯಾನಸ್ಥ ವಿಧಾನ**

ಮತ್ತೊಂದು ವಿಧಾನವೆಂದರೆ ಧ್ಯಾನ. ಈ ವಿಧಾನದ ಮೂಲಕ ನಾವು ನಮ್ಮ ಮನಸ್ಸು

ವಿಚಾರ ಮಾಡುವ ವೇಗವನ್ನು ಕಡಿಮೆ ಮಾಡಬಹುದು. ಕೇವಲ ಒಂದೇ ಒಂದು ವಿಚಾರದ ಮೇಲೆ ನಮ್ಮ ಮನಸ್ಸನ್ನು ಕೇಂದ್ರೀಕರಿಸಬಹುದು. ಹಾಗಾಗಿ ನಾವು ವಿಚಾರ ಮಾಡುವ ವೇಗವನ್ನು ತಗ್ಗಿಸಬಹುದು. ಸವಾಲಿನ ವಿಷಯವೆಂದರೆ, ನಮ್ಮ ಪಂಚೇಂದ್ರಿಯಗಳನ್ನು ಸ್ಥಗಿತಗೊಳಿಸಿ, ಕೇವಲ ಒಂದೇ ಒಂದು ವಿಚಾರದ ಮೇಲೆ ಕೇಂದ್ರೀಕರಿಸುವಂತೆ ಮಾಡುವುದು. ಅದೆಂದರೆ- ನಾನು ಯಾರು? ಇದು ನನ್ನ ದೇಹವೇ? ಇದು ನನ್ನ ಮನಸ್ಸೇ? ಈ ವಿಧಾನದ ಮೂಲಕ ದೇಹ ಮತ್ತು ಮನಸ್ಸುಗಳನ್ನು ನಿಶ್ಚಲಗೊಳಿಸಬಹುದು. ಈ ದೇಹ ನನ್ನದೇ? ಹಾಗಿದ್ದರೆ ಅದು ಹುಟ್ಟಿದಾಗಿನ ದೇಹವೇ ಅಥವಾ ಬೆಳೆದು ನಿಂತಿರುವ ಈಗಿನ ದೇಹವೇ? ಅಥವಾ ವಯಸ್ಸಾಗಿ ಸಾಯುವ ದೇಹ ನಾನೆಯೇ? ದೇಹವು ಸದಾಕಾಲ ಬದಲಾಗುತ್ತಿರುತ್ತದೆ. ಅದರ ಬಗ್ಗೆ ಆಳವಾಗಿ ಧ್ಯಾನಿಸುವುದು ಅರಿವಿಗೆ ಮತ್ತು ಮುಕ್ತಿಗೆ ಕಾರಣವಾಗುತ್ತದೆ. ಧ್ಯಾನದ ಮತ್ತೊಂದು ವಿಧಾನವೆಂದರೆ, ಸಾಗರದ ಅಲೆಗಳ ಮೇಲೆ ಧ್ಯಾನಿಸುವುದು. ಅಲೆಗಳಂತೆ ಕಾಣುವುದು ನಿಜವಾಗಿಯೂ  ಅಲೆಗಳೆ? ನಾವು ಸಾಗರದ ಮೇಲೆ ಧ್ಯಾನಿಸಿದರೆ ಸಾಗರದ ಅಲೆಗಳು ಬಂದು ಹೋಗುವುದನ್ನು ನೋಡಬಹುದು. ಅವುಗಳಿಗೆ ತಮ್ಮದೇ ಆದ ಅಸ್ತಿತ್ವವಿಲ್ಲ. ಆದರೆ ಅವು ಅಸ್ತಿತ್ವವನ್ನು ಪಡೆದಂತೆ ಕಾಣುತ್ತವೆ. ಸಾಗರ ಮತ್ತು ಅದರ ಅಲೆಗಳ ಮೇಲೆ ನಮ್ಮ ಮನಸ್ಸನ್ನು ಕೇಂದ್ರೀಕರಿಸಿ ಆಳವಾಗಿ ಧ್ಯಾನಿಸುವುದರಿಂದ ನಾವು ಸಾಗರ ಮತ್ತು ಅಲೆಗಳ ನಡುವಿನ ವ್ಯತ್ಯಾಸಗಳನ್ನು ಅಳಿಸಿ ಹಾಕಬಹುದು. ಅಲೆಗಳು ಸಾಗರ ಉಂಟುಮಾಡುವ ಪರಿಣಾಮ ಮಾತ್ರ ಎಂದು ನಮಗೆ ತಿಳಿಯುತ್ತದೆ. ಸಾಗರ ಕಾರಣವಾದರೆ, ಅಲೆಗಳು ಅದರ ಪರಿಣಾಮವಾಗಿವೆ. ಆದರೆ ನಾವು ನಮ್ಮ ಮನಸ್ಸನ್ನು ಕೇಂದ್ರೀಕರಿಸದೆ ಈ ಸತ್ಯವನ್ನು ಅರಿಯುವುದು ಕಷ್ಟ.

ಧ್ಯಾನದ ಮೂಲಕ ನಾವು ನಮ್ಮ ಮನಸ್ಸನ್ನು ನಿಶ್ಚಲಗೊಳಿಸಬಹುದು. ಅದು ಅಲ್ಲಿ-ಇಲ್ಲಿ ಹರಿದಾಡುವುದನ್ನು ತಪ್ಪಿಸಬಹುದು. ಆಗ ಸತ್ಯದ ಅರಿವಾಗುತ್ತದೆ. 'ನಾನು ಯಾರು?'

ಎನ್ನುವುದರ ಮೇಲೆ ನಾವು ಸರಳವಾಗಿ ಕೇಂದ್ರೀಕರಿಸಿ ಧ್ಯಾನಿಸುವುದರಿಂದ ನಮಗೆ ಈ ಅನುಭವವಾಗಿ, ಕರ್ಮದಿಂದ ಮುಕ್ತರಾಗುತ್ತೇವೆ.

**ವಿಧಾನ 4: ಸುಲಿಯುವ ವಿಧಾನ**

ಈ ವಿಧಾನವು ಈರುಳ್ಳಿಯನ್ನು ಸುಲಿದಂತೆ. ಈರುಳ್ಳಿ ಇಲ್ಲವಾಗುವವರೆಗೂ ಸುಲಿಯುತ್ತಲೇ ಹೋಗುತ್ತೀರಿ. ಅದೇ ರೀತಿ ದೇಹವೂ ಕೂಡ ಅನೇಕ ಸ್ತರಗಳಿಂದ ಕೂಡಿದೆ. ಮೊದಲ ಸ್ತರ ನಮ್ಮ ಒಳ ಉಡುಪುಗಳಾದರೆ, ನಂತರದ್ದು ನಾವು ಧರಿಸಿದ ಉಡುಪು. ಮೂರನೆಯ ಸ್ತರ ನಮ್ಮನ್ನು ಬೆಚ್ಚಗಿಡುವ ಬೆಚ್ಚಗಿನ ಉಡುಪುಗಳು. ನಾಲ್ಕನೆಯದು ಓವರ್ ಕೋಟ್. ನೀವು ಒಂದೊಂದೇ ಸ್ತರವನ್ನು ಕಳಚುತ್ತಾ ಹೋದಂತೆ ಕಡೆಗೆ ಉಳಿಯುವುದು ನಿಮ್ಮ ಬೆತ್ತಲೆ ದೇಹ ಮಾತ್ರ.

ನಾವು ದೇಹದ ಅದರೊಳಗೆನಿದೆಯೆಂದು ತಿಳಿದುಕೊಳ್ಳಲು ಅದನ್ನು ನಿಜವಾಗಿಯೂ ಸುಲಿಯಬೇಕು. ಮೊದಲನೆಯದು ದೇಹದ ಭೌತಿಕ ಸ್ತರ. ಎರಡನೆಯದು ಚರ್ಮ. ಅದರೊಳಗೆ ಅಂಗಾಂಗಗಳು, ಮಾಂಸಖಂಡಗಳು ಮತ್ತು ಮೂಳೆಗಳು. ಹೀಗೆ ಇಡೀ ದೇಹವನ್ನು ಸುಲಿಯಬೇಕಾಗುತ್ತದೆ. ಹೀಗೆ ಸುಲಿಯುತ್ತಾ ಹೋದರೆ ಕಟ್ಟಕಡೆಗೆ ದೇಹದ ಅಸ್ತಿಪಂಜರ, ಮೂಳೆಗಳು ಮತ್ತು ಮೂಳೆಮಜ್ಜೆಯನ್ನು ಮಾತ್ರ ನೋಡುತ್ತೇವೆ. ಈ ಸುಲಿಯುವಿಕೆಯು ಅದೃಶ್ಯವಾದುದು. ಅದಕ್ಕೆ ಕಲ್ಪನಾಶಕ್ತಿ ಬೇಕಾಗುತ್ತದೆ. ಹಾಗೆ ಎಲ್ಲವನ್ನೂ ಸುಲಿದಿಟ್ಟಾಗ ಜೀವಂತವಾಗಿದ್ದ ನಾನು ಈಗ ಎಲ್ಲಿದ್ದೇನೆ? ಎಂಬ ಪ್ರಶ್ನೆಯೇಳುತ್ತದೆ. ಸುತ್ತಮುತ್ತ ಇರುವ ಪ್ರಜ್ಞೆಯಲ್ಲಿ ನಾನು ಎಂಬುದು ಲೀನವಾಗಿರುತ್ತದೆ.

## ವಿಧಾನ 5: ಇದಲ್ಲ, ಇದಲ್ಲ, ನಾನು ಅದು ಎಂಬ ನಕಾರದ ವಿಧಾನ

ಇದೊಂದು ಬಹಳ ಜನಪ್ರಿಯವಾದ ಅರಿವಿನ ವಿಧಾನ. ಈ ವಿಧಾನದಲ್ಲಿ ಮೊದಲು ನಾವು ಯಾರೂ ಅಲ್ಲ ಎಂಬುದನ್ನು ತಿಳಿದುಕೊಳ್ಳುತ್ತೇವೆ. ಈ ದೇಹ ನಾನೆ? ಇಲ್ಲ. ನಾನು ದೇಹದಂತೆ ಕಂಡರೂ ಸಾವನ್ನಪ್ಪಿದಾಗ ಏನಾಗುತ್ತದೆ ಎಂದು ನನಗೆ ತಿಳಿದಿದೆ. ದೇಹ ಹಾಗೆಯೇ ಇರುತ್ತದೆ. ಆದರೆ ನಾವು ಸತ್ತ ವ್ಯಕ್ತಿ ತೀರಿಕೊಂಡಿದ್ದಾನೆಂದು ಹೇಳುತ್ತೇವೆ. ಅಂದರೆ ಸತ್ತಿರುವ ವ್ಯಕ್ತಿಯ ದೇಹ ಅವನಾಗಿರುವುದಿಲ್ಲ. ಅದು ಅವನೆಂದೂ ಆಗಿರಲಿಲ್ಲ, ಹಾಗಾಗಿ ನಾನು ಈ ದೇಹ ಅಲ್ಲ; ಈ ಮನಸ್ಸು ನಾನಲ್ಲ ಎಂಬುದರ ಬಗ್ಗೆ ಸ್ಪಷ್ಟವಾಗಿರುತ್ತೇನೆ.

ಈ ದೇಹವನ್ನು ಸುಟ್ಟಾಗ ಅಥವಾ ಹೂತುಹಾಕಿದಾಗ ಅದರ ಪಂಚಭೂತಗಳು ಕರಗಿ ಹೋಗುತ್ತವೆ. ವಾಯು-ಗಾಳಿಯಲ್ಲಿ ಸೇರುತ್ತವೆ. ನೀರು ಆವಿಯಾಗುತ್ತದೆ. ದೇಹವು ತಣ್ಣಗಾದಂತೆ ಅಗ್ನಿ ಮರೆಯಾಗುತ್ತದೆ. ದೇಹವು ಆಕ್ರಮಿಸಿಕೊಂಡ ಜಾಗವು ಕಿರಿದಾಗುತ್ತದೆ. ಕಡೆಗೆ ಉಳಿಯುವುದು ಒಂದು ಹಿಡಿ ಮಣ್ಣು ಮಾತ್ರ. ಆದರೆ ಈ ದೇಹ ನಾನಲ್ಲ. ಈ ಮೇಲೆ ಹೆಸರಿಸಿದ ಪಂಚಭೂತಗಳೂ ನಾನಲ್ಲ. ಹಾಗಾದರೆ ನಾನು ಯಾರು? ಈಗಷ್ಟೇ ದೆಹವನ್ನು ಬಿಟ್ಟು ಹಾರಿ ಹೋಗಿರುವ ಪ್ರಾಣಶಕ್ತಿ, ನಾನು. ಇದು ನಾನು ಯಾರು ಎಂಬ ಸತ್ಯವನ್ನು ಅರಿಯುವ ರೀತಿ. ಇದು ನಾನಲ್ಲ -ನಾನು ಅದು. ಈ ದೇಹ ನಾನಲ್ಲ ಆದರೆ ಆ ದೇಹದೊಳಗಿನ ಆತ್ಮ ಅಥವಾ ಪ್ರಾಣಶಕ್ತಿ. ಈ ಅರಿವು ನಮ್ಮನ್ನು ಕರ್ಮದಿಂದ ಮುಕ್ತಗೊಳಿಸುತ್ತದೆ.

## ವಿಧಾನ 6: ನೋಡುಗ ಮತ್ತು ನೋಡಿದ ವಿಧಾನ

ನೀವೊಂದು ಸೇಬನ್ನು ನೋಡುತ್ತಿದ್ದೀರಿ ಎಂದಿಟ್ಟುಕೊಳ್ಳಿ. ಅದನ್ನು ನೋಡುತ್ತಿರುವವರು

ಯಾರು? ಏನನ್ನು ನೋಡುತ್ತಿದ್ದಾರೆ? ಕಣ್ಣುಗಳು ಸೇಬನ್ನು ನೋಡುತ್ತಿವೆ ಮತ್ತು ಅದು ನೋಡುತ್ತಿರುವುದು ಸೇಬನ್ನು. ಸೇಬು ಒಂದು ವಸ್ತು. ಕಣ್ಣುಗಳು ಅದನ್ನು ನೋಡುತ್ತಿರುವ ವ್ಯಕ್ತಿ. ಸೇಬನ್ನು ನೋಡುತ್ತಿರುವ ಕಣ್ಣುಗಳನ್ನು ಯಾರು ನೋಡುತ್ತಿದ್ದಾರೆಂದು ಕೇಳಿದರೆ ಮನಸ್ಸು ಅದನ್ನು ನೋಡುತ್ತಿದೆ ಎಂದು ಹೇಳಬಹುದು.

ಹಾಗಾಗಿ ಕಣ್ಣುಗಳನ್ನು ವಸ್ತುಗಳೆಂದು ಹೇಳಬಹುದು. ಮನಸ್ಸು ಆ ಕಣ್ಣುಗಳನ್ನು ನೋಡುತ್ತಿವೆ ಎಂದು ಹೇಳಬಹುದು. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ನಾವು ಸೇಬುಗಳನ್ನು ನೋಡುತ್ತಿರುವ ಕಣ್ಣುಗಳನ್ನು ನೋಡುತ್ತಿರುವ ಮನಸ್ಸನ್ನು ಯಾರು ನೋಡುತ್ತಿದ್ದಾರೆ? ಎಂದು ಕೇಳಿಕೊಂಡರೆ ನಾನು ಮನಸ್ಸನ್ನು ನೋಡುತ್ತಿದ್ದೇನೆ; ಅಂದರೆ ನೋಡುಗನಾದ ನಾನು. ಈ ಮನಸ್ಸು ಸೇಬು, ಅದನ್ನು ನೋಡುತ್ತಿರುವ ಕಣ್ಣುಗಳು ಮತ್ತು ಅದನ್ನು ನೋಡುತ್ತಿರುವ ಮನಸ್ಸು ಆಗಿದ್ದೇನೆ. ಈ ಅರಿಯುವ ವಿಧಾನವು ನಾವು ಎಲ್ಲವನ್ನೂ ನೋಡುತ್ತಿದ್ದೇವೆ ಎನ್ನುವುದನ್ನು ಖಚಿತಪಡಿಸುತ್ತದೆ. ನಾನು ಮನಸ್ಸನ್ನು ನೋಡುತ್ತಿದ್ದೇನೆ. ಅದು ಕಣ್ಣುಗಳನ್ನು ನೋಡುತ್ತದೆ. ಕಣ್ಣುಗಳು ಸೇಬನ್ನು ನೋಡುತ್ತಿವೆ.

ಇದು ವಾಸ್ತವ ಅಲ್ಲವೇ? ನಾನು ಎಂಬ ಪ್ರಜ್ಞೆಯು ಹರಿದಾಡುತ್ತಿರುವ ಮನಸ್ಸನ್ನು ತಿಳಿದಿರುತ್ತದೆ. ನಾನು ನನ್ನ ಮನಸ್ಸಿಗಿಂತ ಭಿನ್ನ. ನನ್ನ ಮನಸ್ಸಿಗೆ ಕಣ್ಣುಗಳು ಸೇಬನ್ನು ನೋಡುತ್ತಿವೆಯೆ ಅಥವಾ ಚೆಂಡನ್ನು ನೋಡುತ್ತಿವೆಯೇ ಎಂಬುದು ತಿಳಿದಿರುತ್ತದೆ. ಅದು ಕಣ್ಣುಗಳನ್ನು ಗಮನಿಸುತ್ತಿರುತ್ತದೆ. ಮನಸ್ಸು ಕಣ್ಣುಗಳಿಗಿಂತಲೂ ಭಿನ್ನ.

ಕಣ್ಣುಗಳಿಗೆ ಅದು ಸೇಬು ಎಂದು ತಿಳಿದಿದೆ. ಅದು ಸೇಬು ಆಗಿದೆಯೇ ಅಥವಾ ಪೈನಾಪಲ್ ಆಗಿದೆಯೋ ಎಂಬುದನ್ನು ಕಣ್ಣುಗಳು ನೋಡಬಹುದು. ಆದರೆ ಕಣ್ಣುಗಳು ತಾನು

ನೋಡುತ್ತಿರುವ ವಸ್ತು-ಹಣ್ಣುಗಳಿಗಿಂತ ಭಿನ್ನವಾದುದು. ಹಾಗಾದರೆ ನಿಜವಾಗಿ ನೋಡುವವರು ಯಾರು? ಅದು ಸೇಬನ್ನು ನೋಡುತ್ತಿರುವ ಕಣ್ಣುಗಳೆ? ಕಣ್ಣುಗಳನ್ನು ನೋಡುತ್ತಿರುವ ಮನಸ್ಸೆ? ಅಥವಾ ಮನಸ್ಸನ್ನು ನೋಡುತ್ತಿರುವ ನಾನು ಎಂಬ ಪ್ರಜ್ಞೆಯೆ?

ನಾವು ಕಣ್ಣುಗಳನ್ನು ಕಳಚಿ ಮೇಜಿನ ಮೇಲಿಟ್ಟರೆ ಅವು ಸೇಬನ್ನು ನೋಡಲು ಸಾಧ್ಯವೇ? ಖಂಡಿತಾ ಸಾಧ್ಯವಿಲ್ಲ. ಕಣ್ಣುಗಳು ನರಗಳ ಜಾಲದ ಮೂಲಕ ಮನಸ್ಸಿಗೆ ಸಂಪರ್ಕ ಹೊಂದಿವೆ. ಹಾಗಾಗಿ ನಿಮ್ಮ ಕಣ್ಣುಗಳು ಸೇಬನ್ನು ನೋಡುತ್ತಿದ್ದರೆ ಮತ್ತು ಅದನ್ನು ನಿಮ್ಮ ಮನಸ್ಸು ಗಮನಿಸುತ್ತಿದ್ದರೆ ನಿಮ್ಮ ಮನಸ್ಸು ನಿದ್ರಿಸಿದ ಕೂಡಲೇ ಕಣ್ಣುಗಳು ಮುಚ್ಚಿಕೊಳ್ಳುತ್ತವೆ. ಆಗ ನಮಗೆ ಸೇಬು ಕಾಣಿಸುವುದಿಲ್ಲ. ಆದರೆ ವಸ್ತುಗಳನ್ನು ನೋಡುವ ಶಕ್ತಿಯನ್ನು ಮನಸ್ಸಿಗೆ ನೀಡಿರುವುದು ಪ್ರಾಣಶಕ್ತಿ. ಇದು ಬಹಳ ಕ್ಲಿಷ್ಟವೆನಿಸಬಹುದು. ಆದರೆ ನಾವು ಸತ್ಯವನ್ನು ಅರಿಯಬೇಕಿದ್ದರೆ, ನಾವು ಈ ವಸ್ತು, ವ್ಯಕ್ತಿ ವಿಧಾನವನ್ನು ನೋಡುಗ ನೋಡಿದ ವಿಧಾನವನ್ನು ಅನುಸರಿಸಬೇಕಾಗುತ್ತದೆ. ನಾವು ಕಣ್ಣುಗಳಲ್ಲ, ನಾವು ಮನಸ್ಸಲ್ಲ. ನಾವು ಈ ಮನಸ್ಸು ಕಣ್ಣುಗಳಿಗೆ ಜೀವ ನೀಡುವ ಪ್ರಾಣಶಕ್ತಿ. ಇದನ್ನು ವಿವರಿಸುವುದು ಹೇಗೆ?

ಕೆಲವೊಮ್ಮೆ ನಮ್ಮ ಕಣ್ಣುಗಳು ತೆರೆದಿರುತ್ತವೆ. ಆದರೆ ನಾವು ಮಲಗಿದ್ದು ಏನನ್ನೂ ನೋಡುವುದಿಲ್ಲ. ಕಣ್ಣುಗಳು ತೆರೆದಿದ್ದರೂ ಮನಸ್ಸು ಮಲಗಿರುತ್ತದೆ. ಇದಕ್ಕೆ ಕಾರಣ, ಕಣ್ಣುಗಳು ಮನಸ್ಸಿನ ಒಂದು ಸಾಧನವಷ್ಟೇ. ಮತ್ತು ಮನಸ್ಸು ನಮ್ಮ, ಅಂದರೆ ನೋಡುತ್ತಿರುವವರ ಸಾಧನವಾಗಿದೆ.

ಈ ಎಲ್ಲಾ ಅರಿಯುವ ವಿಧಾನಗಳಲ್ಲಿ ನಡೆಯುವುದಾದರೂ ಏನು? ಮೊದಲು ಅದು ಅರಿವಿನೆಡೆಗೆ ನಮ್ಮನ್ನು ಕೊಂಡೊಯ್ಯುತ್ತದೆ. ಅದು ನಾವು ಈ ದೇಹ, ಮನಸ್ಸು ಮತ್ತು

ಅಹಂ ಅಲ್ಲವೆಂಬ ತಿಳಿವಳಿಕೆಯನ್ನು ನೀಡುತ್ತದೆ. ಅರಿವು ನಮ್ಮಲ್ಲಿನ ಅಜ್ಞಾನವನ್ನು ತೊಲಗಿಸಿ ನಮ್ಮನ್ನು ಕರ್ಮದಿಂದ ಮುಕ್ತಗೊಳಿಸುತ್ತದೆ. ನಾವು ದೇಹ, ಮನಸ್ಸು ಮತ್ತು ಅಹಂ ಅಲ್ಲವೆಂದು ಅರಿತೊಡನೆ ನಮ್ಮೆಲ್ಲ ದುಃಖ, ನೋವುಗಳನ್ನು ಕಳೆದುಕೊಳ್ಳುತ್ತೇವೆ. ನಾವು ದೇಹ, ಮನಸ್ಸು, ಅಹಂ ಅಲ್ಲದಿದ್ದರೆ ನಾವು ಕರ್ಮವನ್ನು ಉಂಟುಮಾಡುವುದಿಲ್ಲ.

**ವಿಧಾನ 7: ವೈಜ್ಞಾನಿಕ ವಿಧಾನ:**

ನಿಜವಾಗಿಯೂ ನಾವು ಯಾರು? ಇದನ್ನು ವಿಜ್ಞಾನಿ ಐನ್‌ಸ್ಟೈನ್ ರವರು ದಶಕಗಳ ಹಿಂದೆ **E = mc 2** ಸಮೀಕರಣದ ಮೂಲಕ ವಿವರಿಸಿದರು. ಈ ಸಮೀಕರಣದ ಮೂಲಕ ಅವರು ಶಕ್ತಿಯನ್ನು ಸೃಷ್ಟಿಸಲಾಗಲಿ, ನಾಶಪಡಿಸಲಾಗಲಿ ಆಗುವುದಿಲ್ಲ. ಆದರೆ ಅದನ್ನು ಒಂದು ರೂಪದಿಂದ ಇನ್ನೊಂದು ಭಿನ್ನರೂಪಕ್ಕೆ ಪರಿವರ್ತಿಸಬಹುದು ಎಂದು ವಿವರಿಸಿದರು.

ವಸ್ತು ಮತ್ತು ಶಕ್ತಿ ಅದಲುಬದಲಾಗಬಹುದು. ಈ ವೈಜ್ಞಾನಿಕ ಸತ್ಯವು ನಾವು ಶಕ್ತಿಯೇ ಹೊರತು ವಸ್ತುವಲ್ಲ ಎಂಬ ಸತ್ಯವನ್ನು ತಿಳಿಸುತ್ತದೆ. ಅವರು ಈ ಸಮೀಕರಣವನ್ನು ಪ್ರಕಟಿಸಿದ ದಿನಗಳಲ್ಲಿ ಇದು ಬಹಳ ಕ್ಲಿಷ್ಟ ವಿಚಾರವೆನ್ನಿಸುತ್ತಿತ್ತು. ಆದರೆ ಇಂದು ಇದು ನಾವು ನಿಜವಾಗಿಯೂ ಯಾರು ಎಂಬ ನಿಗೂಢ ಪ್ರಶ್ನೆಗೆ ಉತ್ತರಿಸಿದೆ. ಶಕ್ತಿ ಮತ್ತು ವಸ್ತುಗಳು ಅದಲುಬದಲಾಗುತ್ತವೆ ಎಂದರೆ ಏನೂ ಹೇಳಿದಂತಲ್ಲ. ಆದರೆ ಇಂದು ವಿಜ್ಞಾನಿಗಳು ಈ ಸಮೀಕರಣದ ಬಗ್ಗೆ ಬಹಳ ಆಳವಾದ ಒಳನೋಟಗಳನ್ನು ನೀಡಿದ್ದಾರೆ.

ವಿಜ್ಞಾನಿಗಳು ಸೂಕ್ಷ್ಮದರ್ಶಕದ ಮೂಲಕ ಮಾನವನ ಜೀವಕೋಶವನ್ನು ಪರೀಕ್ಷಿಸಿದಾಗ ಅವರು ಕೇವಲ ಕಣಗಳನ್ನಷ್ಟೇ ನೋಡಲಿಲ್ಲ, ಎಲೆಕ್ಟ್ರಾನ್, ಪ್ರೋಟಾನ್,

ನ್ಯೂಟ್ರಾನುಗಳಂತಹ ಇನ್ನೂ ಸೂಕ್ಷ್ಮಕಣಗಳನ್ನು ಪತ್ತೆ ಮಾಡಿದರು. ಅವುಗಳಲ್ಲೆಲ್ಲಾ ಅತಿ ಸೂಕ್ಷ್ಮವಾದದ್ದು ಕ್ವಾರ್ಕ್ಸ್.

ಇವುಗಳ ಬಗ್ಗೆ ಅಧ್ಯಯನ ನಡೆಸಿದಂತೆಲ್ಲಾ ವಿಜ್ಞಾನಿಗಳು ಈ ಕಣಗಳು ತರಂಗಗಳಾಗಿ ಕಳೆದು ಹೋಗಬಹುದೆಂಬ ವಿಷಯವನ್ನು ತಿಳಿದು ಚಕಿತರಾದರು. ಒಂದು ವಸ್ತು ಹೇಗೆ ಇದ್ದಕ್ಕಿದಂತೆ ಹಾಗೆ ಮಾಯವಾಗಿ ಬಿಡಬಹುದು? ಈ ಪ್ರಶ್ನೆ ಅವರನ್ನು ಕಾಡಿತು. ಅವರು ಈ ವಿದ್ಯಮಾನವನ್ನು ತರಂಗ-ಕಣಗಳ ದ್ವಂದ್ವ ಎಂದು ಕರೆದರು. ಇಲ್ಲಿ ಕಣಗಳು ತರಂಗಗಳಾಗಿ ಪರಿವರ್ತಿತವಾಗುತ್ತವೆ. ಎಂಬ ಅಂಶವನ್ನು ತಿಳಿದು ಚಕಿತರಾದರು.

ಇದು ಐನ್‌ಸ್ಟೈನ್ ರವರ ಸಿದ್ದಾಂತವನ್ನು ಪುಷ್ಠೀಕರಿಸಿತು. ಈ ಒಳನೋಟವು ಮಾನವನ ರಕ್ತ-ಮಾಂಸಗಳಿಂದ ಕೂಡಿದ ದೇಹವು ನಿಜವಾಗಿಯೂ ಸಹಸ್ರಾರು ಕೋಟಿ ಕಣಗಳಿಂದ ರಚಿತವಾಗಿದೆ ಎಂಬ ಸತ್ಯವನ್ನು ತಿಳಿಸಿತು. ನಾವು ಯಾರು? ಎಂಬ ಪ್ರಶ್ನೆಗೆ ಸತ್ಯವಾದ ಉತ್ತರವನ್ನು ಕಂಡುಕೊಳ್ಳುವ ಮತ್ತೊಂದು ವಿಧಾನ ಈ ವೈಜ್ಞಾನಿಕ ವಿಧಾನ. ನಾವು ದೇಹವಲ್ಲ, ಶಕ್ತಿ. ಇದು ಕೇವಲ ಒಂದು ತಾತ್ವಿಕ ಪ್ರಮೇಯವಲ್ಲ. ವೈಜ್ಞಾನಿಕ ಸಂಶೋಧನೆ ಮತ್ತು ಪ್ರಯೋಗಗಳಿಂದ ನಿರೂಪಿಸಲ್ಪಟ್ಟ ಸತ್ಯ. ಈ ವೈಜ್ಞಾನಿಕ ಸತ್ಯವು ನಮ್ಮನ್ನು ನಮ್ಮ ಹಿಂದಿನ ಕರ್ಮಗಳಿಂದ ಮುಕ್ತಗೊಳಿಸುತ್ತದೆ.

**ವಿಧಾನ 8: ಕಾರ್ಯಕಾರಣ ವಿಧಾನ:**

ಕಾರ್ಯಕಾರಣ ವಿಧಾನ ಎಂದರೇನು? ಈ ವಿಧಾನವು ಮೂರು ಸರಳ ಸೂತ್ರಗಳನ್ನು ಅವಲಂಬಿಸಿದೆ.

1. ಕಾರಣವಿಲ್ಲದೆ ಕಾರ್ಯವಿರುವುದಿಲ್ಲ ಅಥವಾ ಪರಿಣಾಮಗಳಿರುವುದಿಲ್ಲ.

2. ಪರಿಣಾಮವೆನ್ನುವುದು ಕಾರಣದ ಮತ್ತೊಂದು ರೂಪ.

3. ಪರಿಣಾಮದಿಂದ ಕಾರಣವನ್ನು ಬೇರ್ಪಡಿಸಿದರೆ ಉಳಿಯುವುದು ಏನೂ ಇಲ್ಲ.

ಕಾರ್ಯಕಾರಣದ ನಿಯಮವು ನಾವು ಕೇವಲ ಪರಿಣಾಮಗಳಷ್ಟೇ ಎಂದು ತಿಳಿಸುತ್ತವೆ. ನಾವು ಇಲ್ಲಿ ಜನ್ಮ ತಳೆಯಲು ಕಾರಣವೊಂದಿದೆ. ಈ ಕಾರಣ ಶಕ್ತಿಯು ನಮ್ಮ ಗ್ರಹಿಕೆಗೆ ಮೀರಿದ್ದು. ಅದುವೇ ಜೀವನದ ಮೂಲ ಶಕ್ತಿಯಾಗಿದೆ. ಈ ಪ್ರಾಣಶಕ್ತಿ ನಮ್ಮನ್ನು ಅಗಲಿದರೆ ಸಾವು ಸಂಭವಿಸುತ್ತದೆ. ನಾವು ಶೂನ್ಯದಲ್ಲಿ ಲೀನವಾಗುತ್ತೇವೆ.

ನಾವು ಈ ಕಾರ್ಯಕಾರಣದ ನಿಯಮವನ್ನು ಅರಿತುಕೊಂಡಾಗ ನಾವು ದೈವಿಕ ಶಕ್ತಿಯ ಒಂದು ತುಣುಕಾಗಿದ್ದು ಅದರ ಪರಿಣಾಮ ಮಾತ್ರ ಎಂಬುದನ್ನು ಅರಿತುಕೊಳ್ಳುತ್ತೇವೆ. ಈ ದೈವಿಕ ಶಕ್ತಿಯಿಲ್ಲದೆ ನಾವು ಏನೇನೂ ಅಲ್ಲ.

ಕಾರ್ಯಕಾರಣದ ನಿಯಮವನ್ನು ಅರ್ಥಮಾಡಿಕೊಳ್ಳದೆ ಇರುವವರು ಈ ಉದಾಹರಣೆಯನ್ನು ಗಮನಿಸಬೇಕು. ಚಿನ್ನ ಕಾರಣವಾದರೆ, ಉಂಗುರ, ಬಳೆ, ಸರಗಳು ಅದರ ಪರಿಣಾಮಗಳು. ಇವು ಚಿನ್ನದ ಭಿನ್ನ ರೂಪಗಳು. ನೀವು ಚಿನ್ನವನ್ನು ಬೇರ್ಪಡಿಸಿದರೆ ಏನೂ ಉಳಿಯುವುದಿಲ್ಲ. ಮಣ್ಣು ಕಾರಣ. ಅದರಿಂದ ಮಡಕೆ, ತಟ್ಟೆ ಮತ್ತು ಪ್ರತಿಮೆ. ಇವು ಅದರ ಪರಿಣಾಮಗಳು. ಮಣ್ಣನ್ನು ಅವುಗಳಿಂದ ಬೇರ್ಪಡಿಸಿದರೆ ಅಲ್ಲಿ ಏನೂ ಇರುವುದಿಲ್ಲ. ದೈವಿಕ ಶಕ್ತಿ ಕಾರಣವಾದರೆ ನಾವು ಕೇವಲ ಅದರ ಪರಿಣಾಮಗಳಷ್ಟೆ. ದೈವಿಕ ಶಕ್ತಿ ಇಲ್ಲದೇ ನಾವಿಲ್ಲ. ಹಾಗಿದ್ದ ಮೇಲೆ

ಕರ್ಮವನ್ನು ಉಂಟುಮಾಡುವ ಪ್ರಶ್ನೆ ಎಲ್ಲಿಂದ ಬಂತು? ನಾವು ದೇಹ, ಮನಸ್ಸು ಮತ್ತು ಅಹಂ ಅಲ್ಲ, ಕೇವಲ ಶಕ್ತಿ ಎನ್ನುವುದನ್ನು ಅರಿತಾಗ ನಾವು ಮರುಹುಟ್ಟು ಪಡೆಯಬೇಕಾಗಿಲ್ಲ.

**ವಿಧಾನ 9: ಸೌಂದರ್ಯದ ವಿಧಾನ:**

ಸೌಂದರ್ಯದ ವಿಧಾನದ ಮೂಲಕ ಸತ್ಯವನ್ನು ಅರಿಯುವುದು ಹೇಗೆ? ನಿಮ್ಮ ಸುತ್ತ-ಮುತ್ತ ಒಮ್ಮೆ ನೋಡಿ. ಎಷ್ಟೆಲ್ಲಾ ಸೌಂದರ್ಯವನ್ನು ನೋಡುತ್ತೀರಿ. ತೋಟದಲ್ಲಿ ಗುಲಾಬಿಗಳು, ಬಾನಲ್ಲಿ ಹಾರಾಡುತ್ತಿರುವ ಹಕ್ಕಿಗಳು, ನೀರಿನಲ್ಲಿ ಈಜುತ್ತಿರುವ ಮೀನುಗಳು, ಭೂಮಿಯ ಮೇಲೆ ನಡೆದಾಡುತ್ತಿರುವ ಸುಂದರವಾದ ಜನರು, ಇತ್ಯಾದಿ. ಈ ಎಲ್ಲ ಸೌಂದರ್ಯ ಎಲ್ಲಿಂದ ಬಂತು? ನಾವು ಈ ಸೌಂದರ್ಯವನ್ನು ಸೌಂದರ್ಯ ವಿಧಾನದ ಮೂಲಕ ಅರ್ಥ ಮಾಡಿಕೊಂಡರೆ ಈ ಸೌಂದರ್ಯ ಹೂವುಗಳಲ್ಲಿಲ್ಲ ಎಂಬುದನ್ನು ಅರಿಯುತ್ತೇವೆ. ಗಿಡದಿಂದ ನೀವು ಹೂವನ್ನು ಕಿತ್ತ ಕೂಡಲೇ ಅದು ಜೀವ ಕಳೆದುಕೊಳ್ಳುತ್ತದೆ. ಅಲ್ಲಿ ಯಾವ ಸೌಂದರ್ಯವೂ ಉಳಿಯುವುದಿಲ್ಲ. ಎಲ್ಲ ಜೀವಿಗಳೂ ತಮ್ಮಿಂದ ಪ್ರಾಣಶಕ್ತಿ ಹಾರಿಹೋದ ಕೂಡಲೇ ತಮ್ಮ ಸೌಂದರ್ಯವನ್ನು ಕಳೆದುಕೊಳ್ಳುತ್ತವೆ. ಆದ ಕಾರಣ, ಸೌಂದರ್ಯ ಅವರಿಗೆ ಸೇರಿದ್ದಲ್ಲ. ದೈವಿಕ ಶಕ್ತಿಯು ಅವರ ಮೂಲಕ ಹಾದು ಹೋದ ಕಾರಣಕ್ಕಾಗಿ ಸೌಂದರ್ಯ ಅವರಲ್ಲಿ ಕಾಣಿಸಿಕೊಂಡದ್ದು.

ನಮ್ಮ ಕಣ್ಣುಗಳು ಸುಂದರವಾಗಿವೆ. ಆದರೆ ಅವುಗಳನ್ನು ಕಿತ್ತು ಮೇಜಿನ ಮೇಲೆ ಇಟ್ಟರೆ ಅವು ತಮ್ಮ ಸೌಂದರ್ಯವನ್ನು ಕಳೆದುಕೊಂಡು ನಿರುಪಯುಕ್ತವಾಗುತ್ತವೆ. ಇಲ್ಲಿ ಜನರು ಸುಂದರರಾಗಿ ಕಾಣುತ್ತಾರೆ ಎಂದರೆ ಅದಕ್ಕೆ ಅವರ ಮೂಲಕ ಹಾದು ಹೋಗುತ್ತಿರುವ ಪ್ರಾಣಶಕ್ತಿಯೇ ಕಾರಣ. ನಾವು ಈ ದೇಹ, ಮನಸ್ಸು ಮತ್ತು ಅಹಂ ತಮ್ಮ ಸೌಂದರ್ಯಕ್ಕೆ

ಕಾರಣ ಎಂಬುದು ಸುಳ್ಳು ಎಂದು ಅರಿವಾದಾಗ ನಮ್ಮ ಭ್ರಮೆ ಕಳಚುತ್ತದೆ. ಎಲ್ಲಾ ಕರ್ಮಗಳಿಂದಲೂ ನಾವು ಮುಕ್ತರಾಗುತ್ತೇವೆ. ಸೌಂದರ್ಯವೆನ್ನುವುದು ದೈವಿಕ ಶಕ್ತಿಯೇ ಹೊರತು ದೈಹಿಕವಾದದ್ದಲ್ಲ.

**ವಿಧಾನ 10: ಸ್ವಅರಿವಿನ ವಿಧಾನ:**

ಕರ್ಮಗಳಿಂದ ನಮ್ಮನ್ನು ಮುಕ್ತಗೊಳಿಸುವ ಕಟ್ಟಕಡೆಯ ವಿಧಾನ ಸ್ವಅರಿವಿನ ವಿಧಾನ. ನಾವು ನಿಜವಾಗಿಯೂ ಯಾರು? ಎಂಬುದನ್ನು ಅರಿಯಬೇಕಾಗಿದೆ.

ಒಬ್ಬ ಬುದ್ಧಿವಂತ ಅಮೆರಿಕಾದಿಂದ ಬಂದ ಒಬ್ಬ ಪ್ರಯಾಣಿಕನಿಗೆ ನೀನು ಯಾರು? ಎಂದು ಕೇಳಿದ. ಅದಕ್ಕೆ ಅವನು "ನಾನು ಜಾನ್" ಎಂದು ಉತ್ತರಿಸಿದ. ಆದರೆ ಆ ಸಾಧುವು ಅವನಿಗೆ "ಅದು ನಿನ್ನ ಹೆಸರು. ನೀನು ಯಾರು?" ಎಂದು ಮತ್ತೆ ಪ್ರಶ್ನಿಸಿದ. ಅದಕ್ಕೆ ಆ ಪ್ರಯಾಣಿಕನು ಎಂದು ಉತ್ತರಿಸಿದ. "ಹೌದು ನೀನು ಅಮೆರಿಕನ್ ಎಂದು ನನಗೆ ಗೊತ್ತು. ಆದರೆ ನೀನು ಯಾರು" ಎಂದು ಆ ಸಾಧುವು ಅವನನ್ನು ಮತ್ತೆ ಪ್ರಶ್ನಿಸಿದ. ಅದಕ್ಕೆ ಅವನು "ನಾನು ಶ್ರೀಮತಿ ಮತ್ತು ಶ್ರೀ ಸ್ಮಿತ್ ರವರ ಮಗ ಮತ್ತು ಟಾಮ್ ಮತ್ತು ಮೇರಿಯ ತಂದೆ"  ಎಂದು ಉತ್ತರಿಸಿದ. ಅದಕ್ಕೆ ಸಾಧುವು "ಅದು ಅವರೊಂದಿಗೆ ನೀನು ಹೊಂದಿರುವ ಸಂಬಂಧವನ್ನು ಹೇಳುತ್ತದೆಯೇ ಹೊರತು ನೀನು ಯಾರು ಎಂಬುದನ್ನು ಹೇಳುವುದಿಲ್ಲ" ಎಂದು ಹೇಳುತ್ತಾನೆ."ನಾನೊಬ್ಬ ವಾಲ್‌ಸ್ಟ್ರೀಟಿನಲ್ಲಿ ಕೆಲಸ ಮಾಡುತ್ತಿರುವ ವ್ಯಾಪಾರಿ"  ಎಂದು ಆ ವ್ಯಕ್ತಿ ಹೇಳುತ್ತಾನೆ. ಅದಕ್ಕೆ ಸಾಧುವು "ಕ್ಷಮಿಸು, ನಾನು ನಿನ್ನ ವೃತ್ತಿಯ ಬಗ್ಗೆ ಕೇಳಲಿಲ್ಲ. ಹೇಳು ನೀನು ಯಾರು?" ಎಂದು ಹೇಳುತ್ತಾನೆ. ಗೊಂದಲಗೊಂಡ ಆ ಪ್ರಯಾಣಿಕನು ಸಾಧುವಿಗೆ "ನಾನು ಯಾರೆಂದು ನನಗೆ ಗೊತ್ತಿಲ್ಲ, ನೀನೇ ಹೇಳು" ಎನ್ನುತ್ತಾನೆ.

ಸಾಧು ಮಾಡಿದ ಮೊದಲ ಕೆಲಸವೆಂದರೆ, ಆ ಪ್ರಯಾಣಿಕನಿಗೆ ಅವನು ಅವನ ದೇಹವಲ್ಲ, ನಾವು ಕೇವಲ ಈ ದೇಹವನ್ನು ಧರಿಸಿದ್ದೇವೆ ಎಂಬ ಅಂಶವನ್ನು ಮನದಟ್ಟು ಮಾಡುವುದು. ಸಾಧುವು ಅವನಿಗೆ ಸುಮ್ಮನೇ ಕುಳಿತು ತನ್ನ ಮನಸ್ಸನ್ನು ಅರಿಯಲು ಪ್ರಯತ್ನಿಸು ಎಂದು ಹೇಳುತ್ತಾನೆ. ಹಾಗೆ ಎರಡು ಗಂಟೆಗಳ ಕಾಲ ಕೂತಿದ್ದ ಅಮೆರಿಕಾದ ವ್ಯಕ್ತಿಯು ಸಾಧುವಿಗೆ "ಇಲ್ಲ, ನನಗೆ ನನ್ನ ಮನಸ್ಸನ್ನು ತಿಳಿಯಲು ಸಾಧ್ಯವಾಗುತ್ತಿಲ್ಲ" ಹೇಳುತ್ತಾನೆ. ಆಗ ಸಾಧುವು ಅವನಿಗೆ, ನಾವು ನಮ್ಮ ದೇಹವಾಗಲಿ, ಮನಸ್ಸಾಗಲಿ ಅಲ್ಲ, ನಾವು ಪ್ರಾಣಶಕ್ತಿ ಎಂಬ ಸತ್ಯವನ್ನು ಅರಿಯುವಂತೆ ಮಾಡಿದ. ನಾವು ಯಾರು ಎಂಬ ಸತ್ಯವನ್ನು ಅರಿತರೆ ಕರ್ಮಗಳಿಂದ ಮುಕ್ತರಾಗುತ್ತೇವೆ. ಅವುಗಳು ದೇಹ ಮತ್ತು ಮನಸ್ಸಿಗೆ ಸೇರಿದ್ದವುಗಳಾಗಿವೆ.

ಅರಿಯುವ ವಿಧಾನ ಯಾವುದೇ ಇರಲಿ, ಸತ್ಯವನ್ನು ಅರಸುವವರು ಈ ದೇಹ, ಮನಸ್ಸು ಮತ್ತು ಅಹಂಗಳು ನಾವಲ್ಲ ಎಂಬ ಸತ್ಯವನ್ನು ಅರಿಯಬೇಕು. ಹಾಗೆ ಅರಿತಾಗ ನಮ್ಮ ಕರ್ಮಗಳೆಲ್ಲವೂ ಕಳಚಿಕೊಳ್ಳುತ್ತವೆ. ಅಷ್ಟೇ ಅಲ್ಲ ಕರ್ಮದ ಮೂರು ಖಾತೆಗಳಲ್ಲಿರುವ ಕರ್ಮಗಳಿಂದ ಕೂಡ ನಾವು ಮುಕ್ತರಾಗುತ್ತೇವೆ.

**ನಾವು ಯಾವುದೇ ವಿಧಾನವನ್ನು ಬಳಸಲಿ**

**ನಾವು ನಿಜವಾಗಿಯೂ ಯಾರು ಎಂಬ ಬಗ್ಗೆ ಗೊಂದಲಗಳಿರಬಾರದು.**

**ಅಹಂ, ದೇಹ, ಮನಸ್ಸುಗಳು ನಾವಲ್ಲ**

**ನಾವು ದೈವಿಕ ಶಕ್ತಿ. ಈ ಸತ್ಯವನ್ನು ನಾವು ಅರಿಯಬೇಕು.**

# ಸಾರಾಂಶ:

# ಅರಿವಿನ ವಿಧಾನಗಳು

ಸತ್ಯವನ್ನು ಅರಿಯುವ ಅನೇಕ ವಿಧಾನಗಳಿವೆ.
ಎಲ್ಲಾ ವಿಧಾನಗಳೂ ನಾವು ದೇಹ, ಮನಸ್ಸು, ಅಹಂಗಳಲ್ಲ
ನಾವು ಪ್ರಾಣಶಕ್ತಿ - ಆತ್ಮ ಎಂಬ ಸತ್ಯವನ್ನು ತಿಳಿಸುತ್ತವೆ.
ಈ ಪ್ರಾಣಶಕ್ತಿ ನಮ್ಮ ದೇಹದಿಂದ ಹಾರಿ ಹೋದಾಗ ಸಾವು ಸಂಭವಿಸುತ್ತದೆ.
ಅರಿವು ನಮ್ಮನ್ನು ಅಜ್ಞಾನದಿಂದ ಪಾರುಮಾಡಿ
ನಮ್ಮನ್ನು ನಮ್ಮ ಕರ್ಮಗಳಿಂದ ಬಿಡುಗಡೆಮಾಡುತ್ತದೆ.

# 11

# ಬದುಕಿನ ವೀಕ್ಷಕನಾಗಿ

ಸತ್ಯವನ್ನು ನಾವು ಅರಿತುಕೊಂಡ ನಂತರ, ನಾವು ಎದುರಿಸಬೇಕಾದ ಸವಾಲುಗಳೇನು? ಈ ಸವಾಲೆಂದರೆ ಈ ಜಗತ್ತನ್ನು ಒಂದು ಅಲೌಕಿಕ ನಾಟಕವನ್ನಾಗಿ ವೀಕ್ಷಿಸುವುದು. ಈ ಜಗತ್ತು ಒಂದು ಬೃಹತ್ ನಾಟಕಶಾಲೆ. ನಾವೆಲ್ಲರೂ ಅದರಲ್ಲಿ ಪಾತ್ರ ವಹಿಸುವ ನಟರು. ನಾವು ರಂಗದ ಮೇಲೆ ಬಂದು ನಮ್ಮ ಪಾತ್ರವನ್ನು ನಿರ್ವಹಿಸಿ, ಹೊರಟು ಹೋಗುತ್ತೇವೆ. ಈ ನಾಟಕದ ನಿರ್ಮಾಪಕ ಮತ್ತು ನಿರ್ದೇಶಕನೊಬ್ಬನಿದ್ದಾನೆ. ಅವನು ಕ್ಷಣ-ಕ್ಷಣಕ್ಕೂ ಈ ನಾಟಕ ಹೇಗೆ ಮೂಡಿಬರಬೇಕು ಎನ್ನುವುದನ್ನು ನಿರ್ಧರಿಸುತ್ತಾನೆ. ಅವನ ಈ ಅಧಿಕಾರವನ್ನು ನಾವು ಪ್ರಶ್ನಿಸುವಂತಿಲ್ಲ. ಈ ಜಗತ್ತಿನಲ್ಲಿ ನಮ್ಮ ಪಾತ್ರವನ್ನು ಈಗಾಗಲೇ ಸೃಷ್ಟಿಕರ್ತನು ನಿರ್ಧರಿಸಿಬಿಟ್ಟಿದ್ದಾನೆ. ನಾವು ಎಲ್ಲಿ, ಹೇಗೆ ಮತ್ತು ಯಾವಾಗ ಹುಟ್ಟುತ್ತೇವೆ ಎನ್ನುವ ವಿಷಯದಲ್ಲಿ ನಮಗೆ ಯಾವುದೇ ರೀತಿಯ ಆಯ್ಕೆ ಇರುವುದಿಲ್ಲ.

ದುರದೃಷ್ಟವಶಾತ್ ನಾವು ಈ ಜಗತ್ತನ್ನು ನಿಜವೆಂದು ತಿಳಿಯುತ್ತೇವೆ. ಆದರೆ, ನಿಜವಾಗಿಯೂ ಇದೊಂದು ಬೃಹತ್ ನಾಟಕ ಅಷ್ಟೆ. ನಾವು ಇದನ್ನು ನಿಜವೆಂದು ತಿಳಿಯುವುದರಿಂದ, ಇದು ನನ್ನ ದೇಹ, ಇದು ನನ್ನ ಮನಸ್ಸು ಎಂದು ತಿಳಿಯುವುದರಿಂದ 'ನಾನು' ಎಂಬ ಕಾಲ್ಪನಿಕ ಅಹಂನ್ನು ಹುಟ್ಟುಹಾಕುತ್ತೇವೆ. ಈ 'ನಾನು' ಅನೇಕ ಕ್ರಿಯೆಗಳಲ್ಲಿ ತೊಡಗಿ ಒಳ್ಳೆಯ ಮತ್ತು ಕೆಟ್ಟ ಕರ್ಮವನ್ನು ಗಳಿಸುತ್ತದೆ. ಆದರೆ ಇದು ಆಗುವುದು

ಅಜ್ಞಾನದಿಂದ. ಈ 'ನಾನು' ಅರಿವಿನ ಅನೇಕ ರೀತಿಗಳಿಂದ ತಾನು ಈ ದೇಹವಾಗಲಿ ಅಥವಾ ಮನಸ್ಸಾಗಲಿ ಅಲ್ಲ ಕೇವಲ ಪ್ರಾಣ, ಮತ್ತು ಈ ಕರ್ಮಗಳು ನನ್ನ ಕರ್ಮಗಳಲ್ಲ, ಈ ದೇಹ ಮತ್ತು ಮನಸ್ಸಿನ ಕರ್ಮಗಳೆಂಬುದನ್ನು ತಿಳಿಯಬೇಕಾಗಿದೆ.

ನಮ್ಮ ಮುಂದಿರುವ ಸವಾಲೆಂದರೆ ಈ ನಾಟಕವನ್ನು ನೋಡಿ ಆನಂದಿಸುವುದು. ಈ 'ನಾನು' ನಾಟಕವನ್ನು ವೀಕ್ಷಿಸಬೇಕೆ ಹೊರತು ದೇಹ-ಮನಸ್ಸುಗಳ ಸಂಕೀರ್ಣದಲ್ಲಿ ಬಂಧಿಯಾಗಬಾರದು. ನಿಜ, ನಿರ್ದೇಶಕನು ನಮ್ಮನ್ನು ರಂಗದ ಮೇಲಿಂದ ಹೊರಹಾಕುವವರೆಗೆ ಈ ಜಗತ್ತೆಂಬ ರಂಗದ ಮೇಲೆ ನಾವು ಜೀವಿಸಲೇಬೇಕು. ಆದರೆ ಕರ್ಮಗಳು ನಮಗೆ ಸೇರಿದ್ದಲ್ಲ. ಅರಿವು ನಮಗೆ ಈ ತಿಳಿವಳಿಕೆಯನ್ನು ಉಡುಗೊರೆಯಾಗಿ ನೀಡುತ್ತದೆ.

ನಾವು ಈ ನಾಟಕವನ್ನು ಕೇವಲ ವೀಕ್ಷಿಸಬೇಕಷ್ಟೆ. ಈ ಜಗತ್ತಿನಲ್ಲಿ ನಡೆಯುವ ಯಾವುದೂ ಒಳ್ಳೆಯದಾಗಲೀ ಕೆಟ್ಟದಾಗಲೀ ಅಲ್ಲ. ಇಲ್ಲಿ ಎಲ್ಲವೂ ಸಮರ್ಪಕವಾದುದು. ಕೋಟಿ-ಕೋಟಿ ಜನರು, ಸಹಸ್ರಾರು ಕೋಟಿ ಕೀಟ, ಪ್ರಾಣಿಗಳು, ಸಸ್ಯಗಳನ್ನು ಕೂಡಿಸಿ ಸೃಷ್ಟಿಕರ್ತನು ಒಂದು ಅದ್ಭುತವಾದ ಅಲೌಕಿಕ ನಾಟಕವೊಂದನ್ನು ಆಡಿಸುತ್ತಿದ್ದಾನೆ. ಅಬ್ಬಾ! ಅದೆಂಥ ಅದ್ಭುತ ನಾಟಕ ಇದು!.

ನಾವು ಈ ನಾಟಕವನ್ನು ನೋಡಿ ಆನಂದಪಡಬೇಕು. ಅಷ್ಟೇ ಅಲ್ಲ ನಾವು ಈ ದೇಹವಾಗಲಿ ಅಥವಾ ಮನಸ್ಸಾಗಲಿ ಅಲ್ಲ ಎಂಬ ಅರಿವಿನಲ್ಲಿ ಬದುಕಬೇಕು. ನಾವು ನಟರಲ್ಲ. ನಾವು ಸೃಷ್ಟಿಕರ್ತನು ತನ್ನ ನಾಟಕವನ್ನು ಆಡಿಸುವ ಸಾಧನಗಳು ಮಾತ್ರ. ನಾವು ಈ ರಂಗಕ್ಕಾಗಲಿ ಇನ್ನಿತರ ನಟರಿಗಾಗಲಿ ಅಂಟಿಕೊಳ್ಳಬಾರದು. ನಮ್ಮ ಬದುಕು ಮುಗಿಯುತ್ತಿದ್ದಂತೆಯೇ ನಾವು ಈ ಭ್ರಮೆಯಿಂದ ತಪ್ಪಿಸಿಕೊಂಡು, ಸೃಷ್ಟಿಕರ್ತನಲ್ಲಿ

ಒಂದಾಗಿ ಲೀನವಾಗುವುದು ನಮ್ಮ ಗುರಿಯಾಗಬೇಕು. ನಾನೇ ಜೇಮ್ಸ್ ಎಂಬ ಮನುಷ್ಯ, ಇದು ನನ್ನ ಕುಟುಂಬ, ಇದು ನನ್ನ ಮನೆ, ಆಸ್ತಿ, ಇದು ನನ್ನ ದೊಡ್ಡ ವ್ಯವಹಾರ ಎಂದೆಲ್ಲಾ ಯೋಚಿಸತೊಡಗಿದರೆ, ನಾವು ಕರ್ಮವನ್ನು ಗಳಿಸುವುದರಲ್ಲಿ ಬಂಧಿಯಾಗಿಬಿಡುತ್ತೇವೆ. ಆಗ ನಮ್ಮ ಎಲ್ಲಾ ಒಳ್ಳೆಯ ಮತ್ತು ಕೆಟ್ಟ ಕ್ರಿಯೆಗಳಿಗೆ ಕರ್ಮವನ್ನಾಧರಿಸಿ ಮತ್ತೊಮ್ಮೆ ಹುಟ್ಟಿ ಬೆಲೆ ತೆರಬೇಕಾಗುತ್ತದೆ.

ನಿಜ ಹೇಳಬೇಕೆಂದರೆ, ನಾನು ಜೇಮ್ಸ್ ಅಲ್ಲ. ಜೇಮ್ಸ್ ಎಂಬುದು ನಾಟಕದಲ್ಲಿ ಪಾತ್ರ ವಹಿಸುವ ನಟನ ಹೆಸರಷ್ಟೇ. ನಾಟಕದಲ್ಲಿ ಅಲೆಕ್ಸಾಂಡರನ ಪಾತ್ರವನ್ನು ವಹಿಸುವ ನಟನೊಬ್ಬ ತನ್ನನ್ನು ಸಾಮ್ರಾಟ ಅಲೆಕ್ಸಾಂಡರ್ ಎಂದುಕೊಳ್ಳುವುದನ್ನು ಒಮ್ಮೆ ಊಹಿಸಿಕೊಳ್ಳಿ. ಆಗ ಏನಾಗುತ್ತದೆ? ರಂಗದ ಮೇಲಿಂದ ಹೊರಬಂದ ನಂತರ ತಾನು ಅಲೆಕ್ಸಾಂಡರ್ ಎಂಬ ಅವನ ಭ್ರಮೆ ಕಳಚಿಬೀಳುತ್ತದೆ. ಆಗ ಅವನು ಬಹಳ ದುಃಖಿತನಾಗುತ್ತಾನೆ.

ನಾವು ಎಲ್ಲಿಯವರೆಗೆ ಭ್ರಮೆಯನ್ನು ನಂಬಿ ಬದುಕುತ್ತೇವೆಯೋ ಅಲ್ಲಿಯವರೆಗೆ ನಮ್ಮ ಕರ್ಮದ ದೆಸೆಯಿಂದಾಗಿ ಮತ್ತೆ ಮತ್ತೆ ಹುಟ್ಟುತ್ತಿರುತ್ತೇವೆ. ಹುಟ್ಟು ಸಾವನ್ನು ಹಿಂಬಾಲಿಸುತ್ತದೆ. ಅದರೊಟ್ಟಿಗೆ ಈ ಜಗತ್ತಿನ ಕಷ್ಟಗಳೂ ಸಹ ಹಿಂಬಾಲಿಸುತ್ತವೆ. ಈ ಹುಟ್ಟು-ಸಾವುಗಳ ಚಕ್ರದಿಂದ ತಪ್ಪಿಸಿಕೊಳ್ಳುವುದೇ ನಮ್ಮ ಗುರಿಯಾಗಬೇಕು. ಈ ಸತ್ಯವನ್ನು ಅರಿತ ವೀಕ್ಷಕರಂತೆ ನಾವು ಬದುಕಬೇಕು. ಹಾಗೆ ಬದುಕಿದರೆ, ಸಾವು ಬಂದಾಗ ನಾವು ಸೃಷ್ಟಿಕರ್ತನಲ್ಲಿ ಲೀನರಾಗಿ ಮತ್ತೆ ಹುಟ್ಟುವುದಿಲ್ಲ. ಆದರೆ ಇದು ಹೇಗೆ ಸಾಧ್ಯವಾಗುತ್ತದೆ? ನಾವು ಅರಿವನ್ನು ಪಡೆದುಕೊಂಡ ನಂತರವೂ ಜೀವಂತವಾಗಿದ್ದು, ನಾವು ಕರ್ಮವನ್ನು ಗಳಿಸುತ್ತಿರುತ್ತೇವೆ. ಸತ್ಯವನ್ನು ಅರಿತುಕೊಂಡ ಕರ್ಮಯೋಗಿಯು ಕರ್ಮವನ್ನು ಗಳಿಸುವುದಿಲ್ಲ.

ಇದೊಂದು ನಾಟಕ ಎಂದು ನಾವು ತಿಳಿದೊಡನೆ ಇದು ನಿಜವಲ್ಲ.
ನಾವು ನಾಟಕದಲ್ಲಿ ಬಂದು ಹೋಗುವ ಪಾತ್ರಗಳು ಮಾತ್ರ ಎಂದು ತಿಳಿಯುತ್ತದೆ.
ಆಗ ನಮಗೆ ಯಾವುದೇ ರೀತಿಯ ದುಃಖ, ನೋವುಗಳಾಗುವುದಿಲ್ಲ.
ಲಾಭ ನಷ್ಟಗಳಿಲ್ಲದೆ ನಾವು ನಾಟಕವನ್ನು ನೋಡುತ್ತೇವೆ.

# ಸಾರಾಂಶ:

# ಬದುಕಿನ ವೀಕ್ಷಕನಾಗಿ

ಈ ಜಗತ್ತು ಒಂದು ಬೃಹತ್ ರಂಗಶಾಲೆ
ನಾವು ಕೇವಲ ನಾಟಕದಲ್ಲಿ ಪಾತ್ರವಹಿಸುವ ನಟರು ಎಂಬುದನ್ನು
ತಿಳಿದುಕೊಳ್ಳಬೇಕು.
ದೈವ ತನ್ನ ನಾಟಕವನ್ನಾಡಿಸುವ ಸಾಧನಗಳು ನಾವು, ಅಷ್ಟೆ.
ನಾವು ರಂಗಕ್ಕಾಗಲಿ, ರಂಗದ ಮೇಲಿನ ನಟರಿಗಾಗಲಿ ಅಂಟಿಕೊಳ್ಳಬಾರದು.
ನಾವು ಚೆನ್ನಾಗಿ ಬದುಕಿ ಈ ನಾಟಕವನ್ನು ನೋಡಿ ಆನಂದಿಸಬೇಕು.
ನಾವೊಬ್ಬ ವೀಕ್ಷಕರಾಗಿ, ಕರ್ಮಯೋಗಿಗಳಾಗಿ ಬದುಕಿ ಕರ್ಮಗಳಿಂದ
ಮುಕ್ತಿ ಪಡೆಯಬೇಕು.

12

# ನಿಜವಾದ ಕರ್ಮಯೋಗಿ

ಯಾರು ನಿಜವಾದ ಕರ್ಮಯೋಗಿ? ಅವನು ಹೇಗೆ ಕರ್ಮಗಳಿಂದ ಬಿಡುಗಡೆ ಹೊಂದುತ್ತಾನೆ? ಕರ್ಮದ ಬಗ್ಗೆ ಎಲ್ಲಾ ವಿಷಯಗಳು ನಮಗೆ ತಿಳಿದಿವೆಯೆಂದು ನಾವು ಅಂದುಕೊಂಡಿದ್ದೇವೆ. ಆದರೆ ನಮಗೆ ಕರ್ಮದ ನಿಯಮಗಳ ಬಗ್ಗೆ ತಿಳಿದಿರುವುದು ಅತ್ಯಲ್ಪ. ಬಹುದೊಡ್ಡ ಸಂಖ್ಯೆಯ ಜನರಿಗೆ ಕರ್ಮದ ಬಗ್ಗೆ ತಿಳಿದಿಲ್ಲ. ಹೆಚ್ಚಿನ ಜನರು ಅದು ಹುಟ್ಟು-ಸಾವುಗಳನ್ನು ಅನುಭವಿಸುವ ದೇಹ ಮತ್ತು ಮನಸ್ಸುಗಳ ಸಂಕೀರ್ಣವೆಂದುಕೊಂಡಿದ್ದಾರೆ. ಕರ್ಮವನ್ನು ಚೆನ್ನಾಗಿ ಅರಿತಿರುವ ಕೆಲವರು ಮಾತ್ರ ಉತ್ತಮ ಬದುಕನ್ನು ಬದುಕುತ್ತಾರೆ, ಮತ್ತು ತಮ್ಮ ಸಾವಿನ ನಂತರವೂ ಉತ್ತಮವಾದದ್ದನ್ನು ಪಡೆದುಕೊಳ್ಳುತ್ತಾರೆ. ಕರ್ಮದ ಬಗ್ಗೆ ಸಂಪೂಣವಾಗಿ ತಿಳಿದುಕೊಂಡಿರುವ ಕರ್ಮಯೋಗಿಯಾದವನು ಮಾತ್ರ ಕರ್ಮವನ್ನು ಮೀರಿ ಸುಖ, ಶಾಂತಿ ಮತ್ತು ನೆಮ್ಮದಿಗಳನ್ನು ಅನುಭವಿಸುತ್ತಾನೆ.

ಯೋಗಿಯಾದವನು ಯೋಗದ ಮೂಲಕ ಯಾವಾಗಲೂ ದೈವದ ಸಂಪರ್ಕದಲ್ಲಿರುತ್ತಾನೆ. ಕರ್ಮಯೋಗಿಯಾದವನು ಕರ್ಮ ಅಥವಾ ಕ್ರಿಯೆಯನ್ನು ದೈವದ ಜೊತೆ ಸಂಪರ್ಕ ಹೊಂದುವ ಸಾಧನವನ್ನಾಗಿ ಬಳಸುತ್ತಾನೆ. ಕರ್ಮಯೋಗಿಯ ಕ್ರಿಯೆಗಳು ದೇಹ, ಮನಸ್ಸು ಮತ್ತು ಅಹಂಗಳಿಂದ ಆಗುವುದಿಲ್ಲ. ಅವನ ಕ್ರಿಯೆಗಳು ತೊಡಗುವುದು ನಾನು ಇದರ ನಿಜವಾದ ಕರ್ತೃ ಅಲ್ಲ ಎಂಬ ಅರಿವಿನಿಂದ. "ಕ್ರಿಯೆಗಳು ನನ್ನ ಮೂಲಕ ನಡೆಯುತ್ತವೆ

ಮತ್ತು ಅವುಗಳನ್ನು ನಡೆಸಿಕೊಡುವ ಸಾಧನವಷ್ಟೇ. ಆದ್ದರಿಂದ ನಾನು ನನ್ನದೇ ಆದ ಕರ್ಮಗಳನ್ನು ಗಳಿಸುವುದಿಲ್ಲ." ಇದು ಕರ್ಮಯೋಗಿಯ ತತ್ತ್ವ ಮತ್ತು ನಂಬಿಕೆ.

ಕರ್ಮಯೋಗಿಯಾದವನು ಕರ್ಮವನ್ನು ಬೇರೆಲ್ಲರಿಗಿಂತ ಭಿನ್ನವಾಗಿ ಗ್ರಹಿಸುತ್ತಾನೆ. ಕರ್ಮದ ನಿಯಮಗಳು ಲೋಕ ನೀತಿಯಾಗಿದ್ದು ಎಲ್ಲರಿಗೂ ಅನ್ವಯವಾಗುತ್ತವೆ. ಆದರೆ, ನಿಮಗೆ ಕರ್ಮದ ಹಲವಾರು ಅಂಶಗಳ ಬಗ್ಗೆ ತಿಳಿದಿರುವುದಿಲ್ಲ. ಒಳ್ಳೆಯ ಕ್ರಿಯೆಗಳು ಉತ್ತಮ ಫಲವನ್ನು ಮತ್ತು ಕೆಟ್ಟ ಕ್ರಿಯೆಗಳು ಕೆಟ್ಟ ಪ್ರತಿಫಲವನ್ನು ನೀಡುತ್ತವೆಂದು, ಕರ್ಮದಿಂದ ಯಾರೂ ತಪ್ಪಿಸಿಕೊಳ್ಳಲಾಗುವುದಿಲ್ಲ ಎಂದು ನಾವೆಲ್ಲರೂ ತಿಳಿದಿದ್ದೇವೆ. ಕರ್ಮದ ನಿಯಮಗಳು ಈ ಜನ್ಮದಲ್ಲಷ್ಟೇ ಅಲ್ಲದೆ, ಸಾವಿನಾಚೆ ಹಾಗೂ ಮುಂದಿನ ಜನ್ಮಕ್ಕೂ ಮುಂದುವರೆಯುತ್ತವೆ. ನಾವು ಸತ್ತ ನಂತರ ಕರ್ಮವನ್ನು ಹೊತ್ತುಕೊಂಡೇ ಹೋಗುತ್ತೇವೆ. ಮತ್ತೊಮ್ಮೆ ಮರುಹುಟ್ಟು ಪಡೆದು ಕರ್ಮವನ್ನು ಕಳೆದುಕೊಳ್ಳುತ್ತೇವೆ. ನಮ್ಮ ಮರುಹುಟ್ಟು ನಮ್ಮ ಹಿಂದಿನ ಕರ್ಮವನ್ನು ಆಧರಿಸಿರುತ್ತದೆ. ಆದರೆ ಈ ಕರ್ಮಗಳು ಯಾರಿಗೆ ಸೇರಿದ್ದವು? ದೇಹ ಸತ್ತು ಮಣ್ಣುಗೂಡುತ್ತದೆ. ಅದನ್ನು ಮಣ್ಣು ಮಾಡುತ್ತಾರೆ ಅಥವಾ ಸುಡುತ್ತಾರೆ. ಹಾಗಿದ್ದರೆ ಕರ್ಮವನ್ನು ಮುಂದಿನ ಜನ್ಮಕ್ಕೆ ಕೊಂಡೊಯ್ಯುವವರು ಯಾರು? ಅದನ್ನು ಮುಂದಕ್ಕೆ ಕೊಂಡೊಯ್ಯುವವರು ಮನಸ್ಸು ಮತ್ತು ಅಹಂ. ಈ ಮನಸ್ಸು ಮತ್ತು ಅಹಂ ಒಂದು ದೇಹದಲ್ಲಿದ್ದು, ಅದನ್ನು ತ್ಯಜಿಸಿ ಅದು ಗಳಿಸಿರುವ ಕರ್ಮದೊಂದಿಗೆ ಮತ್ತೊಂದು ದೇಹವನ್ನು ಪ್ರವೇಶಿಸುತ್ತದೆ. ಜೀವಂತವಿರುವಾಗ ದೇಹವು ಕ್ರಿಯೆಗಳಲ್ಲಿ ತನ್ನಿಂದ ತಾನೇ ತೊಡಗುವುದಿಲ್ಲ ಅದು ಮನಸ್ಸು ಮತ್ತು ಅಹಂನ ಆಜ್ಞೆಯ ಮೇರೆಗೆ ಕಾರ್ಯನಿರ್ವಹಿಸುತ್ತದೆ. ಆದ್ದರಿಂದ ಕರ್ಮವು ಸೂಕ್ಷ್ಮ ಮನಸ್ಸು ಮತ್ತು ಅಹಂಗಳಿಗೆ ಸೇರಿದ್ದೇ ಹೊರತು ದೇಹಕ್ಕಲ್ಲ. ದೇಹವು ಮೃತಪಟ್ಟಾಗ ಮನಸ್ಸು ಮತ್ತು ಅಹಂ ಅದರಿಂದ ತಪ್ಪಿಸಿಕೊಂಡು ಮತ್ತೊಂದು ಜನ್ಮವನ್ನು ತಾಳುತ್ತದೆ. ಇದೇ ಚಕ್ರ ಮುಂದುವರೆಯುತ್ತದೆ.

ಈ ಹುಟ್ಟು-ಸಾವುಗಳ ಚಕ್ರವನ್ನು ತಪ್ಪಿಸಿಕೊಳ್ಳುವುದೇ ಜೀವನದ ಮುಖ್ಯ ಗುರಿಯೆಂಬುದನ್ನು ಕರ್ಮಯೋಗಿಯಾದವನು ತಿಳಿದಿರುತ್ತಾನೆ. ಹಾಗೆಂದರೇನು? ನಿನ್ನ ಒಳ್ಳೆಯ ಅಥವಾ ಕೆಟ್ಟ ಕ್ರಿಯೆಗಳಿಗೆ ತಕ್ಕ ಪ್ರತಿಫಲವನ್ನು ಪಡೆಯುತ್ತೀ ಎಂದು ಕರ್ಮದ ನಿಯಮಗಳು ಹೇಳುತ್ತವೆ. ಇದರ ಅರ್ಥವೇನು? ಇದರ ಅರ್ಥ ಕ್ರಿಯೆ. ನೀವು ಕ್ರಿಯೆಯಿಂದ ತಪ್ಪಿಸಿಕೊಳ್ಳಬಲ್ಲಿರಾ? ಇಲ್ಲ. ನೀವು ಕ್ರಿಯೆಯಿಂದ ತಪ್ಪಿಸಿಕೊಳ್ಳಲಾರಿರಿ. ಅದರಿಂದ ನಿಮಗೆ ಬಿಡುಗಡೆ ಇಲ್ಲ. ಒಬ್ಬ ನಿಜವಾದ ಕರ್ಮಯೋಗಿಯು ಕ್ರಿಯೆಯಿಂದ ಬಿಡುಗಡೆಯನ್ನು ಪಡೆಯಬಲ್ಲ. ನೀವು ಒಳ್ಳೆಯ ಅಥವಾ ಕೆಟ್ಟ ಕರ್ಮಗಳಿಂದ ತಪ್ಪಿಸಿಕೊಳ್ಳಲಾರಿರಿ. ಎರಡೂ ಸಂದರ್ಭಗಳಲ್ಲಿ ನೀವು ಈ ಭೂಮಿಯ ಮೇಲೆ ಜನ್ಮ ತಳೆಯಲೇ ಬೇಕು. ಒಬ್ಬ ಕರ್ಮಯೋಗಿ ಮಾತ್ರ ಇದು ತನ್ನ ಕ್ರಿಯೆ ಅಲ್ಲ ಎಂಬುದನ್ನು ಅರಿತುಕೊಳ್ಳಬಲ್ಲ. ಕಾರಣ ಅವನು ಮನಸ್ಸು ಮತ್ತು ಅಹಂ ಆಗಲೀ ಅಗದಿರುವುದರಿಂದ ಮರುಜನ್ಮ ಪಡೆಯುವುದರಿಂದ ತಪ್ಪಿಸಿಕೊಳ್ಳಬಲ್ಲ.

ಹಾಗಿದ್ದರೆ ಕರ್ಮ ನಿಜವೇ? ನಾವು ನಿಜವಾಗಿಯೂ ಮತ್ತೆ ಜನ್ಮ ತಾಳುತ್ತೇವೆಯೇ? ಇದರ ಬಗ್ಗೆ ನಾವು ಧ್ಯಾನಿಸಬೇಕು. ದೇಹ ಸತ್ತ ನಂತರ ಮತ್ತೆ ಜೀವ ಪಡೆಯುವುದಿಲ್ಲ. ಆದರೆ, ನಾವು ಮನಸ್ಸು ಮತ್ತು ಅಹಂ ಎಂದು ತಿಳಿದರೆ ನಾವು ಕರ್ಮವನ್ನು ಗಳಿಸಿಕೊಂಡು ಮತ್ತೆ ಜನ್ಮ ತಾಳುತ್ತೇವೆ. ಕೇವಲ ಕ್ರಿಯೆಗಳಲ್ಲಿ ತೊಡಗಿಕೊಳ್ಳುವ ಕರ್ಮಿ ಮತ್ತು ಕ್ರಿಯೆಗಳು ತನ್ನವಲ್ಲ ಎಂದು ಅರಿತಿರುವ ಕರ್ಮಯೋಗಿಗಳ ನಡುವಿನ ವ್ಯತ್ಯಾಸ ಇದೇ.

ಒಮ್ಮೆ ನಾವು ದೇಹ ಮತ್ತು ಮನಸ್ಸುಗಳು ಅಲ್ಲವೆಂದು ಅರಿತೊಡನೆ, ನಾವು ಕರ್ಮಯೋಗಿಯಾಗಿ ಒಳ್ಳೆಯ ಮತ್ತು ಕೆಟ್ಟ ಕರ್ಮಗಳಿಂದ ಮುಕ್ತಿ ಪಡೆಯುತ್ತೇವೆ. ಇದು ಹೆಚ್ಚು ಜನರಿಗೆ ತಿಳಿದಿಲ್ಲ. ಇದು ನಮ್ಮನ್ನು ಮರುಹುಟ್ಟಿನಿಂದ ಮುಕ್ತಗೊಳಿಸುತ್ತದೆ. ಕರ್ಮದ ಲೌಕಿಕ ನಿಯಮಗಳು ಈ ಜಗತ್ತನ್ನು ನಡೆಸಿಕೊಂಡು ಹೋಗುತ್ತವೆ. ಇದನ್ನು ಸೃಷ್ಟಿಕರ್ತನು

ಸೃಷ್ಟಿಸಿದ್ದು ನಿರಂತರತೆಯನ್ನು ಪಡೆದುಕೊಂಡಿದೆ. ನಮ್ಮ ಅಂತಿಮ ಗುರಿ ನಿರ್ವಾಣ ಅಥವಾ ಮೋಕ್ಷವಾಗಿರುತ್ತದೆ. ಇದು ಕರ್ಮದಿಂದ ಮತ್ತು ಮರುಹುಟ್ಟು-ಸಾವುಗಳಿಂದ ತಪ್ಪಿಸಿಕೊಳ್ಳುವ ಮಾರ್ಗವಾಗಿದೆ. ಇದು ಸತ್ಯವನ್ನು ಅರಿಯುವ ಮೂಲಕ ಸಾಧ್ಯವಾಗುತ್ತದೆ. ನಾವು ದೇಹವೇ? ಇಲ್ಲ ದೇಹ ಸಾಯುತ್ತದೆ. ನಾವು ಮನಸ್ಸೇ? ಅದು ಎಲ್ಲಿದೆ? ನಾವು ಅದನ್ನು ಕಾಣಲಾಗುವುದಿಲ್ಲ. ಹಾಗಿದ್ದರೆ ನಾವು ಯಾರು? ನಾವು ಈ ದೇಹ, ಮನಸ್ಸುಗಳ ಸಂಕೀರ್ಣಕ್ಕೆ ಜೀವ ನೀಡುವ ದೈವಿಕವಾದ ಪ್ರಾಣಶಕ್ತಿ. ನಾವು ಈ ದೇಹ-ಮನಸ್ಸುಗಳ ಸಂಕೀರ್ಣವೆಂದು ತಿಳಿದರೆ ಕರ್ಮವನ್ನು ಉಂಟುಮಾಡುತ್ತೇವೆ. ಮತ್ತು ಈ ಹುಟ್ಟು ಸಾವುಗಳ ಚಕ್ರದಲ್ಲಿ ಬಂಧಿಗಳಾಗುತ್ತೇವೆ. ಸೃಷ್ಟಿಕರ್ತನು ಆಡಿಸುತ್ತಿರುವ ನಾಟಕದಲ್ಲಿ ಬಂಧಿತರಾಗುತ್ತೇವೆ. ಭ್ರಮೆಯಲ್ಲಿ ಮುಳುಗಿ ಒಳ್ಳೆಯ ಅಥವಾ ಕೆಟ್ಟ ಕರ್ಮಗಳನ್ನುಂಟು ಮಾಡುವುದರಿಂದ ನಾವು ಮತ್ತೆ ಜನ್ಮ ತಾಳುತ್ತೇವೆ. ಹಾಗಾಗಿ ಕಷ್ಟ, ನೋವು ದುಃಖಗಳನ್ನು ಅನುಭವಿಸುತ್ತೇವೆ. ಬುದ್ಧನು ಹೇಳಿದ ಹಾಗೆ ನಾವು ಮತ್ತೆ ಜನ್ಮ ತಳೆದರೆ ಬಹಳ ದುಃಖ ನೋವುಗಳನ್ನು ಅನುಭವಿಸುತ್ತೇವೆ. ಆದ್ದರಿಂದ ನಾವು ಕರ್ಮದ ಬಗ್ಗೆ ಸತ್ಯವನ್ನು ತಿಳಿಯುವುದು ಅನಿವಾರ್ಯ. ಈ ಜಗತ್ತು ಒಳ್ಳೆಯ ಕರ್ಮವನ್ನು ಮಾಡುವುದರ ಬಗ್ಗೆ ಮಾತನಾಡುತ್ತದೆ. ಆದರೆ ಒಳ್ಳೆಯ ಕರ್ಮವನ್ನು ಮಾಡುವುದಕ್ಕಿಂತಲೂ ಸವಾಲಿನ ಕೆಲಸವೆಂದರೆ, ಕರ್ಮದ ಬಗ್ಗೆ ಸತ್ಯವನ್ನು ತಿಳಿದು ಅದನ್ನು ಮೀರುವುದು. ಕರ್ಮಯೋಗಿಯಾಗಿ ನಿರ್ವಾಣ ಅಥವಾ ಮೋಕ್ಷ, ಬಿಡುಗಡೆ, ಮುಕ್ತಿಯನ್ನು ಪಡೆದುಕೊಳ್ಳುವ ಸವಾಲು. ಇದೇ ನಮ್ಮ ಜೀವನದ ಅಂತಿಮ ಗುರಿಯಾಗಬೇಕು.

ನಾವು ಜೀವನದಲ್ಲಿ ಕ್ರಿಯೆಗಳಿಂದ ತಪ್ಪಿಸಿಕೊಳ್ಳಬಲ್ಲೆವೆ?

ಇಲ್ಲ ಅದು ಸಾಧ್ಯವಿಲ್ಲ. ಆದರೆ ನಾವು ಕ್ರಿಯೆಗಳಿಂದ ಮುಕ್ತರಾಗಬಹುದು.

ನಾನು ಯಾವುದೇ ಕ್ರಿಯೆಯಲ್ಲಿ ತೊಡಗಿದರೂ ಅದು ನನ್ನದಲ್ಲ.

ನಾನು ಕೇವಲ ಸಾಧನವಷ್ಟೆ, ಕ್ರಿಯೆಗಳೆಲ್ಲವೂ ನಿನ್ನವೇ.

# ಸಾರಾಂಶ:

# ನಿಜವಾದ ಕರ್ಮಯೋಗಿ

ಕ್ರಿಯೆಯಿಂದ ಬಿಡುಗಡೆ ಇಲ್ಲ ಎಂದು ಅರಿತವನೇ ನಿಜವಾದ ಕರ್ಮಯೋಗಿ.
ಆದರೆ ಕ್ರಿಯೆಯಿಂದ ಬಿಡುಗಡೆಯನ್ನು ಪಡೆಯಲು ಸಾಧ್ಯ.
ದೇವರಿಗೆ ತನ್ನನ್ನು ಸಂಪೂರ್ಣವಾಗಿ ಒಪ್ಪಿಕೊಂಡವನು
ಏನನ್ನೂ ಮಾಡುವುದಿಲ್ಲ. ಎಲ್ಲವೂ ದೈವ ನಡೆಸಿದಂತೆ.
ಅವನು ದೇವರ ಸಾಧನ ಮಾತ್ರ.

ಹಾಗಾಗಿ ಕರ್ಮಯೋಗಿಯೊಬ್ಬನು ಕರ್ಮದ ನಿಯಮಗಳನ್ನು ಮೀರಿ
ಮುಕ್ತಿಯನ್ನು ಪಡೆಯಬಲ್ಲ.
ಕರ್ಮಯೋಗಿಯು ಕರ್ಮವನ್ನು ಉಂಟುಮಾಡುತ್ತಿರುವಂತೆ ಕಂಡುಬಂದರೂ
ಅವನು ಎಲ್ಲಾ ಕರ್ಮಗಳಿಂದಲೂ ಮುಕ್ತ ಎಂಬುದೇ ಸತ್ಯ.

# 13

# ನಮ್ಮ ಅಂತಿಮ ಗುರಿ- ನಿರ್ವಾಣ ಅಥವಾ ಮೋಕ್ಷ

ಮಾನವಕೋಟಿಯ ಅಂತಿಮ ಗುರಿಯು ಕರ್ಮದಿಂದ ಮುಕ್ತಿ ಪಡೆದು ನಿರಂತರವಾದ ಹುಟ್ಟು-ಸಾವಿನ ಚಕ್ರದಿಂದ ತಪ್ಪಿಸಿಕೊಳ್ಳುವುದೇ ಆಗಿದೆ. ಆದರೆ ಇದು ಸಾಧ್ಯವೇ? ಕರ್ಮದ ಬಗ್ಗೆ ಸಂಪೂರ್ಣವಾಗಿ ತಿಳಿದುಕೊಂಡವರು ಮತ್ತು ಸತ್ಯವನ್ನು ಅರಿತವರು ಕರ್ಮದಿಂದ ಎಲ್ಲ ಕಾಲಕ್ಕೂ ಮುಕ್ತಿ ಪಡೆಯುತ್ತಾರೆ.

ಅರಿವನ್ನು ಗಳಿಸಿಕೊಂಡವರು ನಾವು ದೇಹ ಮನಸ್ಸುಗಳ ಸಂಕೀರ್ಣವಲ್ಲವೆಂದು, ನಾವು ಜೀವ ನೀಡುವ ಪ್ರಾಣಶಕ್ತಿಯೆಂದು ತಿಳಿದು ಸರ್ವಕಾಲಕ್ಕೂ ಸುಖ, ಸಂತೋಷ, ಆನಂದಗಳನ್ನು ಅನುಭವಿಸುತ್ತೇವೆ. ಕ್ರಿಯೆಯಲ್ಲಿ ತೊಡಗಿದವರು ನಾವಲ್ಲ ಎಂದು ತಿಳಿದುಕೊಂಡಾಗ ನಾವು ಕರ್ಮವನ್ನುಂಟು ಮಾಡುವುದಿಲ್ಲ ಮತ್ತು ನಮ್ಮ ಕರ್ಮಗಳನ್ನು ತೊಡೆದುಕೊಳ್ಳಲು ನಾವು ಮತ್ತೆ ಜನ್ಮ ತಾಳಬೇಕಾಗಿಲ್ಲ. ನಾವು ನಿರ್ಭೀತರಾಗಿ ಬದುಕಲು ತೊಡಗುತ್ತೇವೆ. ಎಲ್ಲ ರೀತಿಯ ನಕಾರಾತ್ಮಕ ಸಂಗತಿಗಳಿಂದ ದೂರವಿರುತ್ತೇವೆ.

ಇಂತಹ ಜೀವವನ್ನು ಜೀವನ್ಮುಕ್ತನೆಂದು ಕರೆಯುತ್ತಾರೆ. ಜೀವಂತವಿದ್ದರೂ ಅವರು ಮುಕ್ತಿ ಪಡೆದಿರುತ್ತಾರೆ. ಅಂತಹ ವ್ಯಕ್ತಿಗೆ ತಾನು ಕ್ರಿಯೆಯಲ್ಲಿ ತೊಡಗಿರುವುದಿಲ್ಲವೆಂದು ತಿಳಿದಿರುತ್ತದೆ. ಎಲ್ಲವನ್ನೂ ನಡೆಸುವವನು ಆ ದೇವರು. ನಾವು ಅವನ ಸಂಕಲ್ಪವನ್ನು

ಸಾಕಾರಗೊಳಿಸುವ ಸಾಧನವಷ್ಟೆ. ಜೀವನ್ಮುಕ್ತರು ಕೇವಲ ಇಂದಿನ ಕರ್ಮದಿಂದಷ್ಟೆ ಮುಕ್ತಿ ಪಡೆದಿರುವುದಿಲ್ಲ, ಹಿಂದಿನ ಜನ್ಮದ ಕರ್ಮಗಳಿಂದಲೂ ಕೂಡ ಮುಕ್ತಿ ಪಡೆದಿರುತ್ತಾರೆ. ಕರ್ಮವು ಮನಸ್ಸು ಮತ್ತು ಅಹಂಗಳಿಗೆ ಸಂಬಂಧಪಟ್ಟದ್ದು. ಆದರೆ ಜೀವನ್ಮುಕ್ತ ಅದಕ್ಕೆ ಸಂಬಂಧಪಟ್ಟಿರುವುದಿಲ್ಲ. ಅವನು ಜೀವ ನೀಡುವ ಪ್ರಾಣಶಕ್ತಿ ಅಥವಾ ಆತ್ಮ. ಅವನು ನಮ್ಮಂತಹ ಹುಲುಮಾನವರಂತೆ ಈ ಭೂಮಿಯ ಮೇಲೆ ಮತ್ತೆ ಹುಟ್ಟಿ ದುಃಖ ನೋವುಗಳನ್ನು ಅನುಭವಿಸಬೇಕಾಗಿಲ್ಲ. ಅವನು ಸರ್ವಕಾಲಕ್ಕೂ ಸುಖ-ಸಂತೋಷ ಆನಂದಗಳಲ್ಲಿ ಬದುಕುತ್ತಾನೆ. ಸಾವು ಬಂದಾಗ ಅವನ ಆತ್ಮವು ಮುಕ್ತಿಯನ್ನು ಪಡೆದುಕೊಳ್ಳುತ್ತದೆ. ಜೀವನ್ಮುಕ್ತನು ಇತರರಂತೆ ತಾನು ಮನಸ್ಸು ಮತ್ತು ಅಹಂ ಎಂದು ತಿಳಿದು ಕರ್ಮಗಳನ್ನುಂಟುಮಾಡಿ ಅವುಗಳನ್ನು ಕಳೆದುಕೊಳ್ಳಲು ಮತ್ತೆ ಹುಟ್ಟಿ ಬರುವುದಿಲ್ಲ.

ಎಲ್ಲ ಮಾನವರ ಜೀವನದ ಗುರಿಯೂ ಅರಿವನ್ನು ಪಡೆದುಕೊಂಡು ಸುಖ-ಶಾಂತಿಗಳಿಂದ ಬದುಕುವುದು ಅಥವಾ ಜೀವನ್ಮುಕ್ತನಾಗಿ ದೇವರಲ್ಲಿ ಲೀನರಾಗುವುದು. ನಾವು ದೇಹ ಮನಸ್ಸುಗಳ ಸಂಕೀರ್ಣದಲ್ಲಿ ಬಂಧಿತರಾಗಿದ್ದರೂ ನಾವು ಅದಲ್ಲ ಎಂಬುದನ್ನು ತಿಳಿದುಕೊಳ್ಳುವುದೇ ನಮ್ಮ ಗುರಿಯಾಗಬೇಕಿರುತ್ತದೆ. ದೈವ ಸಾಮ್ರಾಜ್ಯವು ನಮ್ಮೊಳಗೇ ಇದೆಯೆಂಬುದನ್ನು ತಿಳಿಯಬೇಕಾಗುತ್ತದೆ. ನಾವು ಕೇವಲ ಹುಲುಮಾನವರಲ್ಲ, ಮನುಷ್ಯ ರೂಪದಲ್ಲಿರುವ ದೇವರ ಅಂಶ. ನಮ್ಮೆಲ್ಲರ ಅಂತಿಮ ಗುರಿ ಆಸೆ-ಆಕಾಂಕ್ಷೆ ಮತ್ತು ಕಾಮನೆಗಳಿಂದ ಬಿಡುಗಡೆ ಪಡೆದು ಸುಖ-ಸಂತೋಷವನ್ನು ಅರಸುವುದಾಗಿದೆ. ಇಲ್ಲಿ ನಿಜವಾದ ಸವಾಲೆಂದರೆ ಈ ಜಗತ್ತಿನಲ್ಲಿನ ಸೌಂದರ್ಯದ ಹಿಂದೆ ಅಡಗಿರುವ ನಿಜ ಸೌಂದರ್ಯವನ್ನು ಕಾಣುವುದು. ಸೃಷ್ಟಿಯನ್ನು ಕಂಡು ದಂಗಾಗದೆ ನಮ್ಮೆಲರ ಕಾರಣಕರ್ತನಾದ ಸೃಷ್ಟಿಕರ್ತನನ್ನು ಪ್ರೀತಿಸುವುದು.

ಬಹುಪಾಲು ಮಾನವರು ಅಜ್ಞಾನದಲ್ಲೇ ಬದುಕುತ್ತಾರೆ. ನಮಗೆ ಕರ್ಮದ ಅರ್ಥವೇ ಗೊತ್ತಿರುವುದಿಲ್ಲ. ಕೆಲವರು ನಾವು ಕರ್ಮದಿಂದ ತಪ್ಪಿಸಿಕೊಳ್ಳಲಾಗುವುದಿಲ್ಲ ಎಂಬ ಮಿಥ್ಯೆಯನ್ನು ನಂಬಿಕೊಂಡಿರುತ್ತಾರೆ. ನಮ್ಮ ಅಜ್ಞಾನದಿಂದಾಗಿ ನಾವು ದೇವರಿಂದ ಬೇರೆ ಎಂದು ತಿಳಿಯುತ್ತೇವೆ. ನಾವು ನಿಜವಾಗಿಯೂ ಈ ಭೂಮಿಯ ಮೇಲೆ ಪ್ರಕಟವಾಗಿರುವ ದೇವರ ರೂಪ ಎಂಬುದನ್ನು ತಿಳಿದುಕೊಳ್ಳುವುದಿಲ್ಲ. ಈ ಸತ್ಯವನ್ನು ಅರಿಯುವುದೇ ನಮ್ಮ ಅಂತಿಮ ಗುರಿಯಾಗಿರುತ್ತದೆ.

ಸಾಗರದ ಅಲೆಯೊಂದು ತಾನು ಸಾಗರದಿಂದ ಬೇರೆ ಎಂದುಕೊಳ್ಳುತದೆ ಎಂಬುದನ್ನು ಕಲ್ಪಿಸಿಕೊಳ್ಳಿ. ಹಾಗೆಯೇ ಚಿನ್ನದಿಂದ ತಯಾರಾದ ಚಿನ್ನದ ಉಂಗುರವು ತಾನು ಚಿನ್ನದಿಂದ ಬೇರೆ ಎಂದುಕೊಳ್ಳುತ್ತದೆ ಎಂದಿಟ್ಟುಕೊಳ್ಳಿ. ಸಾಗರವಿಲ್ಲದಿದ್ದರೆ ಅಲೆಗೆ ಅಸ್ತಿತ್ವವೇ ಇರುವುದಿಲ್ಲ. ಹಾಗೆಯೇ ಚಿನ್ನವಿಲ್ಲದೆ ಉಂಗುರವಿಲ್ಲ. ದೈವನಿಲ್ಲದೆ ನಾವೂ ಇರುವುದಿಲ್ಲ. ಈ ಸತ್ಯವನ್ನು ಅರಿಯುವುದೇ ನಮ್ಮ ಗುರಿಯಾಗಬೇಕು.

ಈ ಸತ್ಯವನ್ನು ಅರಿತ ಕೂಡಲೆ ನಾವು ಕರ್ಮದಿಂದ ಮುಕ್ತರಾಗುತ್ತೇವೆ. ಅಷ್ಟೇ ಅಲ್ಲ ನಮ್ಮ ಜೀವನವು ಕೂಡ ಸುಖ ಶಾಂತಿಗಳಿಂದ ತುಂಬಿಕೊಳ್ಳುತ್ತದೆ. ನಮ್ಮೊಳಗಿನ ದೇವನನ್ನು ಅರಸಿದಾಗ ನಾವು ಸುಖವನ್ನು ಪಡೆಯುವ ಗೋಜಿಗೆ ಹೋಗುವುದಿಲ್ಲ. ಇದೇ ಮಾನವ ಜನ್ಮದ ಅಂತಿಮ ಗುರಿ. ಕರ್ಮದಿಂದ ಮುಕ್ತಿ ಪಡೆದು ದೇವನಲ್ಲಿ ಲೀನನಾಗುವುದು.

**ನಿಮ್ಮ ಜೀವನದಾಂತಿಮ ಗುರಿ ಏನು?**
**ಅದು ಕಷ್ಟದಿಂದ ತಪ್ಪಿಸಿಕೊಂಡು ಸುಖವನ್ನು ಅನುಭವಿಸುವುದೇ?**
**ಇಲ್ಲ, ಸಂತೋಷ ಪಡೆಯುವುದು ನಮ್ಮ ಅಂತಿಮ ಗುರಿ**
**ಎಂದೆಂದುಕೊಳ್ಳುವುದು ತಪ್ಪು.**
**ನಮ್ಮ ಉದ್ದೇಶ ಇವೆಲ್ಲವುಗಳಿಂದ ಮುಕ್ತಿ ಪಡೆದು ನಮ್ಮ ಆತ್ಮವನ್ನು**
**ಅರಿತುಕೊಳ್ಳುವುದಾಗಿದೆ.**

# ಸಾರಾಂಶ:

# ನಮ್ಮ ಅಂತಿಮ ಗುರಿ-
# ನಿರ್ವಾಣ ಅಥವಾ ಮೋಕ್ಷ

ನಾವೆಲ್ಲರೂ ಸಂತೋಷದಿಂದಿರಲು ಬಯಸುತ್ತೇವೆ.
ಆದರೆ ನಾವು ಯಾವಾಗಲೂ ಸಂತೋಷದಿಂದಿರಲು ಸಾಧ್ಯವೆ?
ಈ ಜಗತ್ತು ದುಃಖ-ನೋವುಗಳಿಂದ ಕೂಡಿದೆ.
ಈ ದುಃಖ-ನೋವುಗಳಿಂದ ತಪ್ಪಿಸಿಕೊಳ್ಳಲು ಕರ್ಮ
ಮತ್ತು ಮರು ಜನ್ಮದಿಂದ ಮುಕ್ತಿ ಪಡೆಯುವ ಮೂಲಕ ಮಾತ್ರ ಸಾಧ್ಯ.

ಸಾವಿನ ನಂತರ ನಾವು ಮುಕ್ತಿ ಪಡೆದು
ದೇವನಲ್ಲಿ ಲೀನರಾಗಬೇಕು.
ಇದುವೇ ಮುಕ್ತಿ, ಮೋಕ್ಷ, ನಿರ್ವಾಣ.
ಇದುವೇ ಜ್ಞಾನೋದಯ...
ನಮ್ಮ ಜೀವನದ ಅಂತಿಮ ಗುರಿ.

# ಕರ್ಮದ ಬಗ್ಗೆ ಪದೇ ಪದೇ ಕೇಳಲಾಗುವ ಪ್ರಶ್ನೆಗಳು

**1. ನಮ್ಮ ಎಲ್ಲಾ ರೀತಿಯ ಕ್ರಿಯೆಗಳು ಕರ್ಮವನ್ನು ಉಂಟುಮಾಡುತ್ತವೆಯೇ?**

ಕರ್ಮವೆಂದರೆ ಕ್ರಿಯೆ. ಆ ಕಾರಣದಿಂದಲೇ ಈ ನಿಯಮವನ್ನು ಕರ್ಮದ ನಿಯಮವೆಂದು ಕರೆಯಲಾಗುತ್ತದೆ. ಹೌದು, ಎಲ್ಲಾ ರೀತಿಯ ಕ್ರಿಯೆಗಳೂ, ಅವು ಒಳ್ಳೆಯದಿರಲಿ ಅಥವಾ ಕೆಟ್ಟವಿರಲಿ, ಅವುಗಳನ್ನು ದಾಖಲಿಸಲಾಗುತ್ತದೆ ಮತ್ತು ಅವು ಕರ್ಮವನ್ನು ಉಂಟುಮಾಡುತ್ತವೆ; ಅದಕ್ಕೆ ತಕ್ಕ ಪ್ರತಿಫಲವನ್ನು ನಾವು ಪಡೆಯುತ್ತೇವೆ.

**2. ನಮಗಾಗುವುದೆಲ್ಲವೂ ಪೂರ್ವನಿರ್ಧರಿತವೆಂದು ಜನರು ಭಾವಿಸುತ್ತಾರೆ. ಹಾಗಿದ್ದರೆ ನಾವು ನಮ್ಮ ಕರ್ಮಗಳಿಗೆ ಹೇಗೆ ಜವಾಬ್ದಾರರಾಗುತ್ತೇವೆ?**

ಕರ್ಮವು ಸ್ವಲ್ಪಮಟ್ಟಿನ ಪೂರ್ವನಿರ್ಧರಿತ ವಿಧಿಯನ್ನು ನಿರ್ಧರಿಸುತ್ತದೆ ಎಂಬುದು ನಿಜವಾದರೂ, ಅದು ನಾವು ಕ್ರಿಯೆಗಳಲ್ಲಿ ತೊಡಗಿಸಿಕೊಂಡು ಕರ್ಮವನ್ನು ಉಂಟುಮಾಡುವುದನ್ನು ತಡೆಯುವುದಿಲ್ಲ. ನಮ್ಮ ಭೂತದ ಕ್ರಿಯೆಗಳು ಈ ಜನ್ಮದ ಪೂರ್ವನಿರ್ಧರಿತ ವಿಧಿಯನ್ನು ನಿರ್ಧರಿಸುತ್ತವೆ. ನಮ್ಮ ಲಿಂಗ, ಜನ್ಮ ದಿನಾಂಕ, ಹುಟ್ಟಿದ ಸ್ಥಳ, ನಮ್ಮ ತಂದೆ ತಾಯಂದಿರು, ಇತ್ಯಾದಿ ನಮ್ಮ ಕರ್ಮಗಳ ಫಲಗಳಿಂದಾಗಿ

ಪೂರ್ವನಿರ್ಧರಿತವಾಗಿರುತ್ತವೆ. ಆದರೆ ನಮ್ಮ ಕ್ರಿಯೆಗಳು ಪೂರ್ವನಿರ್ಧರಿತವಲ್ಲ. ಸಂದರ್ಭಗಳು ಮಾತ್ರ ಪೂರ್ವನಿರ್ಧರಿತ. ನಮ್ಮ ಸುತ್ತಮುತ್ತ ಆಗುತ್ತಿರುವುದೆಲ್ಲಾ ನಮ್ಮ ಹಿಂದಿನ ಕರ್ಮದ ಫಲ. ಆದರೆ ನಾವು ಕ್ರಿಯೆಯಲ್ಲಿ ತೊಡಗಿಸಿಕೊಳ್ಳುವುದು ನಮ್ಮ ಆಯ್ಕೆಯಾಗಿರುತ್ತದೆ. ಆದ್ದರಿಂದ ನಮ್ಮ ಕ್ರಿಯೆಗಳಿಗೆ ನಾವೇ ಜವಾಬ್ದಾರರಾಗಿರುತ್ತೇವೆ.

**3. ನಮ್ಮ ಗುರುವೋ ಅಥವಾ ಸಾಧುವೋ ನಮ್ಮ ಕರ್ಮಗಳನ್ನು ಅಳಿಸಬಲ್ಲರೇ?**

ಒಬ್ಬ ಗುರು ಅಥವಾ ಸಾಧುವು ನಮ್ಮನ್ನು ಒಳ್ಳೆಯ ಕರ್ಮಗಳತ್ತ ಕೊಂಡೊಯ್ಯಬಲ್ಲರು. ಅವರು ನಮಗೆ ಹುಟ್ಟು ಸಾವುಗಳ ಚಕ್ರದಿಂದ ಬಿಡುಗಡೆ ಪಡೆಯಲು ಮಾರ್ಗದರ್ಶನ ನೀಡಬಲ್ಲರು. ಆದರೆ ಗುರುವಾಗಲಿ, ಸಾದುವಾಗಲಿ ನಮ್ಮ ಕರ್ಮಗಳನ್ನು ತೊಡೆದು ಹಾಕಲಾರರು. ನಮ್ಮನ್ನು ಹೊರತುಪಡಿಸಿದರೆ ನಮ್ಮ ಕರ್ಮಗಳನ್ನು ಈ ಜಗತ್ತಿನಲ್ಲಿ ಯಾರೂ ಕೂಡ ತೊಡೆದು ಹಾಕಲಾರರು. ಇದು ನಮ್ಮದೇ ಕರ್ಮ. ನಾವೇ ಅದನ್ನು ತೊಡೆದು ಹಾಕಬೇಕು.

**4. ಕರ್ಮದ ಮೊತ್ತವನ್ನು ಕಡಿಮೆ ಮಾಡಬಹುದೆ? ಮಾಡಬಹುದಾದರೆ ಹೇಗೆ?**

ಸಾಧಾರಣವಾಗಿ ಕರ್ಮವನ್ನು ನಮ್ಮ ಕೆಟ್ಟ ಕ್ರಿಯೆಗಳೆಂದು ಪರಿಗಣಿಸಲಾಗುವುದರಿಂದ ನಮ್ಮ ಒಳ್ಳೆಯ ಕ್ರಿಯೆಗಳಿಂದ ಮಾತ್ರ ಕೆಟ್ಟ ಕ್ರಿಯೆಗಳ ಮೊತ್ತವನ್ನು ಕಡಿಮೆ ಮಾಡಬಹುದು. ಕೆಲವು ಹಾಗಾಗಲು ಸಾಧ್ಯವಿಲ್ಲವೆಂದುಕೊಂಡರೂ ಖಂಡಿತವಾಗಿಯೂ ನಮ್ಮ ಒಳ್ಳೆಯ ಕ್ರಿಯೆಗಳಿಂದ ಕೆಟ್ಟ ಕ್ರಿಯೆಗಳ ಭಾರವನ್ನು ಇಳಿಸಬಹುದು.

**5. ಮಾನಸಿಕ ಖಾಯಿಲೆಯಿಂದ ಬಳಲುತ್ತಿರುವವರು ಕರ್ಮದಿಂದ ಮುಕ್ತರೆ? ಅವರಿಗೆ**

**ಬುದ್ಧಿಮತ್ತೆ, ಮನಸ್ಸು ಇಲ್ಲದಿರುವುದರಿಂದ ಇದು ಸಾಧ್ಯವೆ?**

ನಾವು ಯಾರೂ ಕೂಡ ಕರ್ಮವನ್ನು ಸರಿಯಾಗಿ ವರ್ಣಿಸಲು ಸಾಧ್ಯವಿಲ್ಲ. ನಾವು ಆ ಬಗ್ಗೆ ಊಹೆಗಳನ್ನು ಮಾತ್ರ ಮಾಡಬಲ್ಲೆವು. ಕರ್ಮದ ನಿಯಮವೇನೆಂದರೆ ಕ್ರಿಯೆಯಲ್ಲಿ ತಮ್ಮ ಸ್ವಂತ ಆಯ್ಕೆಯಿಂದ ತೊಡಗುವವರು ತಮ್ಮ ಕರ್ಮಗಳಿಗೆ ಜವಾಬ್ದಾರರಾಗಿರುತ್ತಾರೆ. ಹಾಗಾಗಿ, ಬುದ್ಧಿ ಬೆಳೆಯದ ಮಕ್ಕಳು ಮತ್ತು ಬುದ್ಧಿಮತ್ತೆಯನ್ನು ಹೊಂದಿರದ ಪ್ರಾಣಿಗಳು ಕರ್ಮವನ್ನು ಉಂಟುಮಾಡಲಾರವು. ಇದು ಮಾನಸಿಕ ಖಾಯಿಲೆಯಿಂದ ಬಳಲುವವರಿಗೆ ಕೂಡ ಅನ್ವಯವಾಗುತ್ತದೆ.

**6. ಅರಿವನ್ನು ಪಡೆದ ಗುರುಗಳು ಕರ್ಮವನ್ನು ಉಂಟುಮಾಡಬಲ್ಲರೇ?**

ಜೀವಂತವಿರುವವರೆಲ್ಲರೂ ಕರ್ಮವನ್ನು ನಿರ್ಮಿಸುತ್ತಾರೆ. ಆದರೆ ಆಧ್ಯಾತ್ಮಿಕ ಗುರುಗಳು ಮತ್ತು ಅರಿವನ್ನು ಪಡೆದವರು ಕರ್ಮವನ್ನು ಉಂಟುಮಾಡುವುದಿಲ್ಲ. ಕಾರಣ ಅವರು ಕ್ರಿಯೆಯಲ್ಲಿ ತೊಡಗಿಕೊಳ್ಳುವುದಿಲ್ಲ. ಅವರು ದೇಹ, ಮನಸ್ಸು ಮತ್ತು ಅಹಂಗಳು ತಾವಲ್ಲ ಎಂಬುದನ್ನು ಬಲ್ಲರು. ತಾವು ದೇಹ, ಮನಸ್ಸು ಮತ್ತು ಅಹಂಗಳ ಸಂಕೀರ್ಣದಲ್ಲಿ ಜೀವ ತಳೆದಿದ್ದರೂ ಅವರ ಕ್ರಿಯೆಗಳೆಲ್ಲವೂ ದೈವ ನಿರೂಪಿತವಾದವು. ಅವರು ಕೇವಲ ಅವನ ಸಾಧನ ಮಾತ್ರ. ಹಾಗಾಗಿ ಅವರು ಕರ್ಮವನ್ನು ಉಂಟುಮಾಡುವುದಿಲ್ಲ, ಅದರಿಂದ ಮುಕ್ತರು.

**7. ಜನರು ಅನುಭವಿಸುವ ದುಃಖ, ನೋವುಗಳು ಅವರ ಕರ್ಮದ ಭಾಗವಾಗಿರುವುದರಿಂದ ಕರ್ಮವನ್ನು ತೊಡೆದುಹಾಕುವ ವಿಷಯದಲ್ಲಿ ನಾವು ತಲೆ ಹಾಕುತ್ತಿದ್ದೇವೆಯೇ?**

ದುಃಖ ನೋವುಗಳನ್ನು ಅನುಭವಿಸುತ್ತಿರುವ ವ್ಯಕ್ತಿಯೊಬ್ಬನಿಗೆ ನಾವು ನೆರವಾಗಬೇಕಾದಾಗ ಅವರ ಕರ್ಮದ ಬಗ್ಗೆ ನಾವು ಯೋಚಿಸಬಾರದು. ನಾವು ನಿರ್ಮಿಸುತ್ತಿರುವ ಕರ್ಮಗಳ ಬಗ್ಗೆ

ಮಾತ್ರ ಚಿಂತಿಸಬೇಕು. ನಾವು ಬಡವಬಲ್ಲಿದರ ಬಗ್ಗೆ ಕರುಣಾಮಯಿಗಳಾಗಿ ನಡೆದುಕೊಳ್ಳುವುದರಿಂದ ಒಳ್ಳೆಯ ಕರ್ಮವನ್ನು ಉಂಟುಮಾಡುತ್ತೇವೆ. ನಾವು ನೋವನ್ನು ಅನುಭವಿಸುತ್ತಿರುವವರಿಗೆ ಸಹಾಯ ಮಾಡುವುದರ ಮೂಲಕ ಅವರ ಕರ್ಮದಲ್ಲಿ ತಲೆ ಹಾಕುತ್ತಿದ್ದೇವೆಂದು ತಿಳಿಯುವುದು ತಪ್ಪು.

**8. ಒಳ್ಳೆಯ ಕ್ರಿಯೆಗಳಿಂದ ಒಳ್ಳೆಯ ಕರ್ಮಗಳು ಉಂಟಾಗಿ ನಾವು ಮತ್ತೆ ಮರುಜನ್ಮವನ್ನು ಪಡೆಯುವುದಾದರೆ, ನಾವು ಒಳ್ಳೆಯ ಕರ್ಮಗಳನ್ನು ಬಿಟ್ಟುಕೊಡುವುದು ಸೂಕ್ತವಲ್ಲವೇ?**

ಇದಕ್ಕೆ ಸಾಮಾನ್ಯ ಜ್ಞಾನದ ಉತ್ತರವೆಂದರೆ, ಇಲ್ಲ. ನಾವು ಒಳ್ಳೆಯ ಕ್ರಿಯೆಗಳನ್ನು ಮಾಡುವುದನ್ನು ನಿಲ್ಲಿಸಬಾರದು. ಕಾರಣ, ನಾವು ಕ್ರಿಯೆಗಳಿಲ್ಲದೆ ಬದುಕುವುದು ಸಾಧ್ಯವಿಲ್ಲ. ನಾವು ಕ್ರಿಯೆಯಲ್ಲಿ ತೊಡಗಲೇಬೇಕು. ನಮಗಿರುವುದು ಎರಡೇ ಆಯ್ಕೆಗಳು- ಒಳ್ಳೆಯ ಕ್ರಿಯೆಯಲ್ಲಿ ತೊಡಗುವುದು ಅಥವ ಕೆಟ್ಟ ಕ್ರಿಯೆಯಲ್ಲಿ ತೊಡಗುವುದು. ಒಳ್ಳೆಯ ಕೆಲಸವನ್ನು ಮಾಡು ಎಂದು ಸಾಮಾನ್ಯ ಜ್ಞಾನ ಹೇಳುತ್ತದೆ. ನಾವು ಒಳ್ಳೆಯ ಕರ್ಮಗಳನ್ನು ಬಿಟ್ಟುಕೊಟ್ಟರೆ ನಾವು ಮಾಡುವುದಾದರೂ ಏನನ್ನು? ನಾವು ಏನನ್ನೂ ಮಾಡಲಾಗುವುದಿಲ್ಲ. ಹಾಗಿದ್ದರೆ ನಾವು ಏನನ್ನಾದರೂ ಮಾಡಲೇಬೇಕು. ಕೆಟ್ಟ ಕರ್ಮಗಳಿಗಿಂತ ಒಳ್ಳೆಯ ಕರ್ಮಗಳನ್ನು ಮಾಡುವುದು ಉತ್ತಮ. ಆದರೆ ಒಳ್ಳೆಯ ಕರ್ಮಗಳು ನಮ್ಮ ಕ್ರಿಯೆಗಳಲ್ಲ ಎಂಬ ಒಂದು ಅಂಶವನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು. ನಾವು ಒಳ್ಳೆಯ ಕರ್ಮಗಳನ್ನು ದೇವರ ಸಾಧನಗಳಾಗಿ, ಆತನ ಪರವಾಗಿ ಮಾತ್ರ ಮಾಡಬೇಕು. ಅದು ಅಹಂನಿಂದ ಕೂಡಿರಬಾರದು. ಅದನ್ನು ನಾವು ಅವನ ಚರಣಗಳಿಗೆ ಅರ್ಪಿಸಬೇಕು.

**9. ಕರ್ಮದ ನಿಯಮಗಳು ಕಣ್ಣಿಗೆ ಕಣ್ಣು ಎಂಬ ತತ್ವದ ಆಧಾರದ ಮೇಲೆ**

**ಕಾರ್ಯನಿರ್ವಹಿಸುತ್ತವೆಯೇ?**

ಕರ್ಮದ ನಿಯಮಗಳು ತೊಡೆದುಕೊಳ್ಳುವ ಮತ್ತು ಪರಿಹಾರ ರೂಪದಲ್ಲಿ ಕೆಲಸ ಮಾಡುತ್ತವೆ. ಆದರೆ, ನಮ್ಮ ಕೆಟ್ಟ ಕ್ರಿಯೆಗಳಿಗೆ ತದ್ರೂಪದ ಪ್ರತಿಫಲವೆ ಸಿಗುತ್ತದೆ ಎಂಬುದನ್ನು ಯಾರೂ ಹೇಳಲಾಗುವುದಿಲ್ಲ. ಪ್ರತಿಫಲವು ಸೌಮ್ಯವಾಗಿರಬಹುದು ಅಥವಾ ಕಠೋರವಾಗಿರಬಹುದು. ಕರ್ಮದ ನಿಯಮಗಳು ಸೃಷ್ಟಿಕರ್ತನ ಲೋಕನೀತಿಯಾಗಿದೆ. ಅದು ಕಾರ್ಯನಿರ್ವಹಿಸುವ ವಿಧಾನವನ್ನು ಗ್ರಹಿಸುವುದು ನಮ್ಮ ಅಳತೆಗೆ ಮೀರಿದ್ದು. ನಾವು ಅದನ್ನು ಕೇವಲ ಊಹಿಸಬಲ್ಲವಷ್ಟೆ. ಈ ನಿಯಮಗಳು ಕಾರ್ಯವಹಿಸುವ ರಿತಿಯ ಬಗ್ಗೆ ನಮಗೆ ಒಂದಿಷ್ಟು ಸುಳಿವು ಸಿಗಬಹುದು. ಆದರೆ ಅದರ ಬಗ್ಗೆ ನಿರ್ದಿಷ್ಟವಾಗಿ ತಿಳಿಯಲಾರೆವು. ಹಾಗಿದ್ದರೂ, ಅದು ಕ್ರಿಯೆ, ಪ್ರತಿಕ್ರಿಯೆ, ಕಾರ್ಯಕಾರಣ, ತೊಡೆದುಕೊಳ್ಳುವಿಕೆಯ ಪರಿಹಾರದ ನಿಯಮಗವಾಗಿದೆ. ಒಂದು ರೀತಿಯಲ್ಲಿ ನಾವು ಕರ್ಮದಿಂದ ಮುಕ್ತರಾಗುವವರೆಗೂ ಕಣ್ಣಿಗೆ ಕಣ್ಣು ನಿಯಮ ಜಾರಿಯಲ್ಲಿದ್ದೇ ಇರುತ್ತದೆ ಎನ್ನಬಹುದು.

**10. ನಾವು ಜೀವನದಲ್ಲಿ ಅನೇಕ ಸಂದರ್ಭಗಳನ್ನು ಎದುರಿಸಬೇಕಾಗುತ್ತದೆ. ಒಂದು ಸೊಳ್ಳೆಯೊ, ಇನ್ನಾವುದೊ ಕೀಟ ನಮ್ಮನ್ನು ಕಚ್ಚುತ್ತದೆ ಎಂದಿಟ್ಟುಕೊಳ್ಳಿ. ನಾವು ಅದನ್ನು ತಕ್ಷಣ ಕೊಲ್ಲಲು ಪ್ರಯತ್ನಿಸುತ್ತೇವೆ. ಅದು ನಮ್ಮ ಪ್ರತಿಕ್ರಿಯೆ. ಈ ಮೇಲಿನ ಕ್ರಿಯೆ ಕರ್ಮವನ್ನು ಉಂಟುಮಾಡುತ್ತದೆಯೇ?**

ಕರ್ಮದ ನಿಯಮಗಳು ಕೆಲವು ಮಿತಿಗಳಲ್ಲಿ ಕೆಲಸ ಮಾಡುತ್ತವೆಂದು ತಿಳಿಯಲಾಗಿದೆ. ಉದಾಹರಣೆಗೆ, ಒಂದು ಹಾವು ನಿಮ್ಮನ್ನು ಕಚ್ಚಿ ಕೊಲ್ಲಲು ಪ್ರಯತ್ನಿಸುತ್ತಿದೆ ಎಂದುಕೊಳ್ಳೋಣ. ನಿಮಗೆ ನಿಮ್ಮನ್ನು ರಕ್ಷಿಸಿಕೊಳ್ಳುವ ಹಕ್ಕು ಇದ್ದೇ ಇರುತ್ತದೆ. ಅದು ನಿಮ್ಮ ಕರ್ತವ್ಯ ಕೂಡ. ಸೊಳ್ಳೆಯು ನಿಮ್ಮನ್ನು ಕಚ್ಚುತ್ತಿದೆ ಎಂದು ನಿಮಗೆ ತಿಳಿದರೆ ಅದು

ಕಚ್ಚುವುದನ್ನು ನೀವು ತಪ್ಪಿಸಬಹುದು. ಜೀವ

ದೇವರಲ್ಲದೆ ಬೇರೇನೂ ಅಲ್ಲ ಎಂದು ತಿಳಿದಾಗ ನೀವು ಜೀವಹಾನಿ ಮಾಡುವುದಿಲ್ಲ. ಬದಲಿಗೆ

ಜೀವಹಾನಿಯನ್ನು ತಪ್ಪಿಸಲು ಪ್ರಯತ್ನಿಸುತ್ತೀರಿ. ಆದರೆ ಕೆಲವು ಅನಿವಾರ್ಯ ಸಂದರ್ಭಗಳಲ್ಲಿ ನಮ್ಮ

ಬುದ್ಧಿಯು ನಮ್ಮನ್ನು ಕೊಲ್ಲೆಂದು ಹೇಳುತ್ತದೆ. ನಾವು ಹಾಗೆ ಮಾಡದೇ ವಿಧಿಯಿಲ್ಲ. ಅದು

ನಕಾರಾತ್ಮಕ ಕರ್ಮವೊ ಅಲ್ಲವೊ ಎನ್ನುವುದು ನಿರ್ಧರಿತವಾಗುವುದು ನಾವು ಯಾವ ರೀತಿಯ

ಕ್ರಿಯೆಯಲ್ಲಿ ತೊಡಗಿರುವೆವು ಎಂಬುದರ ಮೇಲೆ. ಅದು ಕೊಲೆಯಾಗಿದ್ದರೆ ಖಂಡಿತವಾಗಿಯೂ

ನಕಾರಾತ್ಮಕ ಕರ್ಮವನ್ನು ಉಂಟುಮಾಡುತ್ತದೆ. ಅದೇ ನಮ್ಮ ಆತ್ಮರಕ್ಷಣೆಗಾಗಿ ಮಾಡಿದ್ದರೆ ಆಗ

ನಕಾರಾತ್ಮಕ ಕರ್ಮ ಉಂಟಾಗುವುದಿಲ್ಲ.

11. ಪ್ರಾಣಿಗಳು ಕೂಡ ಕರ್ಮವನ್ನು ಅನುಭವಿಸುತ್ತವೆಯೇ?

ಪ್ರಾಣಿಗಳು ಭಾವಜೀವಿಗಳಾಗಿದ್ದು ಬುದ್ಧಿಮತ್ತೆಯನ್ನು ಹೊಂದಿರುವುದಿಲ್ಲ. ಆದ್ದರಿಂದ ಅವು

ಮುಗ್ಧ ಮಕ್ಕಳಂತೆ. ಅವು ತಮ್ಮ ದೇಹ, ಮನಸ್ಸು ಅಹಂಗಳನ್ನು ಬಳಸುವುದಿಲ್ಲವಾದ್ದರಿಂದ ಕರ್ಮಗಳನ್ನು ಉಂಟುಮಾಡುವುದಿಲ್ಲ. ಆದರೆ ಅವು ಖಂಡಿತವಾಗಿಯೂ ತಮ್ಮ ಪೂರ್ವಜನ್ಮದ ಕರ್ಮಗಳನ್ನು ಕಳೆದುಕೊಳ್ಳುತ್ತವೆ.

**12. ನಾವು ಯಾರಿಗಾದರೂ ಅನುದ್ದಿಶ್ಯವಾಗಿ ನೋವುಂಟು ಮಾಡಿದರೂ ನಕಾರಾತ್ಮಕ ಕರ್ಮವನ್ನು ಅನುಭವಿಸುತ್ತೇವೆಯೇ?**

ನಾವು ಯಾರಿಗಾದರೂ ಅನುದ್ದಿಶ್ಯವಾಗಿ ನೋಯಿಸಿದರೆ ಅದರಿಂದ ಉಂಟಾಗುವ ನಕಾರಾತ್ಮಕ ಕರ್ಮವು ಸಣ್ಣ ಪ್ರಮಾಣದ್ದಾಗಿರುತ್ತದೆ. ಆದರೆ ಪ್ರತಿ ಸಲವೂ ನಾವು ಯಾರಿಗಾದರೂ ನೋವುಂಟು ಮಾಡಿದರೆ ಖಂಡಿತ ನಕಾರಾತ್ಮಕ ಕರ್ಮವು ನಮ್ಮ ಖಾತೆಗೆ ಜಮಾ ಆಗುತ್ತದೆ.

**13. ನಾವು ಪೂರ್ವಜನ್ಮದ ಕರ್ಮವನ್ನು ಕಳೆದುಕೊಳ್ಳಲು ಮತ್ತೆ ಮರುಹುಟ್ಟು ಪಡೆಯಬೇಕು. ಏಕೆ?**

ಸೃಷ್ಟಿಯ ನಿಯಮ ಹೇಗಿದೆಯೆಂದರೆ ನಾವು ಹುಟ್ಟುತ್ತೇವೆ ಮತ್ತು ಸಾಯುತ್ತೇವೆ. ಆ ಕಾರಣ ಕರ್ಮದ ಲೆಕ್ಕ ಚುಕ್ತಾ ಆಗುವುದಿಲ್ಲ. ಈ ಜನ್ಮದಷ್ಟೆ ಅಲ್ಲ ಹಲವು ಜನ್ಮಗಳ ಕರ್ಮಗಳನ್ನು ಹೊತ್ತು ನಾವು ಹುಟ್ಟುತ್ತೇವೆ. ಅದನ್ನು ನೀಗಿಸಿಕೊಳ್ಳಲು ಮರುಹುಟ್ಟು ಪಡೆಯುವುದೊಂದೇ ದಾರಿ. ಇದು ಕರ್ಮದ ನಿಯಮಗಳಿಗೆ ಸರಿಯಾಗಿ ಹೊಂದುತ್ತದೆ. ಕಾರಣ ನಾವು ಹಿಂದಿನ ಕರ್ಮಗಳ ಆಧಾರದ ಮೇಲೆ ಜೀವನದಲ್ಲಿ ಸಂತೋಷಪಡಬಹುದು ಅಥವಾ ದುಃಖ ಪಡಬಹುದು. ನಮ್ಮ ಕೆಟ್ಟ ಕರ್ಮಗಳನ್ನು ತೊಡೆದುಕೊಂಡು ಒಳ್ಳೆಯ ಕ್ರಿಯೆಗಳಿಗೆ ಒಳ್ಳೆಯ ಪ್ರತಿಫಲಗಳನ್ನು ಪಡೆದುಕೊಳ್ಳುತ್ತೇವೆ. ಕರ್ಮದ ನಿಯಮ ಹೀಗೆ ಕೆಲಸ ಮಾಡುತ್ತದೆ.

### 14. ಜೀವನ ಎಂದರೆ ಕರ್ಮದ ಹೊರೆಯನ್ನು ತೊಡುದುಕೊಳ್ಳುವುದು ಅಷ್ಟೆಯೇ?

ಜನಸಾಮಾನ್ಯರ ವಿಷಯದಲ್ಲಿ ಇದು ಸತ್ಯ. ಜೀವನವೆಂದರೆ ನಕಾರಾತ್ಮಕ ಕರ್ಮಗಳನ್ನು ಕಳೆದುಕೊಳ್ಳುವುದು ಎಂದರ್ಥ. ನಾವು ನಮ್ಮ ಕರ್ಮಗಳನ್ನು ತೊಡೆದುಕೊಳ್ಳಲು ಅಥವಾ ಪರಿಹರಿಸಿಕೊಳ್ಳಲು ಹುಟ್ಟಿ ಸಾಯಬೇಕು. ಆದರೆ ಅರಿವನ್ನು ಪಡೆದುಕೊಂಡವರಿಗೆ ಜೀವನವೆಂದರೆ ಕರ್ಮವಷ್ಟೇ ಅಲ್ಲ. ಅದು ಕರ್ಮವನ್ನು ಉಂಟುಮಾಡುವ ದೇಹ, ಮನಸ್ಸು ಅಹಂಗಳ ಸಂಕೀರ್ಣವಲ್ಲ ಎಂದು ಅರಿಯುದಾಗಿದೆ. ನಾವು ಒಂದು ದಿವ್ಯಶಕ್ತಿ. ನಾವು ಇದನ್ನು ಅರಿತರೆ ಕರ್ಮದಿಂದ ಮುಕ್ತರಾಗುತ್ತೇವೆ.

**ಆಡಿದ ಪ್ರತಿಯೊಂದು ಮಾತು, ಪ್ರತಿಯೊಂದು ಕ್ರಿಯೆ,**
**ಅದು ಒಬ್ಬರೇ ಮಾಡಿದ್ದಾಗಲಿ ಅಥವಾ ಗುಂಪಿನಲ್ಲಿ ಮಾಡಿದ್ದಾಗಲಿ**
**ಅದು ನಮ್ಮದಾಗಿರುತ್ತದೆ.**
**ಅದರ ಫಲವನ್ನು ಈ ಜನ್ಮದಲ್ಲಿ ಇಲ್ಲ ಮುಂದಿನ ಜನ್ಮದಲ್ಲಿ ಪಡೆಯುತ್ತೇವೆ.**

# ಕವಿತೆ

ಕರ್ಮದ ನಿಯಮ ಬಹಳ ಆಳವಾದದ್ದು
ನಾವು ಬಿತ್ತಿದಂತೆ ಬೆಳೆ
ಕೆಟ್ಟ ಕಾರ್ಯಗಳು ಅಳು ಬರಿಸುತ್ತವೆ
ಒಳ್ಳೆಯವು ನಮ್ಮ ಬಳಿಯೇ ಉಳಿಯುತ್ತವೆ.

ಅದು ಕ್ರಿಯೆ, ಅದು ಪ್ರತಿಕ್ರಿಯೆ
ನಾವು ಕೊಟ್ಟಂತೆ ಪಡೆಯುತ್ತೇವೆ
ಹೀಗೆ ಹೋದದ್ದು ಹಾಗೆ ಹಿಂದಿರುಗುತ್ತದೆ.
ಇದು ನಮ್ಮನ್ನು ನೆಲದ ಮೇಲೆ ಕಾಲೂರಿ ನಿಲ್ಲಿಸುತ್ತದೆ.

ಕರ್ಮದ ನಿಯಮಗಳು ಧರ್ಮದಿಂದ ಹುಟ್ಟಿಕೊಳ್ಳುತ್ತವೆ.
ಕರ್ಮದ ನಿಯಮಗಳು ಲೋಕನಿಯಮಗಳು ಕೂಡ
ನಮ್ಮೆಲ್ಲ ಕ್ರಿಯೆಗಳನ್ನೂ ಅದು ಗಮನಿಸುತ್ತಿರುತ್ತದೆ.
ಅದಕ್ಕೆ ತಕ್ಕ ಪ್ರತಿಕ್ರಿಯೆ ಇರುವಂತೆ ನೋಡಿಕೊಳ್ಳುತ್ತದೆ.

ನಾವು ಟೊಮ್ಯಾಟೋಗಳನ್ನು ಬಿತ್ತಿ ಮಾವನ್ನು ಪಡೆಯಲು ಆಗುವುದಿಲ್ಲ.
ನಾವು ಕಳ್ಳಿ ಗಿಡಗಳನ್ನು ನೆಟ್ಟು ಗುಲಾಬಿಯನ್ನು ಪಡೆಯಲಾಗುವುದಿಲ್ಲ.
ನಾವು ಒಳ್ಳೆಯದು ಮಾಡಿದರೆ ಒಳ್ಳೆಯ ಪ್ರತಿಫಲ
ಕೆಟ್ಟದ್ದಕ್ಕೆ ಕೆಟ್ಟ ಪ್ರತಿಫಲ.

ಕಾರ್ಯಕಾರಣದ ನಿಯಮವೆಂದರೆ ಏನು?
ಸಮತೂಕವನ್ನು ಗಳಿಸುವ ನಿಯಮ ಸಮರ್ಪಕವಾದದ್ದು.
ನಮ್ಮ ಎಲ್ಲಾ ಕ್ರಿಯೆಗಳನ್ನೂ ದಾಖಲಿಸಲಾಗುತ್ತದೆ.
ಅದು ಒಳಿತಿರಲಿ, ಕೆಟ್ಟದಿರಲಿ ಅದಕ್ಕೆ ಪ್ರತಿಫಲವನ್ನು ಅನುಭವಿಸಲೇಬೇಕು.

ಈ ನಿಯಮ ಹೇಗೆ ಕೆಲಸ ಮಾಡುತ್ತದೆ. ಅದು ನಮಗೆ ತಿಳಿದಿಲ್ಲ.
ಎಲ್ಲಾ ಆ ಸೃಷ್ಟಿಕರ್ತನ ಆಟ.
ಅದು ನಮ್ಮ ಆಗು ಹೋಗುಗಳನ್ನು ನಿಯಂತ್ರಿಸುತ್ತದೆ.
ಸಾವಿನೊಂದಿಗೆ ಆಟ ಮುಗಿಯುತ್ತದೆಯೇ? ಇಲ್ಲ.

ನಮ್ಮ ದೇಹ ಸಾಯಬಹುದು. ಕರ್ಮ ನಿಲ್ಲುತ್ತದೆ.
ನಾವು ಕರ್ಮದಿಂದ ತಪ್ಪಿಸಿಕೊಳ್ಳುತ್ತೇವೆ ಎಂಬುದು ಸುಳ್ಳು.
ನಮ್ಮ ಮನಸ್ಸು ಮತ್ತೆ ಹುಟ್ಟಿ ಬದುಕುತ್ತದೆ, ಸಾಯುತ್ತದೆ.
ನಾವು ದುಃಖ ನೋವುಗಳಲ್ಲಿ ಮುಳುಗಿರುತ್ತೇವೆ.

ಸಾವು ಅಂತಿಮವಲ್ಲ. ಅದೊಂದು ತಿರುವು ಅಷ್ಟೆ.
ನಮ್ಮ ಕ್ರಿಯೆಗಳನ್ನು ನಾವು ಹಿಂಪಡೆಯಬೇಕು.
ನಮ್ಮ ಕ್ರಿಯೆಗಳಿಗೆ ತಕ್ಕ ಪ್ರತಿಫಲವಿರುತ್ತದೆ.
ಉಳಿದದ್ದು ನಮ್ಮ ಭವಿಷ್ಯವನ್ನು ನಿರ್ಧರಿಸುತ್ತದೆ.

ನಮ್ಮ ಕ್ರಿಯೆಗಳಿಗೆ ನಮ್ಮ ದೇಹ ಜವಾಬುದಾರನೇ?
ಇಲ್ಲ. ನಮ್ಮ ಮನಸ್ಸು ನಮ್ಮ ಕ್ರಿಯೆಗಳನ್ನು ನಿಯಂತ್ರಿಸುತ್ತದೆ.
ಕರ್ಮದ ನಿಯಮ ನಮ್ಮ ಮನಸ್ಸಿಗೆ ಸಂಬಂಧಪಟ್ಟಿದ್ದು.
ನಮ್ಮ ಮನಸ್ಸು ಮತ್ತು ಅಹಂಗಳಿಂದಾಗಿ ನಾವು ದುಃಖ, ನೋವುಗಳನ್ನು ಅನುಭವಿಸುತ್ತೇವೆ.

ಅದು ಒಳಿತು-ಕೆಡಕುಗಳನ್ನು ಹೊತ್ತಿರುತ್ತದೆ.
ನಾವು ಹೋದ ಕೂಡಲೆ ಲೆಕ್ಕ ಚುಕ್ತ ಆಗುವುದಿಲ್ಲ.
ಲೆಕ್ಕ ಜನ್ಮಜನ್ಮಕ್ಕೂ ಮುಂದುವರೆಯುತ್ತಲೇ ಇರುತ್ತದೆ.
ಈ ಕರ್ಮದ ಲೆಕ್ಕ ನಮ್ಮ ಮರು ಹುಟ್ಟನ್ನು ನಿರ್ಧರಿಸುತ್ತದೆ.

ನಾವು ಮತ್ತೆ ಮತ್ತೆ ದುಃಖ ನೋವುಗಳನ್ನು ಅನುಭವಿಸಬೇಕೆ?
ಈ ನೋವಿನಿಂದ ನಮಗೆ ಎಂದು ಮುಕ್ತಿ?
ಅದು ನಾವು ಸತ್ಯವನ್ನು ಅರಿತಾಗ ಮಾತ್ರ.
ಆಳಕ್ಕೆ ಇಳಿದು ಬೇರಿನ ಮೂಲಕ್ಕೆ ಹೋಗಬೇಕು.

ನಮ್ಮ ಜೀವನದ ಉದ್ದೇಶವೇನು?
ಕೇವಲ ಹುಟ್ಟು ಸಾವು, ಅಷ್ಟೇ ಏನು?
ನಾವು ಎಲ್ಲಿಂದ ಬಂದೆವು? ಎಲ್ಲಿಗೆ ಹೋಗುತ್ತೇವೆ?
ನಾವು ಸತ್ಯವನ್ನು ಅರಿಯುವವರೆಗೆ ನಿಯಮಗಳ ಹಿಡಿತದಲ್ಲಿ.

ನಾವು ದೇಹವೆ? ನಾವು ಮನಸ್ಸೆ?
ನಾವು ಅಹಂ? ಸತ್ಯವನ್ನು ಅರಿಯಬೇಕು.
ಅಜ್ಞಾನವನ್ನು ತೊಡೆದ
ನಾವು ಭಿನ್ನ ರೀತಿಯ ಶಕ್ತಿ.

ಕರ್ಮದ ನಿಯಮದಿಂದ ಜಗತ್ತು ನಡೆಯುತ್ತದೆ.
ನಿಯಮ ನಾವು ನೆಲದ ಮೇಲೆ ಕಾಲೂರಿ ನಿಲ್ಲುವಂತೆ ಮಾಡುತ್ತದೆ.
ಇದು ನಮ್ಮೆಲ್ಲರಿಗೂ ಅನ್ವಯಿಸುತ್ತದೆ.
ಇದನ್ನು ತಿಳಿದವರನ್ನು ಹೊರತುಪಡಿಸಿ.

ತಾವು ದೇಹ ಮತ್ತು ಮನಸ್ಸುಗಳಲ್ಲವೆಂದು ಯಾರು
ಅರಿತಿರುತ್ತಾರೋ ಅವರು ಕರ್ಮದಿಂದ ಮುಕ್ತರಾಗುತ್ತಾರೆ.
ಅವರಿಗೆ ಕರ್ಮ ಪ್ರತಿಫಲಗಳು ಇರುವುದಿಲ್ಲ.

ಒಳ್ಳೆಯವರಿಗೆ ಕೆಟ್ಟದಾದಾಗ ಎದೆಗುಂದಬೇಡಿ
ಇದು ಕರ್ಮವು ಕ್ರಿಯಾಶೀಲವಾಗಿರುವುದು ಎಂದರ್ಥ.
ನೀವು ಉತ್ತಮ ಬೀಜವನ್ನು ಬಿತ್ತಿದರೆ ಒಳ್ಳೆಯ ಕೃತ್ಯಗಳನ್ನು ಮಾಡಿದರೆ
ಒಳ್ಳೆಯ ಪ್ರತಿಫಲವನ್ನು ಪಡೆಯುತ್ತೀರಿ.

ನೀವು ಕರ್ಮವನ್ನು ಮೀರಬೇಕಾದರೆ
ನೀವು ಈ ಜಗತ್ತು ಒಂದು ನಾಟಕವೆಂದು ತಿಳಿಯಬೇಕು.
ನೀವು ನಿಮ್ಮ ದೇಹ ಮತ್ತು ಮನಸ್ಸು ಅಲ್ಲ ಎಂಬುದನ್ನು ತಿಳಿಯಬೇಕು.
ನೀವು ಸುಖ, ಸಂತೋಷ ಮತ್ತು ಆನಂದಗಳನ್ನು ಅನುಭವಿಸುತ್ತೀರಿ.

**- ಎಐಆರ್**

# ಲೇಖಕರ ಕುರಿತು

ಲೇಖಕ ಎಬಿರ್- ಎಂದರೆ ರವಿ ಎಂಬ ಆತ್ಮ. ಸತ್ಯವನ್ನು ಅರಿತು ಇತರರಿಗೆ ಅದನ್ನು ಅರಿಯಲು ಸಹಾಯ ಮಾಡುವುದು ಇವರ ಜೀವನದ ಮುಖ್ಯ ಗುರಿ.

ರವಿಯವರು ಬೆಂಗಳೂರಿನಲ್ಲಿ 15 ಅಕ್ಟೋಬರ್, 1966ರಲ್ಲಿ ಜನಿಸಿದರು. ಅವರ ಮೂಲ ಹೆಸರು ರವಿ ವಿ ಮೇಲ್ವಾನಿ. ಬಹಳ ಚಿಕ್ಕ ವಯಸ್ಸಿನಲ್ಲಿಯೇ ವ್ಯವಹಾರದಲ್ಲಿ ಯಶಸ್ಸನ್ನು ಪಡೆದು ಕಿಡ್ಸ್ ಕೆಂಪ್, ಬಿಗ್ ಕಿಡ್ಸ್ ಕೆಂಪ್ ಮತ್ತು ಕೆಂಪ್ಸ್ ಫೋರ್ಟ್ ನಂತಹ ಮಳಿಗೆಗಳನ್ನು ತೆರೆದು ಭಾರತದ ಚಿಲ್ಲರೆ ವಹಿವಾಟಿನಲ್ಲಿ ಒಂದು ಕ್ರಾಂತಿಯನ್ನೇ ಮಾಡಿದರು.

ಸಾಕಷ್ಟು ಶ್ರೀಮಂತಿಕೆ ಮತ್ತು ಆಸ್ತಿಗಳನ್ನು ಗಳಿಸಿದರು. ಆದರೆ, ಬದುಕು ಕೇವಲ ಹಣ, ಆಸ್ತಿಗಳಷ್ಟೆ ಅಲ್ಲ ಎಂದು ಅವರಿಗೆ ಕ್ರಮೇಣ ಅರಿವಾಗತೊಡಗಿತು. 40ನೇ ವಯಸ್ಸಿಗೆ ತಮ್ಮ ವ್ಯವಹಾರಗಳನ್ನು ನಿಲ್ಲಿಸಿ, ತಮ್ಮ ಬದುಕನ್ನು ಬೇರೆ ರೀತಿಯಲ್ಲಿ ರೂಪಿಸಿಕೊಳ್ಳತೊಡಗಿದರು. 'ಜೀವನ ಮೌಲ್ಯವನ್ನು ಅರಿತು ನಡೆ, ಸಂತೋಷಪಡು ಮತ್ತು ಇತರರ ಬದುಕಿಗೆ ನೆರವಾಗು' ಎಂಬ ತತ್ವಗಳನ್ನು ಪಾಲಿಸತೊಡಗಿದರು. ಇವರು ತಮ್ಮನ್ನು ಆಧ್ಯಾತ್ಮ ಮತ್ತು ಮಾನವೀಯ ಹಾಗೂ ಪ್ರೇರಣಾತ್ಮಕ

ಕಾರ್ಯಗಳಲ್ಲಿ ತೊಡಗಿಸಿಕೊಂಡರು. ಇವರ ಮುಖ್ಯ ಧ್ಯೇಯ "ಇತರರಿಗೆ ಸಹಾಯ ಮಾಡು" ಎನ್ನುವುದಾಗಿದೆ.

ಇವರ ಮಾನವೀಯ ಚಟುವಟಿಕೆಗಳಿಂದಾಗಿ ಬಡಜನರಿಗೆ ಆರೋಗ್ಯ ಸೇವೆಯನ್ನು ಉಚಿತವಾಗಿ ನೀಡುವ ಸಲುವಾಗಿ ಆರ್.ವಿ.ಎಂ ಆಸ್ಪತ್ರೆಯನ್ನು 1998ರಲ್ಲಿ ಸ್ಥಾಪಿಸಿದರು. ಆಸ್ಪತ್ರೆಯು 250 ಹಾಸಿಗೆಗಳನ್ನು ಹೊಂದಿದ್ದು ಕ್ಯಾಶ್ ಕೌಂಟರ್ ಇರುವುದಿಲ್ಲ. ಶೀಘ್ರವೇ ಅದು 1000 ಹಾಸಿಗೆಗಳ ಸುಸಜ್ಜಿತ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯಾಗಿ ಅಭಿವೃದ್ಧಿ ಹೊಂದಲಿದೆ. ಸುಮಾರು 700ಕ್ಕೂ ಹೆಚ್ಚು ನಿರಾಶ್ರಿತರು ಈ ಆಸ್ಪತ್ರೆಯಲ್ಲಿ ಉಚಿತ ಊಟ, ಸೂರು ಮತ್ತು ಆರೋಗ್ಯ ಸೇವೆಗಳನ್ನು ಪಡೆದುಕೊಳ್ಳುತ್ತಿದ್ದಾರೆ.

ಆರ್.ವಿ.ಎಂ. ಪ್ರೇರಣಾತ್ಮಕ ಶಾಲೆಯು ತನ್ನ ಪ್ರೇರಣಾತ್ಮಕ ಭಾಷಣ, ವಿಡಿಯೋ, ಪುಸ್ತಕಗಳು ಮತ್ತು ಇನ್ನಿತರ ಚಟುವಟಿಕೆಗಳ ಮೂಲಕ ಅನೇಕ ಜನರ ಬದುಕನ್ನೇ ಬದಲಿಸಿದೆ.

ಆರ್.ವಿ.ಎಂ. ರವರು 1995 ರಲ್ಲಿ ಬೆಂಗಳೂರಿನಲ್ಲಿ ಶಿವನ ದೇವಾಲಯವನ್ನು ಕಟ್ಟಿಸಿದರು. ಇದು ಶಿವೋಹಂ ಶಿವಾ ದೇವಸ್ಥಾನವೆಂದು ಹೆಸರುವಾಸಿಯಾಗಿದೆ. ಅವರು ಶಿವನ ಪರಮ ಭಕ್ತರಾಗಿದ್ದು, ಹಲವಾರು ಸಾವಿರ ಭಜನೆಗಳನ್ನು ರಚಿಸಿದ್ದಾರೆ. ಧರ್ಮವು ಆಧ್ಯಾತ್ಮದ ಬಾಲವನವಷ್ಟೇ ಎಂದು ಅವರು ನಂಬಿದ್ದಾರೆ. ನಾವು ದೇವರನ್ನು ಅರಿಯಬೇಕಾದರೆ ಧರ್ಮವನ್ನು ಮೀರಿ ಹೋಗಬೇಕೆಂಬುದು

ಅವರ ನಂಬಿಕೆಯಾಗಿದೆ.

ಒಂದು ದಿನ ಅವರ ಗುರುಗಳು ಅವರನ್ನು ಆತ್ಮವಿಮರ್ಶೆಗೆ ಹಚ್ಚಿದರು. ಈ ಜೀವನದ ಉದ್ದೇಶವೇನು? ಬದುಕು ಕೇವಲ ಆಸೆ, ಕಾಮನೆಗಳನ್ನು ತಣಿಸಿಕೊಳ್ಳುವುದಕ್ಕಷ್ಟೇ ಸೀಮಿತವೆ? ಸಾವಿನ ನಂತರ ಏನು? ನಾವು ಮರುಹುಟ್ಟು ಪಡೆಯುತ್ತೇವೆಯೆ? ದೇವರು ಎಲ್ಲಿದ್ದಾನೆ? ಇಂತಹ ಅನೇಕ ಪ್ರಶ್ನೆಗಳಿಗೆ ಉತ್ತರವನ್ನರಸಿ ಅವರು ಸತ್ಯವನ್ನು ಅರಸಲು ತೊಡಗಿದರು. ಅವರು ತಮ್ಮ ಲೌಕಿಕ ಯಶಸ್ಸನ್ನು ಬಿಟ್ಟುಕೊಟ್ಟು ಜ್ಞಾನೋದಯದ ಹಾದಿಯಲ್ಲಿ ನಡೆದರು.

ಹಲವಾರು ವರ್ಷಗಳ ಕಾಲ ಏಕಾಂತದಲ್ಲಿ ಪರ್ವತಗಳಲ್ಲಿ ಸತ್ಯವನ್ನರಸುತ್ತಾ ಕಳೆದರು. ನಾವು ಈ ದೇಹವಲ್ಲ ಎಂಬುದು ಅವರಿಗೆ ತಿಳಿಯಿತು. ನಾವು ಅದರ ಆತ್ಮ ಎಂಬ ಸಾಕ್ಷಾತ್ಕಾರವಾಯಿತು. ಅವರು ರವಿ ಎನ್ನುವ ಹೆಸರನ್ನು ಎರಡನೆಯ ಬಾರಿಗೆ ಎಐಆರ್-ರವಿ ಎಂಬ ಆತ್ಮ ಎಂದು ಬದಲಿಸಿಕೊಂಡರು. ತಮ್ಮನ್ನು ಸಂಪೂರ್ಣವಾಗಿ ದೇವರಿಗೆ ಸಮರ್ಪಿಸಿಕೊಂಡು ಆತನ ಶಕ್ತಿಗೆ ತಲೆಬಾಗಿದರು. ಇದು ಅವರಿಗೆ ಸತ್ಯವನ್ನು ಅರಿಯಲು ಸಹಾಯ ಮಾಡಿತು. ಅವರು ಜನರಿಗೆ ಸತ್ಯವನ್ನು ಅರಿಯುವ ನಿಟ್ಟಿನಲ್ಲಿ ಸಹಾಯ ಮಾಡುವುದಾಗಿ ನಿಶ್ಚಯಿಸಿದರು.

# ಎಐಆರ್ ರವರು ಬರೆದಿರುವ ಪುಸ್ತಕಗಳು

## 1. ತಲಾಶ್ - ಜೀವನದ ನಿಜವಾದ ಅರ್ಥವಂತಿಕೆಗಾಗಿ ಹುಡುಕಾಟ. ನಿಮ್ಮ ನಿಜ ರೂಪವನ್ನು ಕಂಡುಕೊಳ್ಳಿರಿ.

ತಲಾಶ್ ಎಂದರೆ ಹುಡುಕಾಟ ಎಂದರ್ಥ. ಇದು ಎಐಆರ್ ಅವರ ಸತ್ಯದ ಅರಿವಿನ ವೈಯಕ್ತಿಕ ಹುಡುಕಾಟದ ಕಥೆಯಾಗಿದೆ. ನಾವು ದೇಹ, ಮನಸ್ಸುಗಳಲ್ಲ. ನಾವು ಒಂದು ಶಕ್ತಿ ಎಂಬುದು ಅವರ ತಿಳಿವಳಿಕೆ. ಈ ದೈವಿಕ ಶಕ್ತಿಯನ್ನು ಆತ್ಮ ಎನ್ನುತ್ತಾರೆ. ಈ ಸತ್ಯದ ಹುಡುಕಾಟ ಎಐಆರ್ ಅವರ ಬದುಕನ್ನೇ ಬದಲಿಸಿಬಿಟ್ಟಿತು. ನೀವೂ ಕೂಡ ಸತ್ಯವನ್ನರಿತು ಮುಕ್ತಿಗೊಳಿಸಿಕೊಳ್ಳಬೇಕಾದರೆ ಈ ಪುಸ್ತವನ್ನು ಓದಲೇಬೇಕು.




## 2. ಸಂತೋಷದ ಮೂರು ಶಿಖರಗಳು:




ಇದೊಂದು ಸರಳ ಪುಸ್ತಕವಾಗಿದ್ದು, ಇದರಲ್ಲಿ ಮಾನವೀಯತೆಯ ಬಗ್ಗೆ ಹುಡುಕಾಟವಿದೆ. ಎಲ್ಲರೂ ಸಂತೋಷವನ್ನು ಬಯಸುತ್ತಾರೆ. ಆದರೆ ಎಲ್ಲರೂ ಸಂತೋಷದಿಂದಿರಲು ಸಾಧ್ಯವೆ? ಇಲ್ಲ. ಕಾರಣ, ನಾವು ಯಶಸ್ಸೆಂಬ ಸಂತೋಷದ ಮೊದಲ ಶಿಖರದಲ್ಲೇ ಉಳಿದು

ಬಿಟ್ಟಿದ್ದೇವೆ. ಕೇವಲ ಶೇಖಡಾ 20% ರಷ್ಟು ಜನರು ಮಾತ್ರ ಮುಂದಿನ ಶಿಖರವನ್ನೇರಬಲ್ಲರು. ಅದೇಂದರೆ, ತೃಪ್ತಿ. ಆದರೆ ಅದನ್ನೂ ಮೀರಿ ಮತ್ತೊಂದು ಮೂರನೆಯ ಶಿಖರವಿದೆ. ಅದು ದುಃಖ ನೋವುಗಳ ಬಂಧನದಿಂದ ನಿಮ್ಮನ್ನು ಮುಕ್ತಗೊಳಿಸಿ ನಿಮ್ಮ ಬದುಕು ಸದಾ ಆನಂದಮಯವಾಗುವಂತೆ ಮಾಡುತ್ತದೆ.

**3. ನನ್ನನ್ನು ರೂಪಿಸಿದ ನನ್ನ ಗುರು, ನನ್ನ ದೇವರು.**




ಈ ಪುಸ್ತಕದಲ್ಲಿ ಎಐಆರ್ ಅವರು ತಮ್ಮ ಗುರುಗಳ ಜೊತೆಗಿನ ಅನುಭವಗಳನ್ನು ಹಂಚಿಕೊಂಡಿದ್ದಾರೆ. ಅದರೊಂದಿಗೆ ತಮ್ಮ ದೈವದ ಬಗ್ಗೆಯೂ ಬರೆದಿದ್ದಾರೆ. ನಮಗೆಲ್ಲರಿಗೂ ಮಾರ್ಗದರ್ಶಿಯೊಬ್ಬನ ಅಗತ್ಯವಿದೆ, ಗುರು ನಮಗೆ ನಮ್ಮ ಜೀವನದ ಬಗ್ಗೆ ಅರಿವನ್ನು ಪಡೆದುಕೊಳ್ಳಲು ಸಹಾಯ ಮಾಡುತ್ತಾನೆ. ಈ ಪುಸ್ತಕವು ನಿಮಗೆ ಉತ್ತಮ ಗುರುವನ್ನು ಪಡೆಕೊಳ್ಳಲು ಪ್ರೇರಣೆಯಾಗಿ ಕೆಲಸ ಮಾಡುತ್ತದೆ.

**4. ನಾನು ಎಂದಿಗೂ ಸಾಯುವುದಿಲ್ಲ. ಸಾವು ಕೊನೆಯಲ್ಲ.**




ತಮ್ಮ ಜೀವನಯಾನದಲ್ಲಿ ಎಐಆರ್ ರವರು ಅನೇಕ ಸತ್ಯಗಳನ್ನು ಕಂಡುಕೊಂಡರು. ಅಂತಹ ಒಂದು ಸತ್ಯವೆಂದರೆ: ತನಗೆ ಎಂದಿಗೂ ಸಾವಿಲ್ಲ ಎಂಬುದು. ದೇಹ ಸಾಯಬಹುದು. ಆದರೆ, ಅದರೊಳಗಿನ ಜೀವಕ್ಕೆ ಸಾವಿಲ್ಲ. ನಾವು ನಮ್ಮ ದೇಹಗಳಲ್ಲ.

ಅದನ್ನು ಕೇವಲ ಧರಿಸುತ್ತೇವಷ್ಟೇ. ಸಾವು ಕೊನೆಯಲ್ಲ. ಅದೊಂದು ತಿರುವು ಮಾತ್ರ. ಈ ಪುಸ್ತಕವು ಸಾವಿನ ಬಗ್ಗೆ ಸತ್ಯವನ್ನು ತಿಳಿಸುತ್ತದೆ.

**5. ಸಾವು ಕೊನೆಯಲ್ಲ. ಅದು ಮೋಕ್ಷ.**




ಈ ಸರಣಿಯ ಎರಡನೆಯ ಪುಸ್ತಕವಾದ ಸಾವು ಕೊನೆಯಲ್ಲ- ಅದು ಮೋಕ್ಷ ಪುಸ್ತಕವು ಕಠೋಪನಿಷತ್ತಿನ ತಿರುಳನ್ನು ಕಟ್ಟಿಕೊಡುತ್ತದೆ. ಅದು ಸಾವಿನ ನಂತರ ಏನಾಗುತ್ತದೆಂಬುದನ್ನು ತಿಳಿಸಿಕೊಡುತ್ತದೆ. ನಾವು ಈ ದೇಹ ಮತ್ತು ಮನಸ್ಸುಗಳು ನಮ್ಮವು ಎಂದುಕೊಂಡರೆ ನಾವು ಮತ್ತೆ ಜನ್ಮತಳೆಯುತ್ತೇವೆ. ಆದರೆ ನಾವು ದೇಹ ಮನಸ್ಸುಗಳಲ್ಲ, ಜೀವ ನೀಡುವ ಪ್ರಾಣಶಕ್ತಿ ಎಂದು ತಿಳಿದರೆ, ನಾವು ಮುಕ್ತಿ ಪಡೆದು ಸುಖ-ಶಾಂತಿಗಳನ್ನು ಅನುಭವಿಸುತ್ತೇವೆ.

**6. ನಾನು ನಾನಲ್ಲ. ಹಾಗಿದ್ದರೆ ನಾನು ಯಾರು?**




ನಾನು ನಾನಲ್ಲ. ಹಾಗಿದ್ದರೆ ನಾನು ಯಾರು? ಎಐಆರ್ ರವರ ಈ ಹೊತ್ತಗೆಯು ಬಹಳ ಆಸಕ್ತಿದಾಯಕವಾಗಿದ್ದು ನಾವು ಯಾರೆಂದು ತಿಳಿಯುತ್ತೇವೆಯೋ ಅದು ನಾವಲ್ಲ ಎಂಬ ಅರಿವನ್ನು ಮೂಡಿಸುತ್ತದೆ. ನಾವು ಮನೆಯನ್ನು ಹೊಂದಿದ್ದೇವೆ. ಆದರೆ, ನಾವೇ ಆ ಮನೆಯಲ್ಲ. ನಮ್ಮ ಬಳಿ ಕಾರ್ ಇದೆ. ಆದರೆ, ಕಾರೇ

ನಾವಲ್ಲ. ಇದೇ ರೀತಿ ನಮ್ಮ ಬಳಿ ದೇಹವಿದೆ. ಆದರೆ ಆ ದೇಹವೇ ನಾವಲ್ಲ. ನಮಗೆ ಮನಸ್ಸು ಇದೆ. ಆದರೆ, ಆ ಮನಸ್ಸೇ ನಾವಲ್ಲ. ಹಾಗಿದ್ದರೆ ನಾವು ಯಾರು? ಈ ಸತ್ಯವನ್ನು ತಿಳಿಯಲು ಈ ಪುಸ್ತಕವು ಸಹಾಯಕ.




**7. ಅಯೋಗ್ಯ ಮನಸ್ಸು**

ಮನಸ್ಸನ್ನು ಅಯೋಗ್ಯನೆಂದು ಕರೆದರೆ ನಿಮಗೆ ಅದನ್ನು ನಂಬಲಾದೀತೆ? ಮನಸ್ಸು ಎಲ್ಲದರ ಅಧಿಪತಿ ಎಂಬುದು ನಿಮ್ಮ ಸಾಮಾನ್ಯ ತಿಳಿವಳಿಕೆ. ಆದರೆ ಹೀಗೆ ಮಾಡಿ ನೋಡಿ- ಒಂದು ಗಂಟೆಯ ಕಾಲ ಏನನ್ನೂ ಮಾಡದೇ ಸುಮ್ಮನೇ ಕುಳಿತುಕೊಳ್ಳಿ. ನಿಮ್ಮ ಮನಸ್ಸನ್ನು ಕಾಣಲು ಪ್ರಯತ್ನಿಸಿ. ಅದು ಎಲ್ಲಿದೆ? ಆದರೆ, ಮನಸ್ಸೆಂಬುದು ಇಲ್ಲವೆಂದು ಕಂಡುಕೊಳ್ಳುತ್ತೀರಿ. ಮನಸ್ಸೆಂಬುದು ನಮ್ಮ ಶತ್ರು ಎಂಬ ಅಂಶವನ್ನು ಈ ಅದ್ಭುತ ಪುಸ್ತಕದ ಮೂಲಕ ಎಐಆರ್ ನಮಗೆ ಮನಗಾಣಿಸುತ್ತಾರೆ. ಮನಸ್ಸಿನ ಕಾರಣದಿಂದಾಗಿ ನಾವು ದುಃಖ ನೋವುಗಳನ್ನು ಅನುಭವಿಸುತ್ತೇವೆ. ಈ ಅಯೋಗ್ಯ ಮನಸ್ಸನು ಹುಡುಕಿ ಕೊಲ್ಲಬೇಕು. ಅದನ್ನು ಹೇಗೆ ಕೊಲ್ಲುವಿರಿ? ಈ ಪುಸ್ತಕವನ್ನು ಓದಿ ತಿಳಿಯಿರಿ.




8. ಅಲೌಕಿಕ ನಾಟಕ

ಜೀವನದಲ್ಲಿ ನಡೆಯುತ್ತಿರುವುದೆಲ್ಲ ನಿಜವೆಂದು ಈ ಪುಸ್ತಕ

ತಿಳಿಸುತ್ತದೆ. ಇದು ಕೇವಲ ನಾಟಕ ಅಷ್ಟೆ. ಈ ಜಗತ್ತು ಒಂದು ಬೃಹತ್ ರಂಗಮಂಚ. ನಾವು ನಾಟಕದಲ್ಲಿ ಬಂದುಹೋಗುವ ಪಾತ್ರಗಳನ್ನು ವಹಿಸುವ ನಟರು ಮಾತ್ರ. ನಾವು ಸತ್ತರೆ ಅಳುವ ಅವಷ್ಯಕತೆ ಇಲ್ಲ. ಸತ್ಯವನ್ನು ಅರಿತರೆ ನಾವು ಈ ಜೀವನವೆಂಬ ನಾಟಕವನ್ನು ವೀಕ್ಷಿಸಿ ಆನಂದಿಸಬಹುದು ಎಂದು ಈ ಪುಸ್ತಕ ತಿಳಿಸುತ್ತದೆ.

**9. ದೇವರು ಯಾರು? ಏನು? ಎಲ್ಲಿದ್ದಾನೆ?**




ಇವು ಬಹಳ ಸರಳ ಪ್ರಶ್ನೆಗಳಂತೆ ತೋರಬಹುದು. ಆದರೆ, ಇವುಗಳಿಗೆ ಸಮರ್ಪಕವಾದ ಉತ್ತರ ಯಾರ ಬಳಿಯೂ ಇಲ್ಲ. ದೇವರು ಇದ್ದಾನೆಂದು ನಮ್ಮೆಲ್ಲರಿಗೆ ತಿಳಿದಿದೆ. ನಮ್ಮ ನಮ್ಮ ಧರ್ಮಗಳ ಪ್ರಕಾರ ನಾವು ದೇವರನ್ನು ಪೂಜಿಸುತ್ತೇವೆ. ಆದರೆ, ದೇವರ ಬಗೆಗಿನ ಸತ್ಯವೇನು? ಯಾರಾದರೂ ದೇವರನ್ನು ಕಂಡಿದ್ದಾರೆಯೇ? ದೇವರು ಎಲ್ಲಿದ್ದಾನೆ? ಈ ಸರಳ ಪುಸ್ತಕವು ನಿಮಗೆ ಈ ಬಗ್ಗೆ ಹಲವು ಉತ್ತರಗಳನ್ನು ನೀಡುವ ಮೂಲಕ ನಿಮ್ಮ ವಿಚಾರ, ಗ್ರಹಿಕೆಗಳನ್ನು ಬದಲಿಸುತ್ತದೆ. ಇದು ಸರ್ವಶಕ್ತನಾದ ದೇವರನ್ನು ನಿಮ್ಮ ಸಮೀಪ ತಂದು ನೀವು ದೇವರನ್ನು ಕಾಣುವಂತೆ ಮಾಡುತ್ತದೆ.

**10. ಕರ್ಮದ ಬಗ್ಗೆ ಸಂಪೂರ್ಣ ತಿಳಿವಳಿಕೆ: ನೀವು ಏನನ್ನು ಕೊಡುವಿರೋ ಅದನ್ನೇ**

ಪ್ರತಿಯಾಗಿ ಪಡೆಯುತ್ತೀರಿ. ಇದು ಕರ್ಮದ ನಿಯಮ.

ಶೀಘ್ರದಲ್ಲೇ ನಿರೀಕ್ಷಿಸಿ.

**11. ನೀವು ಯಾರು? ಏಕೆ ಇಲ್ಲಿದ್ದೀರಿ?**

**12. ನಾಲ್ಕನೆಯ ಅಂಶ - ಅದು ಸಾಧ್ಯವಾಗುವುದು ಹೇಗೆ?**

**13. ಸಂತೋಷವನ್ನು ಗಳಿಸಿ. ನಿಮ್ಮ ನಿನ್ನೆ ನಾಳೆಗಳಲ್ಲಿ ದುಃಖ ನೋವುಗಳನ್ನು ಅನುಭವಿಸದಿರಿ.**

|| ಓಂ ನಮಃ ಶಿವಾಯಃ || || ಶಿವೋಹಂ ||

Google play

ಗೂಗಲ್ ಪ್ಲೇಗೆ ಭೇಟಿ ನೀಡಿ ಅಥವಾ
ಕ್ಯುಆರ್ ಕೋಡನ್ನು ಸ್ಕ್ಯಾನ್ ಮಾಡಿ ಎಐಆರ್ ಅವರ ಆಪ್
ಮೂಲಕ ಅವರ ಪುಸ್ತಕಗಳನ್ನು ಡೌನ್ಲೋಡ್ ಮಾಡಿಕೊಳ್ಳಿ.
www.air.ind.in / air@air.ind.in

ಎಐಆರ್

ಕೇಳು, ಪರೀಕ್ಷಿಸು, ಅರಿತುಕೋ
ಎಐಆರ್ ಇನ್ಸ್ಟಿಟ್ಯೂಟ್ ಆಫ್ ರಿಯಲೈಸೇಷನ್

# ಕರ್ಮ

ನೀವು ಟೊಮ್ಯಾಟೋವನ್ನು ಬಿತ್ತಿದರೆ ಮಾವಿನ ಹಣ್ಣಿನ ಫಲವನ್ನು ಪಡೆಯಲು ಸಾಧ್ಯವೇ? ಖಂಡಿತಾ ಸಾಧ್ಯವಿಲ್ಲ. ಅದು ಹೇಗೆ ಸಾಧ್ಯವಾಗುತ್ತದೆ? ನೀವು ಬಿತ್ತಿದ್ದಷ್ಟನ್ನೆ ಬೆಳೆಯಬಲ್ಲಿರಿ. ಇದು ಕರ್ಮದ ನಿಯಮ.

ಈ ಲೋಕದ ನಿಯಮವನ್ನು ಎಲ್ಲರೂ ಬಲ್ಲರು. ಪ್ರತಿ ಕ್ರಿಯೆಗೂ ಪ್ರತಿಕ್ರಿಯೆ ಇರುತ್ತದೆಂದು ಈ ನಿಯಮ ಹೇಳುತ್ತದೆ. ನೀವು ಕೊಟ್ಟಷ್ಟನ್ನೇ ಮತ್ತೆ ಹಿಂತಿರುಗಿ ಪಡೆಯಬಲ್ಲಿರಿ. ಜಗತ್ತು ತಿರುಗುತಟ್ಟೆಯಂತೆ ಕಾರ್ಯನಿರ್ವಹಿಸುತ್ತದೆ. ಇಲ್ಲಿಂದ ಹೋದದ್ದು ಮತ್ತೆ ಇಲ್ಲಿಗೇ ಹಿಂತಿರುಗಬೇಕಲ್ಲವೆ?

ಅನೇಕರಿಗೆ ಈ ಕರ್ಮದ ನಿಯಮಗಳ ಬಗ್ಗೆ ತಿಳಿದೇ ಇಲ್ಲ. ಅವರಿಗೆ ಈ ನಿಯಮಗಳ ಬಗ್ಗೆ ತಿಳಿವಳಿಕೆ ಇಲ್ಲದಿರುವುದರಿಂದ ಅವರು ತಮ್ಮ ಬಾಳನ್ನು ನೈತಿಕವಾಗಿ ಬಾಳುವುದಿಲ್ಲ. ಆದರೆ ನಂತರ ಈ ತಪ್ಪಿಗಾಗಿ ಅವರು ತಮ್ಮ ಕರ್ಮವನ್ನು ಅನುಭವಿಸಬೇಕಾಗುತ್ತದೆ. ಈ ನಿಯಮವನ್ನು ಮೀರಿ ಹೋಗಲಾಗುವುದಿಲ್ಲ. ಇದನ್ನು ತಪ್ಪಿಸಿಕೊಳ್ಳಲು ಸಾಧ್ಯವಿಲ್ಲವಾದರೂ ಅದರೊಂದಿಗೆ ಬದುಕಲು ಸಾಧ್ಯವಿದೆ. ಅದು ಹೇಗೆ ಕೆಲಸ ಮಾಡುತ್ತದೆಂಬುದನ್ನು ನೀವು ಅರ್ಥ ಮಾಡಿಕೊಳ್ಳಬಹುದು. ನಾವು ಮಾಡುವ ಒಳ್ಳೆಯ ಮತ್ತು ಕೆಟ್ಟ ಕ್ರಿಯೆಗಳಿಗೆ ತಕ್ಕ ಪ್ರತಿಫಲವನ್ನು ನಾವು ಈ ಜನ್ಮದಲ್ಲಷ್ಟೇ ಅಲ್ಲ ಮುಂದಿನ ಜನ್ಮದಲ್ಲೂ ಅನುಭವಿಸುತ್ತೇವೆ.

ಸಾವಿನ ನಂತರ ಮತ್ತೆ ನಾವು ಜನ್ಮ ತಾಳುತ್ತೇವೆಯೇ? ಯಾರು ತಾವು ದೇಹ, ಮನಸ್ಸು ಮತ್ತು ಅಹಂ ಎಂದು ತಿಳಿಯುತ್ತಾರೋ ಅವರು ಸಾವಿನ ನಂತರ ಮರುಹುಟ್ಟು ಪಡೆಯುತ್ತಾರೆ. ಕರ್ಮವನ್ನು ನೀಗಿಕೊಳ್ಳಲು ಯಾರು ತಮ್ಮ ಬಗ್ಗೆ ಮತ್ತು ದೇವರ ಬಗ್ಗೆ ಸತ್ಯವನ್ನು ಅರಿತು ನಡೆದುಕೊಳ್ಳುತ್ತಾರೋ ಅಂತಹ ಕೆಲವೇ ಕೆಲವರು ಮಾತ್ರ ಕರ್ಮ ಮತ್ತು ಪುನರ್ಜನ್ಮವನ್ನು ಮೀರುವ

ಅದೃಷ್ಟಶಾಲಿಗಳಾಗಿರುತ್ತಾರೆ.

‘ಕರ್ಮದ ಬಗ್ಗೆ ಸಂಪೂರ್ಣ ತಿಳಿವಳಿಕೆ’ ಪುಸ್ತಕವು ನಿಮಗೆ ಕರ್ಮದ ಬಗ್ಗೆ ಸಂಪೂರ್ಣವಾಗಿ ತಿಳಿಸಿಕೊಡುತ್ತದೆ. ಆ ಮೂಲಕ ನೀವು ನಿಮ್ಮ ಬದುಕನ್ನು ಅರ್ಥಪೂರ್ಣವಾಗಿ ಬದುಕಲು ನೆರವಾಗುತ್ತದೆ. ಹಾಗೂ ಹುಟ್ಟು, ಸಾವು, ಮರುಹುಟ್ಟುಗಳ ಚಕ್ರದಿಂದ ಬಿಡಿಸಿಕೊಂಡು ಕರ್ಮದಿಂದ ಮುಕ್ತರಾಗುವಂತೆ ಮಾಡುತ್ತದೆ. ನಿಮಗೆ ನಿರಂತರ ಸುಖ, ಶಾಂತಿ ಮತ್ತು ಆನಂದವನ್ನು ಉಂಟುಮಾಡುತ್ತದೆ.

ಲೇಖಕರು

**ಎಐಆರ್**

ಆತ್ಮ ಇನ್ ರವಿ

ISBN 978-93-5346-245-1

**ಎಐಆರ್**

ಕೇಳು, ಪರೀಕ್ಷಿಸು, ಅರಿತುಕೋ

ಎಐಆರ್ ಇನ್ಸ್ಟಿಟ್ಯೂಟ್ ಆಫ್ ರಿಯಲೈಸೇಷನ್

ಕೆಂಪ್ ಫೋರ್ಟ್ ಮಾಲ್, ನಂ 97, ಹಳೇ ಏರ್‌ಪೋರ್ಟ್ ರಸ್ತೆ, ಬೆಂಗಳೂರು- 560 017